ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 21 ಗುರುವಾರ 2022

ಸಂಪುಟ: 43 | ಸಂಚಿಕೆ: 96 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮೂಗೂರು ತ್ರಿಪುರ ಸುಂದರಿ ಸೇರಿದಂತೆ ವಿವಿಧ ದೇವಸ್ಥಾನಗಳಲ್ಲಿ ದರೋಡೆ: ಆರು ಮಂದಿ ಬಂಧನ
ಪುಟ–3

ಕೆಆರ್‌ಎಸ್, ಕಬಿನಿ ಜಲಾಶಯಕ್ಕೆ ಸಿಎಂ ಬೊಮ್ಮಾಯಿ ಬಾಗಿನ ಸಮರ್ಪಣೆ

ರಾಜ್ಯದ ಜನರ ಒಳಿತಿಗಾಗಿ ಪ್ರಾರ್ಥಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಮೈಸೂರು/ಶ್ರೀರಂಗಪಟ್ಟಣ, ಜು.20 (ಆರ್‌ಕೆಬಿ)– ಅವಧಿಗೆ ಮೊದಲೇ ತುಂಬಿ ತುಳುಕುತ್ತಿರುವ ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ ತಾಲೂಕಿನ ಕಬಿನಿ ಹಾಗೂ ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್ ಜಲಾಶಯಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ಬಾಗಿನ ಸಮರ್ಪಿಸಿದರು.

ಬೆಂಗಳೂರಿನಿಂದ ವಿಶೇಷ ಹೆಲಿಕಾಪ್ಟರ್‌ನಲ್ಲಿ ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಅವರು ಪತ್ನಿ ಚೆನ್ನಮ್ಮ ಅವರೊಂದಿಗೆ ಚಾಮುಂಡಿಬೆಟ್ಟಕ್ಕೆ ತೆರಳಿ ಪೂಜೆ ಸಲ್ಲಿಸಿದರು. ನಂತರ ಹೆಲಿಕಾಪ್ಟರ್‌ನಲ್ಲಿ ಕಬಿನಿ ಜಲಾಶಯ, ನಂತರ ಕೆಆರ್‌ಎಸ್ ಜಲಾಶಯಕ್ಕೆ ಆಗಮಿಸಿ, ಧಾರ್ಮಿಕ ವಿಧಿ ವಿಧಾನಗಳೊಂದಿಗೆ ▶ 8ನೇ ಪುಟಕ್ಕೆ





ಆಗಸ್ಟ್‌ನಲ್ಲಿ ಮೈಶುಗರ್ ಕಾರ್ಖಾನೆ ಆರಂಭ

ಸರ್ಕಾರದ ವ್ಯಾಪ್ತಿಯಲ್ಲಿರುವ ಮೈಶುಗರ್ ಕಾರ್ಖಾನೆಯನ್ನು ಯಾವುದೇ ಖಾಸಗಿ ಸಂಸ್ಥೆಗೆ ನೀಡದೇ ಸರ್ಕಾರ ಮುನ್ನಡೆಸಲಿದೆ. ಸಿದ್ಧತೆಗಳು ಪ್ರಾರಂಭವಾಗಿದ್ದು, ಆಗಸ್ಟ್ ಮಾಹೆಯಲ್ಲಿ ಕಬ್ಬು ಅರೆಯುವಿಕೆ ಪ್ರಾರಂಭಿಸಲಾಗುವುದು. ಸಕ್ಕರೆ ಕಾರ್ಖಾನೆ ನಡೆಸಲು ಬೇಕಿರುವ ಇನ್ನೂ ಹೆಚ್ಚಿನ ಅನುದಾನವನ್ನು ಬ್ಯಾಂಕ್ ಹಾಗೂ ಸರ್ಕಾರದಿಂದ ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದರು.

ಮೇಕೆದಾಟು ಯೋಜನೆ: ವಾರದೊಳಗೆ ಅಂತಿಮ ತೀರ್ಪು ಸಾಧ್ಯತೆ

ಶ್ರೀರಂಗಪಟ್ಟಣ, ಜು.20– ಮೇಕೆದಾಟು ಯೋಜನೆಯ ಅಂತಿಮ ತೀರ್ಪು ವಾರದೊಳಗೆ ಹೊರಬೀಳುವ ಸಾಧ್ಯತೆಯಿದೆ. ರಾಜ್ಯ ಸಿದ್ಧಪಡಿಸಿರುವ ಡಿಪಿಆರ್‌ಗೆ ಅನುಮೋದನೆ ದೊರೆತ ಬಳಿಕ ಮೇಕೆದಾಟು ಯೋಜನೆ ಕೈಗೆತ್ತಿಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕೆಆರ್‌ಎಸ್ ಜಲಾಶಯಕ್ಕೆ ಬಾಗಿನ ಸಮರ್ಪಿಸಿದ ಬಳಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಯೋಜನೆಯಿಂದ ಮಂಡ್ಯ ಹಾಗೂ ಬೆಂಗಳೂರು ಜನರ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಸಾಧ್ಯವಾಗುತ್ತದೆ. ಯೋಜನೆಗೆ ಚಾಲನೆ ನೀಡಲು ಬೇಕಾದ ಅನುಮತಿ ಪಡೆದುಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ನೀರಾವರಿ ಯೋಜನೆಗಳ ಮೂಲಕ 15 ಲಕ್ಷ ಎಕರೆ ಭೂಮಿಗೆ ನೀರು ಒದಗಿಸಿದ್ದು, ಇದನ್ನು ಇನ್ನೂ ವಿಸ್ತರಿಸಲಾಗುವುದು. ರೈತರಿಗೆ ಸ್ಪಂದಿಸುವ ನಮ್ಮ ಸರ್ಕಾರ, ಈ ಭಾಗದ ಸಮಗ್ರ ಅಭಿವೃದ್ಧಿಗೆ ಪಕ್ಷಾತೀತವಾಗಿ ಕೆಲಸ ಮಾಡಲಿದೆ. ಸಮರ್ಪಣಾ ಭಾವನೆಯಿಂದ ನಾವು ಕೆಲಸ ಮಾಡಿದಾಗ ಜನ ನಮ್ಮನ್ನು ▶ 8ನೇ ಪುಟಕ್ಕೆ

> ಒಂದು ವರ್ಷದಲ್ಲಿ ಕೃಷ್ಣರಾಜ ಸಾಗರ ತುಂಬಿ 3.50 ಲಕ್ಷಕ್ಕೂ ಹೆಚ್ಚಿನ ಹೆಕ್ಟೇರ್‌ಗೆ ನೀರಾವರಿಯನ್ನು ಒದಗಿಸಲಾಗಿದೆ. ಬೆಂಗಳೂರಿಗೆ 6 ಕೋಟಿಗಿಂತ ಹೆಚ್ಚಿನ ಜನರಿಗೆ ನೀರೊದಗಿಸುತ್ತಿರುವ ಪುಣ್ಯ ಕ್ಷೇತ್ರ ಕೆಆರ್‌ಎಸ್. ರಾಜ್ಯದ ಕೋಟ್ಯಾಂತರ ರೈತರಿಗೆ ನೀರು ನೀಡುತ್ತಿರುವ ಕೆಆರ್‌ಎಸ್ ಜಲಾಶಯವನ್ನು ಮರೆಯಲಾಗದು. ಸಿಎಂ ಬಸವರಾಜ ಬೊಮ್ಮಾಯಿ ಅವರು ನೀರಾವರಿ ಸಚಿವರಾಗಿದ್ದ ಸಂದರ್ಭದಲ್ಲಿ ಅವರದೇ ಆದ ಶೈಲಿಯಲ್ಲಿ ಕೆಆರ್‌ಎಸ್‌ಗೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ವಿಶ್ವೇಶ್ವರಯ್ಯರವರ ಗುರಿ, ಆಶಯದಂತೆ ನಾವೆಲ್ಲರೂ ಬದುಕುತ್ತಿದ್ದೇವೆ.
>
> – ಕೆ.ಗೋಪಾಲಯ್ಯ, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ.

> ಕಾವೇರಿ ಮಾತೆಯ ವ್ಯಾಪ್ತಿಗೆ ಬರುವ ನಾಲ್ಕು ಅಣೆಕಟ್ಟುಗಳು ಸಂಪೂರ್ಣವಾಗಿ ತುಂಬಿರುವುದು ಶುಭ ಸೂಚನೆ. ರೈತರು ಸಂತೋಷವಾಗಿ ಬೆಳೆಯನ್ನು ಬೆಳೆಯುತ್ತಿದ್ದಾರೆ. ಜನರಿಗೆ ಕುಡಿಯಲು ಶುದ್ಧ ನೀರು ನೀಡುತ್ತಿದ್ದೇವೆ. ದುರಾಸೆಯಿಂದ ಕೆರೆ–ಕಟ್ಟೆ ಹಾಗೂ ನದಿಗಳನ್ನು ಒತ್ತುವರಿ ಮಾಡಿದ್ದು, ಪ್ರತಿ ಯೊಬ್ಬರೂ ನೈಸರ್ಗಿಕ ಸಂಪತ್ತನ್ನು ಉಳಿಸಿ ಬೆಳೆಸಿಕೊಂಡು ಹೋಗಲು ನಾವೆಲ್ಲರೂ ಪ್ರಯತ್ನಪಡಬೇಕಾದ ಕಾಲ ಬಂದಿದೆ. ಮುಂದಿನ ಜನಾಂಗಕ್ಕೆ ನೀರನ್ನು ಉಳಿಸುವ ಜವಾಬ್ದಾರಿ ನಮ್ಮ ಮೇಲಿದೆ.
>
> – ಗೋವಿಂದ ಎಂ.ಕಾರಜೋಳ, ಜಲ ಸಂಪನ್ಮೂಲ ಸಚಿವ.

ಕಬಿನಿ ಜಲಾಶಯದಲ್ಲಿ ಈ ವರ್ಷವೇ ಸುಂದರ ಉದ್ಯಾನವನ ನಿರ್ಮಾಣ

ಮೈಸೂರು, ಜು.20(ಆರ್‌ಕೆಬಿ)–ಕಬಿನಿ ಜಲಾಶಯದ ಕೆಳಭಾಗದಲ್ಲಿ ಕೆಆರ್‌ಎಸ್ ಬೃಂದಾವನ ಮಾದರಿಯಲ್ಲಿ ಸುಂದರ ಉದ್ಯಾನವನವನ್ನು ಈ ವರ್ಷವೇ ನಿರ್ಮಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಕಬಿನಿ ಜಲಾಶಯದಲ್ಲಿ ಬಾಗಿನ ಸಮರ್ಪಿಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಉದ್ಯಾನವನವನ್ನು ಸರ್ಕಾರ ನಿರ್ಮಿಸಬೇಕೇ ಅಥವಾ ಸಾರ್ವಜನಿಕ ಸಹಭಾಗಿತ್ವದಲ್ಲಿ (ಪಬ್ಲಿಕ್ ಪ್ರೊವೈಡ್ ಪಾರ್ಟನರ್‌ಶಿಪ್ –ಪಿಪಿಪಿ) ನಲ್ಲಿ ನಿರ್ಮಿಸಬೇಕೇ ಎಂಬ ಬಗ್ಗೆ ಗೊಂದಲವಿದೆ. ಈ ಗೊಂದಲವನ್ನು ಆದಷ್ಟು ಬೇಗ ನಿವಾರಣೆ ಮಾಡಿ, ಈ ವರ್ಷವೇ ಕಬಿನಿ ಜಲಾಶಯದ ಸುಂದರ ಉದ್ಯಾನವನ ನಿರ್ಮಾಣ ಕಾಮಗಾರಿ ಆರಂಭಿಸಲಾಗುವುದು ಎಂದು ಹೇಳಿದರು.

ರಾಜ್ಯದ ಎಲ್ಲಾ ಜಲಾಶಯಗಳು ಜುಲೈ ತಿಂಗಳಲ್ಲಿಯೇ ತುಂಬಿವೆ. ಅದರಲ್ಲೂ ಆಷಾಢ ಮಾಸದಲ್ಲಿ ತುಂಬಿರುವುದು ವಿಶೇಷ. ರೈತರು ಹರ್ಷಚಿತ್ತರಾಗಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಜಲಾನಯನ ಪ್ರದೇಶದ ▶ 8ನೇ ಪುಟಕ್ಕೆ

ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಸಂಬಂಧ
ನಾಳೆ ಸುಪ್ರೀಂಕೋರ್ಟ್‌ಗೆ ಕ್ಷೇತ್ರ ಪುನರ್ ವಿಂಗಡಣೆ, ಹಿಂದುಳಿದ ವರ್ಗದ ಮೀಸಲಾತಿ ವರದಿ ಸಲ್ಲಿಕೆ

ಕೋರ್ಟ್ ನಿರ್ದೇಶನದನ್ವಯ ಚುನಾವಣೆ ಪ್ರಕ್ರಿಯೆ; ಮೈಸೂರಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾಹಿತಿ



ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಬುಧವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾಧ್ಯಮದವರೊಂದಿಗೆ ಮಾತನಾಡಿದರು. ಸಚಿವ ಗೋವಿಂದ ಕಾರಜೋಳ, ಶಾಸಕ ಎಲ್.ನಾಗೇಂದ್ರ, ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಜು.20(ಪಿಎಂ)–ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವ ಸಂಬಂಧ ಜು.22ರಂದು ಸುಪ್ರೀಂ ಕೋರ್ಟ್‌ಗೆ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಹಿಂದುಳಿದ ವರ್ಗಗಳ ಮೀಸಲಾತಿ ವರದಿ ಸಲ್ಲಿಸುತ್ತಿದ್ದು, ಆ ಬಳಿಕ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಚುನಾವಣೆ ಪ್ರಕ್ರಿಯೆ ನಡೆಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬೆಂಗಳೂರಿನಿಂದ ಹೆಲಿಕಾಪ್ಟರ್ ಮೂಲಕ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಬುಧವಾರ ಬೆಳಗ್ಗೆ ಆಗಮಿಸಿದ ಅವರು, ಇದೇ ವೇಳೆ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದರು. ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಚುನಾವಣೆಗಳು ಯಾವಾಗ ನಡೆಯುತ್ತವೆ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಗಳು, ಕ್ಷೇತ್ರ ಪುನರ್ ▶ 8ನೇ ಪುಟಕ್ಕೆ

ಪಾಪ, ಸಿಎಂ ಆಗಬೇಕೆಂಬ ಕನಸಿನ ನಡುವೆ ಡಿಕೆಶಿ ಕೆಪಿಸಿಸಿ ಅಧ್ಯಕ್ಷರಾಗಿಯೇ ಕೆಲಸ ಮಾಡಲಾಗದ ಸ್ಥಿತಿಯಲ್ಲಿದ್ದಾರೆ!

ತಮ್ಮನ್ನು 'ರಿಮೋಟ್ ಕಂಟ್ರೋಲ್ ಸಿಎಂ' ಎಂದು ಟೀಕಿಸಿದ್ದ ಡಿಕೆಶಿಗೆ ಸಿಎಂ ತಿರುಗೇಟು

ಮೈಸೂರು,ಜು.20(ಪಿಎಂ)–ತಮ್ಮನ್ನು ರಿಮೋಟ್ ಕಂಟ್ರೋಲ್ ಮುಖ್ಯಮಂತ್ರಿ ಎಂದು ಟೀಕಿಸಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ತಿರುಗೇಟು ನೀಡಿದ ಬಸವರಾಜ ಬೊಮ್ಮಾಯಿ, ಪಾಪ ಅವರು ಮುಖ್ಯಮಂತ್ರಿ ಆಗಬೇಕೆಂದು ಬಹಳ ವರ್ಷಗಳಿಂದ ಕನಸು ಕಾಣುತ್ತಿದ್ದಾರೆ. ಆದರೆ, ಸದ್ಯ ಕೆಪಿಸಿಸಿ ಅಧ್ಯಕ್ಷರಾಗಿಯೇ ಕೆಲಸ ಮಾಡಲು ಅವರ ಪಕ್ಷದವರೇ ಬಿಡುತ್ತಿಲ್ಲ ಎಂದು ವ್ಯಂಗ್ಯವಾಡಿದರು. ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಬುಧವಾರ, ರಾಜ್ಯ ಬಿಜೆಪಿ ಸರ್ಕಾರ ಭ್ರಷ್ಟಾಚಾರ ಮುಚ್ಚಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ಬಸವರಾಜು ಬೊಮ್ಮಾಯಿ ರಿಮೋಟ್ ಕಂಟ್ರೋಲ್ ಸಿಎಂ ಆಗಿದ್ದಾರೆ ಎಂದು ಡಿ.ಕೆ.ಶಿವಕುಮಾರ್ ಟೀಕಿಸಿರುವ ಬಗ್ಗೆ ಹೀಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದರು. ▶ 8ನೇ ಪುಟಕ್ಕೆ

ಕುಡಿದ ಬಿಲ್ ಕೇಳಿದ್ದಕ್ಕೆ ಬಾರ್ ಸಪ್ಲೆಯರ್ ಹತ್ಯೆ
ಚಾಕುವಿನಿಂದ ಚುಚ್ಚಿ ಪರಾರಿಯಾದ ಟ್ಯಾಕ್ಸಿ ಚಾಲಕ

ಮೈಸೂರು, ಜು.20(ಎಂಕೆ)– ಬಿಲ್ ಹಣ ಕೇಳಿದ ಸಪ್ಲೆಯರ್ ಅನ್ನು ಟ್ಯಾಕ್ಸಿ ಡ್ರೈವರ್ ಚಾಕುವಿನಿಂದ ಎದೆಗೆ ಚುಚ್ಚಿ ಕೊಲೆಗೈದಿರುವ ಘಟನೆ ಮೈಸೂರಿನ ಮಾನಂದವಾಡಿ ರಸ್ತೆಯ ಬಾರೊಂದರಲ್ಲಿ ಬುಧವಾರ ರಾತ್ರಿ ನಡೆದಿದೆ. ಮಂಡ್ಯ ಜಿಲ್ಲೆಯ ಉಮ್ಮಡಹಳ್ಳಿಯ ನಂದನ್ ಕುಮಾರ್(25) ಹತ್ಯೆಗೀಡಾದ ಬಾರ್ ಸಪ್ಲೆಯರ್ ಆಗಿದ್ದು, ಮಹದೇವಪುರ ನಿವಾಸಿ, ಟ್ಯಾಕ್ಸಿ ಡ್ರೈವರ್ ಸುಧಾಕರ್ ಹತ್ಯೆಗೈದಿದ್ದಾನೆ. ಮಾನಂದವಾಡಿ ರಸ್ತೆಯಲ್ಲಿರುವ ನವರಂಗ್ ಬಾರ್‌ಗೆ ಬುಧವಾರ ರಾತ್ರಿ ಬಂದ ಟ್ಯಾಕ್ಸಿ ಡ್ರೈವರ್ ಸುಧಾಕರ್ ಸಾಕಷ್ಟು ಕುಡಿದಿದ್ದಾನೆ. ಕೊನೆಗೆ ತನಗೆ ಸಪ್ಲೆ ಮಾಡಿದ ನಂದನ್‌ಕುಮಾರ್ ಬಿಲ್ ತಂದಿಟ್ಟಾಗ, ಹಣ ಕೊಡುವುದಿಲ್ಲವೆಂದು ಸುಧಾಕರ್ ತಗಾದೆ ಮಾಡಿದ್ದಾನೆ ಎಂದು ಹೇಳಲಾಗಿದೆ. ಈ ವೇಳೆ ಬಾರ್‌ನಲ್ಲಿದ್ದ ಇತರರು ಸಮಾಧಾನಪಡಿಸಿ ಸುಧಾಕರ್‌ನನ್ನು ಹೊರ ಕಳುಹಿಸಿದ್ದಾರೆ. ಇದಾದ ಸುಮಾರು 50 ನಿಮಿಷದಲ್ಲಿ ಮತ್ತೆ ಬಾರ್‌ಗೆ ▶ 8ನೇ ಪುಟಕ್ಕೆ

ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿ ವರ್ಧಂತಿ ಉತ್ಸವ

- ಚಿನ್ನದ ಅಡ್ಡ ಪಲ್ಲಕ್ಕಿಯಲ್ಲಿ ಉತ್ಸವ ಮೂರ್ತಿಯ ಮೆರವಣಿಗೆ ಕಣ್ತುಂಬಿಕೊಂಡ ಭಕ್ತರು
- ಸಿಎಂ ಬಸವರಾಜ ಬೊಮ್ಮಾಯಿ, ರಾಜವಂಶಸ್ಥರು ಸೇರಿದಂತೆ ಹಲವರಿಂದ ಭಕ್ತಿಭಾವ ಸಮರ್ಪಣೆ
- ಸಾವಿರಾರು ಭಕ್ತರಿಂದ ದೇವಿ ದರ್ಶನ, ಹಲವರಿಂದ ಪ್ರಸಾದ ವಿತರಣೆ



ಮೈಸೂರು ರಾಜಮನೆತನದಿಂದ ಪಲ್ಲಕ್ಕಿ ಉತ್ಸವಕ್ಕೆ ಚಾಲನೆ



ಮುಖ್ಯಮಂತ್ರಿ ಬೊಮ್ಮಾಯಿ, ಪತ್ನಿ ಚೆನ್ನಮ್ಮ, ಸಚಿವ ಸಹೋದ್ಯೋಗಿಗಳೊಂದಿಗೆ ದೇವಿ ದರ್ಶನ

ಮೈಸೂರು, ಜು.20(ಎಂಟಿವೈ)– ಕೊರೊನಾ ಹಿನ್ನೆಲೆಯಲ್ಲಿ ಎರಡು ವರ್ಷ ಸರಳವಾಗಿದ್ದ ನಾಡದೇವಿ ಚಾಮುಂಡೇಶ್ವರಿಯ ವರ್ಧಂತಿ ಮಹೋತ್ಸವ ಬುಧವಾರ ವಿಜೃಂಭಣೆಯಿಂದ ನೆರವೇರಿತು. ದೇವಿಯ ಜನ್ಮ ದಿನೋತ್ಸವದ ವಿಶೇಷ ಜಾತ್ರಾ ಮಹೋತ್ಸವದಲ್ಲಿ ಅಪಾರ ಪ್ರಮಾಣದ ಭಕ್ತರು ಪಾಲ್ಗೊಂಡಿದ್ದರು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಾರು ಭಕ್ತರು ಮುಂಜಾನೆಯಿಂದಲೇ ಬೆಟ್ಟಕ್ಕೆ ಆಗಮಿಸಿದ್ದರಿಂದ ವರ್ಧಂತಿ ಮಹೋತ್ಸವಕ್ಕೆ ಜಾತ್ರಾ ಮೆರಗು ಬಂದಿತ್ತು. ಮೆಟ್ಟಿಲುಗಳ ಮೂಲಕ ಹಾಗೂ ಸಾರಿಗೆ ಬಸ್‌ಗಳಲ್ಲಿ ಬೆಟ್ಟಕ್ಕೆ ಬಂದಿದ್ದ ಭಕ್ತರು ದೇವಿ ದರ್ಶನ ಪಡೆಯಲು ಗಂಟೆಗಟ್ಟಲೆ ಕಾದು ನಿಂತರು. ಚಿನ್ನದ ಅಡ್ಡ ಪಲ್ಲಕ್ಕಿಯಲ್ಲಿ ವಿರಾಜಮಾನಳಾಗಿದ್ದ ಬೆಟ್ಟದ ತಾಯಿಯನ್ನು ಅಪಾರ ಸಂಖ್ಯೆ ಭಕ್ತರು ಕಣ್ತುಂಬಿಕೊಂಡು, ಜೈಕಾರ ಹಾಕಿ ಸಂಭ್ರಮಿಸಿದರು. ಆಷಾಢಮಾಸದಲ್ಲಿನ ಕೃಷ್ಣ ಪಕ್ಷದ, ರೇವತಿ ನಕ್ಷತ್ರ ದಿನದಂದು ದೇವಾಲಯದಲ್ಲಿ ದೇವಿಯ ಉತ್ಸವ ಪ್ರತಿಷ್ಠಾಪಿಸಲಾಯಿತು. ▶ 4ನೇ ಪುಟಕ್ಕೆ

ಮೈಸೂರು ಮಿತ್ರ

ಮಾಜಿ ಸಿಎಂ ಕುಮಾರಸ್ವಾಮಿ ನೇತೃತ್ವದಲ್ಲಿ ಜಿ.ಬಿ.ಸರಗೂರಿನಲ್ಲಿ
ನಾಡಪ್ರಭು ಕೆಂಪೇಗೌಡರ ಜಯಂತಿ; ಪ್ರತಿಮೆ ಪ್ರತಿಷ್ಠಾಪನೆ

ಜನರ ಸಂಕಷ್ಟಗಳಿಗೆ ಸ್ಪಂದಿಸುವ ಸಲುವಾಗಿಯೇ ರಾಜಕಾರಣದಲ್ಲಿದ್ದೇನೆ: ಹೆಚ್‌ಡಿಕೆ



ಮೈಸೂರು, ಜು.20(ಎಂಕೆ)– ರಾಜ್ಯದ ಜನರ ಕಷ್ಟಗಳಿಗೆ ಸ್ಪಂದಿಸುವ ಸಲುವಾಗಿ ನಾನು ರಾಜಕಾರಣದಲ್ಲಿ ಇದ್ದೇನೆಯೇ ಹೊರತು ಅಧಿಕಾರದ ಆಸೆಯಿಂದಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಿದರು. ಹೆಚ್.ಡಿ.ಕೋಟೆ ತಾಲೂಕಿನ ಜಿ.ಬಿ. ಸರಗೂರಿನಲ್ಲಿ ಶ್ರೀ ನಾಡಪ್ರಭು ಕೆಂಪೇಗೌಡ ಗಾರೆ ಕೆಲಸಗಾರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ ಕೆಂಪೇಗೌಡರ ಜಯಂತಿ ಆಚರಣೆ ಹಾಗೂ ಪ್ರತಿಮೆ ಅನಾವರಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದ ಜನತೆ ನನ್ನ ಬಗ್ಗೆ ತುಂಬಾ ಪ್ರೀತಿ, ಅಭಿಮಾನ ಇಟ್ಟುಕೊಂಡಿದ್ದಾರೆ. ಅವರ ಕಷ್ಟಗಳಿಗೆ ಸ್ಪಂದಿಸಬೇಕು ಎನ್ನುವ ನಿಟ್ಟಿನಲ್ಲಿ ನಾನು ರಾಜಕಾರಣದಲ್ಲಿ ಇದ್ದೇನೆ. ಪಂಚರತ್ನ ಕಾರ್ಯಕ್ರಮಗಳನ್ನು ರೂಪಿಸಿದ್ದು, ಅದರಂತೆ ಸರ್ಕಾರ ನಡೆಸಿ ಜನರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ದೊರಕಿಸಲಾಗುವುದು ಎಂದು ಭರವಸೆ ನೀಡಿದರು.

ಆದಿ ಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಮಾತನಾಡಿ, ಕೆಂಪೇಗೌಡರ ಆಡಳಿತ, ಅವರ ದೂರದೃಷ್ಟಿತ್ವ, ಬೆಂಗಳೂರನ್ನು ಕಟ್ಟಿ ಬೆಳೆಸಿದ ಪರಿ ಅನನ್ಯ. ಅವರ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡುವ ಮೂಲಕ ಅಂತಹ ಮಹಾ ಚೇತನವನ್ನು ನೆನೆದುಕೊಳ್ಳುತ್ತಿರುವುದು ಒಳ್ಳೆಯ ನಡೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ವೇಳೆ ಚಿತ್ರಕಲಾ ಸ್ಪರ್ಧೆಯಲ್ಲಿ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿದ ಜಿ.ಬಿ.ಸರಗೂರು ಸರ್ಕಾರಿ ಪ್ರೌಢಶಾಲೆಯ ಕಲಾ ಶಿಕ್ಷಕ ಸಂಗೀತ, ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು ಹಾಗೂ ಮುಖ್ಯ ಶಿಕ್ಷಕ ಜೆ.ಹೆಚ್.ಶೋಭಾ ಅವರನ್ನು ಸನ್ಮಾನಿಸಲಾಯಿತು.

ಪೂರ್ಣಕುಂಭ ಸ್ವಾಗತ: ಇದಕ್ಕೂ ಮೊದಲು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರನ್ನು 11ನೇ ಮೈಲಿಕಲ್ಲು ಗೇಟ್‌ನಿಂದ ಜಿ.ಬಿ.ಸರಗೂರು ಮಾರ್ಗವಾಗಿ ಕಾಶಿ ವಿಶ್ವನಾಥ ದೇವಸ್ಥಾನಕ್ಕೆ ಕರೆದುಕೊಂಡು ಬರಲಾಯಿತು. ಅಲ್ಲಿಂದ ವೇದಿಕೆವರೆಗೂ ಪೂರ್ಣಕುಂಭ ಸ್ವಾಗತದೊಂದಿಗೆ ತೆರೆದ ಜೀಪ್‌ನಲ್ಲಿ ಅದ್ಧೂರಿಯಾಗಿ ಬರಮಾಡಿಕೊಳ್ಳಲಾಯಿತು. ಶಾಸಕ ಅಶ್ವಿನ್ ಕುಮಾರ್, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜೆಡಿಎಸ್ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.

50 ಲಕ್ಷ ರೂ. ಅನುದಾನ ಘೋಷಣೆ...

ಜಿ.ಬಿ.ಸರಗೂರಿನ ಕಾಶಿ ವಿಶ್ವನಾಥ ಸಮುದಾಯ ಭವನದ ಕಾಮಗಾರಿ ಅರ್ಧಕ್ಕೆ ನಿಂತಿರುವುದನ್ನು ಗಮನಿಸಿದ ಕುಮಾರಸ್ವಾಮಿ ಅವರು, 50 ಲಕ್ಷ ರೂ. ಅನುದಾನ ನೀಡುವುದಾಗಿ ಘೋಷಣೆ ಮಾಡಿದರು. ಸ್ಥಳದಲ್ಲಿಯೇ ಇದ್ದ ಎಂಎಲ್‌ಸಿ ಮಂಜೇಗೌಡ ಅವರು ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ 10 ಲಕ್ಷ ರೂ. ನೀಡಲು ಸಮ್ಮತಿಸಿದರೆ, ಉಳಿದ 40 ಲಕ್ಷ ರೂ.ಗಳನ್ನು ರಾಜ್ಯಸಭಾ ಸದಸ್ಯರಾದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ನಿಧಿ ಹಾಗೂ ಶಾಸಕರು, ಸಂಸದರ ನಿಧಿಯಿಂದ ಒದಗಿಸುವ ಭರವಸೆ ನೀಡಿದರು.



ಚಾಮುಂಡೇಶ್ವರಿ ಕ್ಷೇತ್ರದ ಧನಗಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾಗಿ ಆಯ್ಕೆಯಾದ ಮಂಚನಾಯಕ ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಬುಧವಾರ ಶಾಸಕ ಜಿ.ಟಿ.ದೇವೇಗೌಡ, ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರೂ ಆದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಹಾಗೂ ಕೋಟೆಹುಂಡಿ ಮಹದೇವು ಅವರನ್ನು ಆತ್ಮೀಯವಾಗಿ ಅಭಿನಂದಿಸಿದರು.

ಫೋರ್ಬ್ಸ್ ಶ್ರೀಮಂತರ ಪಟ್ಟಿ: ಅದಾನಿಗೆ 4ನೇ ಸ್ಥಾನ

ಬೆಂಗಳೂರು, ಜು.20– ಫೋರ್ಬ್ಸ್ ನಿಯತಕಾಲಿಕೆ ಸಿದ್ಧಪಡಿಸುವ, ವಿಶ್ವದ ಶತ ಕೋಟ್ಯಾಧೀಶರ ಪಟ್ಟಿಯಲ್ಲಿ ಅದಾನಿ ಸಮೂಹದ ಅಧ್ಯಕ್ಷ ಗೌತಮ್ ಅದಾನಿ ಅವರು ನಾಲ್ಕನೆಯ ಸ್ಥಾನಕ್ಕೆ ಏರಿದ್ದಾರೆ. ಮೊದಲ ಮೂರು ಸ್ಥಾನಗಳಲ್ಲಿ ಕ್ರಮವಾಗಿ ಇಲಾನ್ ಮಸ್ಕ್ (ಟೆಸ್ಲಾ ಕಂಪನಿಯ ಸಿಇಒ), ಬರ್ನಾರ್ಡ್ ಅರ್ನಾಲ್ಟ್ ಕುಟುಂಬ ಮತ್ತು ಜೆಫ್ ಬೆಜೋಸ್ (ಅಮೆಜಾನ್ ಮುಖ್ಯಸ್ಥ) ಇದ್ದಾರೆ. ನಾಲ್ಕನೆಯ ಸ್ಥಾನದಲ್ಲಿ ಇದ್ದ ಬಿಲ್ ಗೇಟ್ಸ್ ಅವರು ಐದನೆಯ ಸ್ಥಾನಕ್ಕೆ ಕುಸಿದಿದ್ದಾರೆ. ಉದ್ಯಮಿಗಳು ಹೊಂದಿರುವ ಷೇರು ಮೌಲ್ಯದ ಏರಿಳಿತವನ್ನು ಆಧರಿಸಿ ಫೋಬ್ಸ್ ನಿಯತಕಾಲಿಕೆಯು ಈ ಪಟ್ಟಿಯನ್ನು ಸಿದ್ಧಪಡಿಸುತ್ತದೆ. ಷೇರು ಮೌಲ್ಯ ಆಧರಿಸಿ ಉದ್ಯಮಿಗಳ ಸಂಪತ್ತಿನ ಮೌಲ್ಯ ಬದಲಾದಂತೆ, ಅವರ ಸ್ಥಾನವೂ ಬದಲಾಗುವುದಿದೆ.

ಮ್ಯೂಸಿಕಲ್ ಚೇರ್; ಮೇಯರ್ ಮುಜುಗರ!



ಕೆಆರ್‌ಎಸ್, ಜು.20–ವೇದಿಕೆಯಲ್ಲೊಂದು ಮ್ಯೂಸಿಕಲ್ ಚೇರ್... ಖಾಲಿಯಿದ್ದ ಚೇರ್ ಶಾಸಕರ ಪಾಲು... ಎರಡನೇ ಸಾಲಿಗೆ ಹೋದ ಮೈಸೂರು ಮೇಯರ್ ಮುಜುಗರ... ವೇದಿಕೆಯಿಂದ ಇಳಿದು ಮೆಟ್ಟಿಲ ಕೆಳಗೆ ಪ್ಲಾಸ್ಟಿಕ್ ಚೇರ್ ಹಾಕಿಸಿಕೊಂಡು ಕುಳಿತ ಸುನಂದಾ ಪಾಲನೇತ್ರಾ... ಇದು ಇಂದು ಮುಖ್ಯಮಂತ್ರಿಗಳು ಭಾಗವಹಿಸಿದ್ದ ಬಾಗಿನ ಅರ್ಪಣೆ ಕಾರ್ಯಕ್ರಮದ ವೇದಿಕೆಯಲ್ಲಿ ನಡೆದ ವಿಶೇಷ ವಿದ್ಯಮಾನಗಳು.

ಕೆಆರ್‌ಎಸ್ ತುಂಬಿದ್ದರಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪತ್ನಿ ಸಮೇತರಾಗಿ ಇಂದು ಬೆಳಗ್ಗೆ ಕೆಆರ್‌ಎಸ್ ಜಲಾಶಯಕ್ಕೆ ಬಾಗಿನ ಅರ್ಪಿಸಿದರು. ನಂತರದ ಕಾರ್ಯಕ್ರಮಕ್ಕೆ ಗಣ್ಯರೆಲ್ಲರೂ ವೇದಿಕೆ ಹತ್ತಿ ಆಸನಗಳಲ್ಲಿ ಕುಳಿತುಕೊಳ್ಳಲಾರಂಭಿಸಿದರು. ಮೈಸೂರು ಮೇಯರ್ ಸುನಂದಾ ಪಾಲನೇತ್ರಾ ಅವರು ವೇದಿಕೆ ಹತ್ತಿದ್ದಾಗ ಮುಂದಿನ ಸಾಲಿನಲ್ಲಿ ಕೇವಲ ಒಂದೇ ಒಂದು ಕುರ್ಚಿ ಖಾಲಿ ಇತ್ತು. ಆ ಕುರ್ಚಿಯಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಹೋಗಿ ಕುಳಿತಾಗ ಮೇಯರ್‌ಗೆ ಮುಂದಿನ ಸಾಲಿನಲ್ಲಿ ಕುರ್ಚಿ ಇಲ್ಲದಂತಾಯಿತು. ಆಗ ಅಧಿಕಾರಿಗಳು ಎರಡನೇ ಸಾಲಿನಲ್ಲಿ ಕುಳಿತುಕೊಳ್ಳುವಂತೆ ಮೇಯರ್‌ಗೆ ಸೂಚಿಸಿದ್ದರು.

ಆಗ ಮೇಯರ್ ತನಗೆ ಮೊದಲ ಸಾಲಿನಲ್ಲೇ ಅವಕಾಶ ಕಲ್ಪಿಸಬೇಕೆಂದು ಕೇಳಿದರು ಎನ್ನಲಾಗಿದ್ದು, ಅಧಿಕಾರಿಗಳು ಮುಂದಿನ ಸಾಲನ್ನು ಸಚಿವರು, ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರಿಗೆ ಮಾತ್ರ ಮೀಸಲಿಡಲಾಗಿದ್ದು, ಎರಡನೇ ಸಾಲಿನಲ್ಲಿ ಕುಳಿತುಕೊಳ್ಳುವಂತೆ ಮನವಿ ಮಾಡಿದ್ದರು ಎನ್ನಲಾಗಿದೆ. ಕೆಲ ನಿಮಿಷ ಎರಡನೇ ಸಾಲಿನಲ್ಲಿ ಆಸೀನರಾದ ಮೇಯರ್, ನಂತರ ತಮ್ಮ ಸಹಾಯಕರನ್ನು ಕರೆದು ಪ್ಲಾಸ್ಟಿಕ್ ಚೇರ್ ತರುವಂತೆ ಹೇಳಿ ಮೆಟ್ಟಿಲಿನ ಕೆಳಗೆ ಕಾವೇರಿ ಪ್ರತಿಮೆ ಬಳಿ ಏಕಾಂಗಿಯಾಗಿ ಕುಳಿತರು.

ಇದನ್ನು ಗಮನಿಸಿದ ಡಿವೈಎಸ್‌ಪಿ ಸಂದೇಶ್‌ಕುಮಾರ್ ಅಧಿಕಾರಿಗಳ ಗಮನಕ್ಕೆ ತಂದಾಗ ಪಾಂಡವಪುರ ಉಪವಿಭಾಗಾಧಿಕಾರಿ ಶಿವನಂದಮೂರ್ತಿ ಮತ್ತು ಕಾವೇರಿ ನೀರಾವರಿ ನಿಗಮದ ಸಹಾಯಕ ಕಾರ್ಯಪಾಲಕ ಅಭಿಯಂತರ ಫಾರೂಖ್ ಅಹಮ್ಮದ್ ಅಬೂ ಅವರು ಆಗಮಿಸಿ ವೇದಿಕೆ ಮೇಲೆ ಬರುವಂತೆ ಸುನಂದಾ ಪಾಲನೇತ್ರಾ ಅವರನ್ನು ಕೋರಿದರಾದರೂ ಮೇಯರ್ ವೇದಿಕೆ ಹತ್ತಲು ನಿರಾಕರಿಸಿದರು. ಕಾರ್ಯಕ್ರಮ ಮುಗಿಯುವವರೆಗೂ ಮೊಬೈಲ್ ನೋಡುತ್ತಾ ಅಲ್ಲೇ ಕುಳಿತು, ನಂತರ ನಿರ್ಗಮಿಸಿದರು.

ಈ ಕುರಿತು 'ಮೈಸೂರುಮಿತ್ರ'ನಿಗೆ ಪ್ರತಿಕ್ರಿಯಿಸಿದ ಅಧಿಕಾರಿಯೊಬ್ಬರು, ಶಿಷ್ಟಾಚಾರದಂತೆ ವೇದಿಕೆಯ ಮುಂದಿನ ಸಾಲಿನಲ್ಲಿ ಮುಖ್ಯಮಂತ್ರಿಗಳು, ಸಚಿವರು ಹಾಗೂ ಸ್ಥಳೀಯ ಶಾಸಕರಿಗೆ ಅವಕಾಶ ನೀಡಿ ಇನ್ನುಳಿದ ಗಣ್ಯರಿಗೆ ನಂತರದ ಸಾಲಿನಲ್ಲಿ ಕುಳಿತುಕೊಳ್ಳಲು ಅವಕಾಶ ನೀಡಲಾಗಿತ್ತು. ಆದರೆ, ಸುನಂದಾ ಪಾಲನೇತ್ರಾ ಅವರು ಮುಂದಿನ ಸಾಲಿನಲ್ಲಿಯೇ ಅವಕಾಶ ನೀಡುವಂತೆ ಕೇಳಿದರು. ಇದು ಸಾಧ್ಯವಿಲ್ಲ. ಶಿಷ್ಟಾಚಾರದಂತೆ ನಡೆದುಕೊಳ್ಳುತ್ತಿದ್ದೇವೆ. ದಯವಿಟ್ಟು ಸಹಕರಿಸಿ ಎಂದು ಹೇಳಿದರೂ ಬೇಸರ ಮಾಡಿಕೊಂಡು ವೇದಿಕೆಯಿಂದ ಹೊರ ನಡೆದರು ಎಂದರು.

ದಸರೆಯಲ್ಲೂ...! ಮೈಸೂರು ದಸರಾ ಸಂದರ್ಭದಲ್ಲಿ ಅರಮನೆ ಆವರಣದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಮೇಯರ್ ಆಗಮಿಸಿದಾಗ ಮುಂದಿನ ಸಾಲಿನಲ್ಲಿ ಅವರಿಗೆ ಕುರ್ಚಿಯೇ ಸಿಗಲಿಲ್ಲ. ಇದರಿಂದ ಅಸಮಾಧಾನಗೊಂಡ ಅವರು ಸ್ವಲ್ಪಹೊತ್ತು ಮಾಧ್ಯಮದವರ ಗ್ಯಾಲರಿ ಯಲ್ಲಿ ಕುಳಿತು ನಂತರ ಕಣ್ಣೀರಾಕುತ್ತಾ ನಿರ್ಗಮಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದಿದ್ದ ಅಂತಾರಾಷ್ಟ್ರೀಯ ಯೋಗ ಪೂರ್ವಭಾವಿ ಸಭೆಗೂ ತನ್ನನ್ನು ಆಹ್ವಾನಿಸಿಲ್ಲವೆಂದು ಸುನಂದಾ ಪಾಲನೇತ್ರಾ ಅಸಮಾಧಾನಗೊಂಡಿದ್ದನ್ನು ಸ್ಮರಿಸಬಹುದು.

> ನನಗೆ ಆರೋಗ್ಯ ಸರಿಯಿಲ್ಲದ ಕಾರಣ ವೇದಿಕೆಯ ಮೇಲೆ ಕುಳಿತುಕೊಳ್ಳಲು ಆಗುತ್ತಿರಲಿಲ್ಲ. ಹಾಗಾಗಿ, ನಾನೇ ಸ್ವತಃ ವೇದಿಕೆಯಿಂದ ಕೆಳಗಿಳಿದು ಕಾವೇರಿ ಪ್ರತಿಮೆ ಬಳಿ ಕುಳಿತುಕೊಂಡು ಕಾರ್ಯಕ್ರಮ ವೀಕ್ಷಿಸಿದ್ದೇನೆ. ನನಗೆ ಯಾವುದೇ ಅಸಮಾದಾನವಿಲ್ಲ. –ಸುನಂದಾ ಪಾಲನೇತ್ರಾ, ಮೈಸೂರು ಮೇಯರ್.

> ಪ್ರೋಟೋ ಕಾಲ್ ಪ್ರಕಾರ ವೇದಿಕೆಯಲ್ಲಿ ಆಸನಗಳನ್ನು ಮೀಸಲಿಡಲಾಗಿತ್ತು. ಅದರಂತೆ ಮುಂದಿನ ಸಾಲಿನಲ್ಲಿ ಮುಖ್ಯಮಂತ್ರಿಗಳು, ಸಚಿವರು, ಶಾಸಕರು, ವಿಧಾನಪರಿಷತ್ ಸದಸ್ಯರಿಗೆ ಅವಕಾಶ ಕಲ್ಪಿಸಲಾಗಿತ್ತು. ಮೈಸೂರು ಮೇಯರ್ ತಮಗೆ ಮೀಸಲಿರಿಸಿದ್ದ ಎರಡನೇ ಸಾಲಿನ ಆಸನದಲ್ಲಿ ಸ್ವಲ್ಪ ಹೊತ್ತು ಕುಳಿತಿದ್ದು, ನಂತರ ಕೆಳಗಿಳಿದು ಕಾವೇರಿ ಪ್ರತಿಮೆ ಬಳಿ ಪ್ಲಾಸ್ಟಿಕ್ ಚೇರ್‌ನಲ್ಲಿ ಕುಳಿತುಕೊಂಡಿದ್ದರು. ನಾನು ಮತ್ತು ಉಪ ವಿಭಾಗಾಧಿಕಾರಿಗಳು ಅವರನ್ನು ಮತ್ತೆ ವೇದಿಕೆಗೆ ಬರುವಂತೆ ಕೋರಿಕೊಂಡಾಗ ಅವರು, ವೇದಿಕೆಯಲ್ಲಿ ಸರಿಯಾಗಿ ಗಾಳಿಯಾಡುತ್ತಿಲ್ಲ. ನನಗೆ ತಲೆ ಸುತ್ತು ಬರುತ್ತಿದೆ ಎಂದು ಹೇಳಿ, ವೇದಿಕೆಗೆ ಬರಲು ನಿರಾಕರಿಸಿದರು. ಮುಂದಿನ ಸಾಲಿನಲ್ಲಿ ಅವಕಾಶ ಸಿಗಲಿಲ್ಲ ಎಂಬ ಕಾರಣಕ್ಕೆ ಅವರು ಅಸಮಾಧಾನಗೊಂಡಿದ್ದಾರೆ ಎಂದು ಅನ್ನಿಸುತ್ತಿಲ್ಲ. ಬಾಗಿನ ಅರ್ಪಣೆ ಕಾರ್ಯಕ್ರಮಕ್ಕೆ ಬಿಸಿಲಲ್ಲಿ ನಿಂತಿದ್ದರಿಂದ ಅವರಿಗೆ ಸ್ವಲ್ಪ ಆಯಾಸವಾಗಿರಬಹುದು. – ಫಾರುಖ್ ಅಹಮ್ಮದ್ ಅಬೂ, ಎಇಇ, ಕಾವೇರಿ ನೀರಾವರಿ ನಿಗಮ.

ಜಯಚಾಮರಾಜ ಒಡೆಯರ್ 104ನೇ ಜನ್ಮ ದಿನೋತ್ಸವ



ಮೈಸೂರು, ಜು.20(ಎಂಕೆ)– ನಗರದ ಗೋಕುಲಂ 3ನೇ ಹಂತದಲ್ಲಿರುವ ಶ್ರೀ ಕೃಷ್ಣ ಗಾನಸಭಾದಲ್ಲಿ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರ 104ನೇ ಜನ್ಮ ಮಹೋತ್ಸವ ಆಚರಿಸಲಾಯಿತು.

ಶ್ರೀ ಜಯಚಾಮರಾಜ ಒಡೆಯರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ಸಂಗೀತ ವಿದ್ವಾನ್ ಆರ್.ಕೆ.ಪದ್ಮನಾಭ ಮಾತನಾಡಿ, ಮಹಾರಾಜ ಜಯಚಾಮರಾಜ ಒಡೆಯರ್ ಅವರು, ಸಂಗೀತ ಎಂದರೆ ಮೈಸೂರು ಅರಮನೆ ಎನ್ನುವಂತಹ ಕಾಲ ಸೃಷ್ಟಿ ಮಾಡಿದ್ದರು. ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಶ್ರೀಮಂತಗೊಳಿಸಿದ ಮಹಾನ್ ವಾಗ್ಗೇಯಕಾರರು ಎಂದು ಸ್ಮರಿಸಿದರು. ಜಯಚಾಮರಾಜ ಒಡೆಯರ್ ಅವರು ರಚಿಸಿದ ಕೃತಿಗಳು ಕನ್ನಡದಲ್ಲಷ್ಟೇ ಅಲ್ಲದೆ ಹಲವು ಭಾಷೆಗಳಲ್ಲಿ ಹಾಡುಗಳಾಗಿ ಹೊರಹೊಮ್ಮಿವೆ. ಪಿಯಾನೋದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ನುಡಿಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದ ಅವರು, ಕನ್ನಡ ಪ್ರೇಮಿಯಾಗಿದ್ದರು ಎಂದು ಬಣ್ಣಿಸಿದರು. ಬಳಿಕ ಸಂಗೀತ ಕಾರ್ಯಕ್ರಮ ನೀಡಿದ ವಿದ್ವಾನ್ ಆರ್.ಕೆ. ಪದ್ಮನಾಭ ಸಂಗೀತ ಪ್ರಿಯರ ಮನಗೆದ್ದರು. ಪಿಟೀಲು ವಾದನದಲ್ಲಿ ವಿದ್ವಾನ್ ಸಿ.ಎನ್. ಚಂದ್ರಶೇಖರ್, ಮೃದಂಗದಲ್ಲಿ ವಿದ್ವಾನ್ ಚೆಲುವರಾಜ್ ಹಾಗೂ ಘಟಂನಲ್ಲಿ ವಿದ್ವಾನ್ ಜಿ.ಎಸ್.ರಾಮಾ ನುಜಂ ಉತ್ತಮ ಸಹಕಾರ ನೀಡಿದರು. ನಗರ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು, ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಶ್ರೀಧರರಾಜೇ ಅರಸು ಉಪಸ್ಥಿತರಿದ್ದರು.

ಮುಖ್ಯಮಂತ್ರಿಗಳ ಬಾಗಿನ ಕಾರ್ಯಕ್ರಮಕ್ಕೆ ತೆರಳುತ್ತಿದ್ದ ಅಧಿಕಾರಿ ಜೀಪ್ ಡಿಕ್ಕಿ: ಬೈಕ್ ಸವಾರನಿಗೆ ತೀವ್ರ ಗಾಯ



ಮಹೇಶ್



ಮೈಸೂರು, ಜು.20(ಜಿಎ)– ಕಬಿನಿ ಜಲಾಶಯದಲ್ಲಿ ಮುಖ್ಯಮಂತ್ರಿ ಬಾಗಿನ ಕಾರ್ಯಕ್ರಮಕ್ಕೆ ತೆರಳುತ್ತಿದ್ದ ಅಧಿಕಾರಿಯ ಸರ್ಕಾರಿ ಜೀಪ್ ಬೈಕಿಗೆ ಡಿಕ್ಕಿ ಹೊಡೆದಿದ್ದು, ಸೆಕ್ಯುರಿಟಿ ಗಾರ್ಡ್ ಗಂಭೀರವಾಗಿ ಗಾಯಗೊಂಡಿದ್ದಾನೆ ಈ ಘಟನೆ ಮೈಸೂರು–ಹೆಚ್.ಡಿ.ಕೋಟೆ ಮಾರ್ಗಮಧ್ಯೆ ಇರುವ ಕೊಳಗಾಲ ಗ್ರಾಮದ ಬಳಿ ಇಂದು ಸಂಭವಿಸಿದೆ.

ಮೈಸೂರಿನ ಟಿ.ಕೆ. ಲೇಔಟ್‌ನ ಜನತಾ ನಗರ ನಿವಾಸಿ ಮಹೇಶ್(40) ತೀವ್ರವಾಗಿ ಗಾಯಗೊಂಡವರು. ಇವರು ಮೈಸೂರಿನ ಖಾಸಗಿ ಬ್ಯಾಂಕಿನಲ್ಲಿ ಸೆಕ್ಯುರಿಟಿ ಗಾರ್ಡ್ ಆಗಿ ಕಾರ್ಯನಿರ್ವಹಿಸುತ್ತಿದ್ದು, ಕೆಲಸ ನಿಮಿತ್ತ ಹೆಚ್.ಡಿ.ಕೋಟೆಗೆ ಹೋಗಿ ಮೈಸೂರಿಗೆ ಹಿಂದಿರುಗುತ್ತಿರುವ ವೇಳೆಯಲ್ಲಿ ಮುಖ್ಯಮಂತ್ರಿಗಳ ಬಾಗಿನ ಕಾರ್ಯಕ್ರಮಕ್ಕೆ ತೆರಳುತ್ತಿದ್ದ ಸರ್ಕಾರಿ ಜೀಪ್ (ಕೆಎ–01 ಜಿ–1938) ವೇಗವಾಗಿ ಬಂದು ಮಹೇಶ್ (ಕೆಎ–09 ಎಚ್‌ಎಕ್ಸ್–6133) ಬೈಕಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಅವರಿಗೆ ತೀವ್ರವಾಗಿ ಪೆಟ್ಟಾಗಿದ್ದು, ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಆದರೆ, ಅವರ ಸ್ಥಿತಿ ಚಿಂತಾಜನಕವಾಗಿದೆ ಎಂದು ಕುಟುಂಬಸ್ಥರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಈ ಬಾರಿ ದಸರಾಗೆ ಹೊಸ ಆಯಾಮ: ಸಿಎಂ ಭರವಸೆ



ಮೈಸೂರು,ಜು.20(ಎಂಟಿವೈ)–ಕಳೆದ ಎರಡು ವರ್ಷದಿಂದ ಕೊರೊನಾ ಹಾವಳಿಯಿಂದ ಕಳೆಗುಂದಿದ್ದ ನಾಡಹಬ್ಬ ದಸರಾ ಮಹೋ ತ್ಸವವನ್ನು ಈ ಬಾರಿ ಅದ್ಧೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಚಾಮುಂಡೇಶ್ವರಿಯ ವರ್ಧಂತಿ ಮಹೋತ್ಸವದ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟಕ್ಕೆ ಆಗಮಿಸಿ, ದೇವಿ ದರ್ಶನ ಪಡೆದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದಸರಾ ಮಹೋತ್ಸವದ ಸಂಬಂಧ ನಿನ್ನೆಯಷ್ಟೇ ಉನ್ನತ ಮಟ್ಟದ ಸಭೆ ನಡೆಸಿದ್ದೇವೆ. ಕಳೆದ ಎರಡು ವರ್ಷಗಳಿಂದ ಕೋವಿಡ್ ನಿಂದಾಗಿ ಅದ್ದೂರಿ ದಸರಾ ನಡೆಸಲಾಗಲಿಲ್ಲ. ಸಾಂಪ್ರ ದಾಯಿಕ ಆಚರಣೆಗಷ್ಟೇ ದಸರಾ ಸೀಮಿತಗೊಳಿಸಲಾಗಿತ್ತು. ಈ ಬಾರಿ ಗಜಪಯಣ ಸೇರಿದಂತೆ ಎಲ್ಲಾ ಕಾರ್ಯ ಕ್ರಮವನು ಅದ್ದೂರಿಯಾಗಿ ನಡೆಸುತ್ತೇವೆ. ದಸರಾದಲ್ಲಿ ಹೊಸ ಆಕರ್ಷಣೆಯ ಕಾರ್ಯಕ್ರಮ ಆಯೋಜಿಸಲು ಪ್ರಯತ್ನಿಸಲಾಗುವುದು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಮಾಡಿ ಹೆಚ್ಚಿನ ಪ್ರವಾಸಿಗರನ್ನು ಸೆಳೆಯಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಮೈಸೂರು ಸೇರಿದಂತೆ ಸುತ್ತಮುತ್ತಲಿನ ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಇನ್ನು ಒಂದು ವಾರದಲ್ಲಿ ಮೈಸೂರು ಟೂರಿಸಂ ಸರ್ಕ್ಯೂಟ್ ಘೋಷಣೆ ಮಾಡುತ್ತೇವೆ. ಈ ಬಾರಿಯ ದಸರಾಗೆ ಹೊಸ ಆಯಾಮ ಸಿಗಲಿದೆ. ದಸರಾ ಉದ್ಘಾಟಕರ ಬಗ್ಗೆ ಚರ್ಚೆಯಾಗಿದೆ. ಮುಂದೆ ಎಲ್ಲರ ಅಭಿಪ್ರಾಯ ಪಡೆದು ಸೂಕ್ತ ವ್ಯಕ್ತಿ ಆಯ್ಕೆ ಮಾಡುತ್ತೇವೆ. ದಸರಾ ಪ್ರಾಧಿಕಾರ ರಚನೆ ಬಗ್ಗೆ ಮುಂದಿನ ದಿನಗಳಲ್ಲಿ ತೀರ್ಮಾನ ಮಾಡುತ್ತೇವೆ ಎಂದರು. ಇದಕ್ಕೂ ಮುನ್ನ ಬೆಂಗಳೂರಿಂದ ಹೆಲಿಕಾಪ್ಟರ್‌ನಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪತ್ನಿ ಚನ್ನಮ್ಮ ಅವರೊಂದಿಗೆ ರಸ್ತೆ ಮಾರ್ಗವಾಗಿ ಬೆಂಗಾವಲು ಪಡೆಯೊಂದಿಗೆ ಬೆಟ್ಟಕ್ಕೆ ಆಗಮಿಸಿದರು. ದರ್ಶನ ಪಡೆದ ಬಳಿಕ ಮತ್ತೆ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ತೆರಳಿ, ಅಲ್ಲಿಂದ ಕಬಿನಿ ಜಲಾಶಯಕ್ಕೆ ಬಾಗಿನ ಅರ್ಪಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಹೆಚ್.ಡಿ.ಕೋಟೆಗೆ ಪ್ರಯಾಣ ಬೆಳೆಸಿದರು.

ಗರ್ಭಿಣಿ ಮಹಿಳೆಗೆ ಚಿತ್ರಹಿಂಸೆ: ಪತಿಗೆ 10 ವರ್ಷ ಜೈಲು

ಕುಮ್ಮಕ್ಕು ನೀಡಿದವರಿಗೆ ಒಂದೂವರೆ ವರ್ಷ ಸೆರೆವಾಸ

ಮೈಸೂರು, ಜು.20(ಎಂಕೆ)– ಕುಡಿದು ಪತ್ನಿ ಮೇಲೆ ಹಲ್ಲೆ ಮಾಡಿದ ಗಂಡ ಹಾಗೂ ಹಲ್ಲೆಗೆ ಕುಮ್ಮಕ್ಕು ನೀಡಿದವರಿಗೆ ಶಿಕ್ಷೆ ವಿಧಿಸಿ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಆದೇಶಿಸಿದೆ. ನಂಜನಗೂಡು ತಾಲೂಕಿನ ಹೊಸಕೋಟೆ ಗ್ರಾಮದ ಲೇಟ್ ಶಂಕರಯ್ಯ ಅವರ ಮಗ ಮಹೇಶ್(ಆರೋಪಿ–1), 2015ರ ಫೆ.7ರ ರಾತ್ರಿ 11.30ರಲ್ಲಿ ಕುಡಿದು ಬಂದು ತನ್ನ 3 ತಿಂಗಳ ಗರ್ಭಿಣಿ ಹೆಂಡತಿ ಪುಟ್ಟಸೌಮ್ಯ ಅಲಿಯಾಸ್ ಸುಮಾ ಮೇಲೆ ಹಲ್ಲೆ ಮಾಡಿದ್ದಾನೆ. ಈ ವೇಳೆ ಪುಟ್ಟಸೌಮ್ಯ ಅತ್ತೆ ಚಿಕ್ಕ ಕುಸುಮ(ಆರೋಪಿ–2), ಮೈಸೂರು ತಾಲೂಕು ರಮ್ಮನಹಳ್ಳಿ ಗ್ರಾಮದ ಕುಸುಮಾ (ಆರೋಪಿ–3), ಕಾಂತರಾಜು(ಆರೋಪಿ–4) ಹಾಗೂ ಮಹದೇವಮ್ಮ(ಆರೋಪಿ–5) ಹಲ್ಲೆಗೆ ಕುಮ್ಮಕ್ಕು ನೀಡಿದ್ದಲ್ಲದೆ ಅವಾಚ್ಯ ಪದಗಳಿಂದ ನಿಂದಿಸಿ, ಸಾಯಿಸುವ ಬೆದರಿಕೆ ಹಾಕಿದ್ದಾರೆ. ಈ ಪ್ರಕರಣ ಸಂಬಂಧ ವಿಚಾರಣೆ ನಡೆಸಿದ ಮೈಸೂರಿನ 5ನೇ ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಮಲ್ಲಿಕಾರ್ಜುನ, ಆರೋಪಿ ಮಹೇಶನಿಗೆ 10 ವರ್ಷಗಳ ಕಠಿಣ ಶಿಕ್ಷೆ ಹಾಗೂ 20 ಸಾವಿರ ರೂ. ದಂಡ ವಿಧಿಸಿದರೆ, ಹಲ್ಲೆಗೆ ಕುಮ್ಮಕ್ಕು ನೀಡಿದ ಆರೋಪಿಗಳಿಗಳಿಗೆ (ಆರೋಪಿ–2 ರಿಂದ 5) ಒಂದೂವರೆ ವರ್ಷ ಕಾರಾಗೃಹವಾಸ ಹಾಗೂ ತಲಾ 2 ಸಾವಿರ ರೂ. ದಂಡ ವಿಧಿಸಿ ಆದೇಶಿಸಿದ್ದಾರೆ. ಬದನವಾಳು ಪೊಲೀಸ್ ಠಾಣೆಯ ಅಂದಿನ ಪಿಎಸ್‌ಐ ಶಶಿಕುಮಾರ್ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಸರ್ಕಾರದ ಪರವಾಗಿ ಅಭಿಯೋಜಕರಾದ ನಾಗಪ್ಪ ಸಿ.ನಾಕಮನ್ ವಾದಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.07.2022 ಗುರುವಾರ, ಮಳೆ ನಕ್ಷತ್ರ : ಪುಷ್ಯ, 20.07.2022 ರಿಂದ 02.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ
ತಿಥಿ: ಅಷ್ಟಮೀ, ನಕ್ಷತ್ರ : ಅಶ್ವಿನಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಭಾವಸಾರ ಕ್ಷತ್ರಿಯ ಸೇವಾ ಸಮಿತಿ, ಕೃಷ್ಣರಾಜ ಕ್ಷೇತ್ರ :** ಆಷಾಢ ಮಾಸದ 3ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಶ್ರೀರಂಗಪಟ್ಟಣದ ನಿಮಿಷಾಂಬ ದೇವಸ್ಥಾನದ ಬಳಿ ಇರುವ ಕಾವೇರಿ ನದಿಯಲ್ಲಿ ಪ್ರತಿಷ್ಠಾಪಿತ ಶ್ರೀ ದೇವಿಯ ವಿಸರ್ಜನಾ ಕಾರ್ಯಕ್ರಮ.

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್–ಹೌಸ್ ಅಂಡ್ ಫೆಸ್ಟಿ ವರ್ಲ್ಡ್ :** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೊಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9.30 ಗಂಟೆವರೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರಿಂದ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವಗಳು, ಶ್ರೀ ಚಕ್ರ ಪೂಜೆ, ಮಹಾಗಣಪತಿ ಹೋಮ, ಬೆಳಗ್ಗೆ 7.30ಕ್ಕೆ, ಯೋಗ ವಾಸಿಷ್ಠ ಕುರಿತು ಪ್ರವಚನ, ವಿಶೇಷ ಕಾರ್ಯಕ್ರಮ, ಮಧ್ಯಾಹ್ನ 12ಕ್ಕೆ ತೈಲಾಭಿಷೇಕ, ಅನಘಾಷ್ಟಮೀ ವ್ರತ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಮರಿಮಲ್ಲಪ್ಪ ಪ್ರೌಢಶಾಲೆ :** ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭ, ಅಧ್ಯಕ್ಷತೆ : ಸಂಸ್ಥೆ ಗೌರವಾಧ್ಯಕ್ಷ ಎಸ್. ಪರಮಶಿವಯ್ಯ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ, ಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಸ್ವಾಮಿ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್, ಕ್ಷೇತ್ರ ಶಿಕ್ಷಣಾಧಿಕಾರಿ ಆರ್. ರಾಮಾರಾಧ್ಯ, ಸ್ಥಳ: ಕಲಾಮಂದಿರ, ವಿನೋಬಾ ರಸ್ತೆ, ಬೆಳಗ್ಗೆ 9.30ಕ್ಕೆ.

■ **ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಯುವಕರ ಸೇವಾ ಸಮಿತಿ :** 24ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಬೆಳಗ್ಗೆ 11.30ಕ್ಕೆ ವಿದ್ವಾನ್ ಬಿಳಿಕೆರೆ ಬಿ.ಎಸ್. ಗಂಗಾಧರ ಆಚಾರ್ ಅವರಿಂದ ಶ್ರೀ ದೇವಿಮಹಾತ್ಮೆ ಅಥವಾ ಶ್ರೀ ಚಾಮುಂಡೇಶ್ವರಿ ವೈಭವ ಭಕ್ತಿ ಪ್ರಧಾನ ಹರಿಕಥೆ, ವಾದ್ಯ ವೃಂದ : ವಿದ್ವಾನ್ ವರದರಾಜು, ವಿದ್ವಾನ್ ಜಯಕುಮಾರ್ ಕ್ಯಾಕ್ಷಿಯಾ, ವಿದ್ವಾನ್ ಸೂರ್ಯಪ್ರಸಾದ್, ತಾಳವಾದ್ಯ ನಾಗಣ್ಣ, ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ, ಸ್ಥಳ: ಶಾರದಾದೇವಿನಗರ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸ್ಥೌಲ್ಯಹರ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಸೆಂಟರ್ ಫಾರ್ ಇನ್‌ಕ್ಲೂಸಿವ್ ಗ್ರೋತ್ ಅಂಡ್ ಡೆವಲಪ್‌ಮೆಂಟ್ ರಿಸರ್ಚ್ ಟ್ರಸ್ಟ್, ಮಹಾಜನ ಪ್ರಥಮ ದರ್ಜೆ ಕಾಲೇಜು :** ಆತ್ಮನಿರ್ಭರ ಭಾರತ : ಸಾಮಾಜಿಕ ಮತ್ತು ಸಂವರ್ಧಿತ ಆರ್ಥಿಕತೆ ಮತ್ತು ಆದಿವಾಸಿಗಳ ಅಭಿವೃದ್ಧಿ ಕುರಿತು ಕಾರ್ಯಾಗಾರ, ಉದ್ಘಾಟನೆ : ಮಹಾಜನ ಎಜುಕೇಷನ್ ಸೊಸೈಟಿ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಮುಖ್ಯ ಅತಿಥಿಗಳು : ಭಾರತದ ಮಾನವಶಾಸ್ತ್ರೀಯ ಸಮೀಕ್ಷೆ ಜಂಟಿ ಕಾರ್ಯದರ್ಶಿ ಪ್ರೊ. ಎಂ. ಶಶಿಕುಮಾರ್, ಪ್ರಾಸ್ತಾವಿಕ ಭಾಷಣ: ಸೀನಿಯರ್ ರಿಸರ್ಚ್ ಅಸೋಸಿಯೇಟ್ ಡಾ. ಸಿ. ಮಾದೇಗೌಡ, ಅಧ್ಯಕ್ಷತೆ : ಅಸೋಸಿಯೇಟ್ ಪ್ರೊಫೆಸರ್ ಡಾ. ಡಿ.ಸಿ. ನಂಜುಂಡ, ಗೌರವ ಅತಿಥಿಗಳು : ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ನಿರ್ದೇಶಕ ರಾಜೇಶ್ ಜಿ. ಗೌಡ, ಸ್ಥಳ: ಕಾಲೇಜು ಆವರಣ, ಜಯಲಕ್ಷ್ಮಿಪುರಂ, ಬೆಳಗ್ಗೆ 10.30ಕ್ಕೆ.

■ **ಕ್ರೈಸ್ಟ್ ಕಾಲೇಜು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಹಾಗೂ ಶಿಸ್ತು ಪಾಲನಾ ಸಮಿತಿ :** ಸೈಬರ್ ಕ್ರೈಂ ಅರಿವು ಕುರಿತು ವಿಚಾರ ಸಂಕಿರಣ, ಮುಖ್ಯ ಅತಿಥಿಗಳು : ಪೊಲೀಸ್ ಇನ್ಸ್‌ಪೆಕ್ಟರ್ ಎನ್.ಜಯಕುಮಾರ್, ಸಂಪನ್ಮೂಲ ವ್ಯಕ್ತಿಗಳು : ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಅನಿಲ್ ಕುಮಾರ್, ಸೈಬರ್ ಕ್ರೈಂ ಟ್ರೈನರ್ ಎಸ್. ಲಿಂಗರಾಜು, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಪ್ರಸಾದ್ ಸ್ಕೂಲ್ ಆಫ್ ರಿದಮ್ಸ್ ತಾಳವಾದ್ಯ ಪ್ರತಿಷ್ಠಾನ :** ಡಾ. ಗಂಗೂಬಾಯಿ ಹಾನಗಲ್ ಅವರ 13ನೇ ಸಂಸ್ಮರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ನಿವೃತ್ತಿ ಬ್ಯಾಂಡ್ ಮಾಸ್ಟರ್ ಪಂಡಿತ್ ಎಂ.ಎಸ್. ಜಯರಾಂ, ಹಿಂದೂಸ್ಥಾನಿ ಗಾಯಕರಾದ ಡಾ. ಶಿವಕುಮಾರ್, ವಿದುಷಿ ಶ್ವೇತಾ ಮಡಪ್ಪಾಡಿ, ಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್, ಪ್ರತಿಷ್ಠಾನದ ಸಂಸ್ಥಾಪಕ ಡಾ.ಸಿ.ಆರ್.ರಾಘವೇಂದ್ರ ಪ್ರಸಾದ್, ಸ್ಥಳ: ಪ್ರತಿಷ್ಠಾನದ ಆವರಣ, ರಾಮಾನುಜ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಶ್ರೀ ಕೃಷ್ಣ ಮಿತ್ರ ಮಂಡಳಿ, ಶ್ರೀ ಕೃಷ್ಣ ಟ್ರಸ್ಟ್ :** ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದಂಗಳವರಿಗೆ ಷಷ್ಟ್ಯಬ್ಧಪೂರ್ತಿ ಪ್ರಯುಕ್ತ ಅಭಿವಂದನಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಸಾಹಿತಿ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಮುಖ್ಯ ಅಭ್ಯಾಗತರು : ವಿದ್ವಾನ್ ಬಿ. ಗೋಪಾಲಾಚಾರ್ಯ, ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ, ಸಂಜೆ 5 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಟಿ.ಎನ್. ಅಶ್ವಿನಿ, ವ್ಯಾಖ್ಯಾನ– ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ– ಆಕಾಶವಾಣಿಯೊಂದಿಗೆ", 10.00 ಶ್ರೀರಾಂ ಭಟ್– ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ– ಡಾ.ಬಾಲಮುರಳೀಕೃಷ್ಣ, ಎಂ.ಎಸ್. ಶೀಲ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ. ಮೀನಾ, 1.20 ಭಾವಗೀತೆ–ವೃಂದಗಾನ, 3.00 ರಾಗಲಹರಿ, ಪ್ರಸ್ತುತಿ– ಜಿ. ಪುಷ್ಪಲತಾ, 4.00 ಜಾನಪದ ಸಂಗೀತ–ಮಂಡ್ಯ ಬಸರಾಳಿನ ತಂಬೂರಿ ಜವರಯ್ಯ ಮತ್ತು ಮಡದಿ ಬೋರಮ್ಮ, 4.30 ವಿಜ್ಞಾನ ಭಾರತಿ– ದೂರ ಸಂವೇದಿ ತಂತ್ರಜ್ಞಾನ ಹಾಗೂ ಭೋಗೋಳಿಕ ಮಾಹಿತಿ ವ್ಯವಸ್ಥೆ ಕುರಿತು ಡಾ. ಚಂದನ್ ಎಂ.ಸಿ. ಅವರೊಂದಿಗೆ ಸಂದರ್ಶನ, 6.50 ಕೃಷಿರಂಗ–ಕಿಸಾನ್‌ವಾಣಿ, ನೈಸರ್ಗಿಕವಾಗಿ ತೋಟಗಾರಿಕೆ ಹಾಗೂ ಮೌಲ್ಯವರ್ಧನೆಯಲ್ಲಿನ ಅನುಭವ ಕುರಿತು ಬಿ.ಸಿ.ಮೋಹನ್‌ಕುಮಾರ್ ಅವರೊಂದಿಗೆ ಸಂದರ್ಶನ, 9.00 ಯುವವಾಣಿ–ಭಾರತದ ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಿಶೇಷ ರಸಪ್ರಶ್ನೆ ನಡೆಸಿಕೊಡುತ್ತಾರೆ ನಿವೇದಿತಾ ಹೆಚ್., 10.00 ಕನ್ನಡ ಭಾರತಿ–ಕಥಾ ವಿಹಾರ – ಡಾ. ಪಿ.ಸುಮಾರಾಣಿ ಅವರಿಂದ ಸಣ್ಣಕಥೆ, ಕಾವ್ಯಧಾರೆ–ಸಂತೋಷ್ ಚೊಕ್ಕಾಡಿ ಅವರಿಂದ, 10.30 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿ ಮುದ್ರಣ

ನಾಡಿಗೆ ಒಳಿತಾಗಲಿ...

ದೇವಿಯಲ್ಲಿ ಮೈಸೂರು ರಾಜ ಪರಿವಾರ ಪ್ರಾರ್ಥನೆ



ಮೈಸೂರು,ಜು.20(ಎಂಟಿವೈ)– ನಾಡಿಗೆ ಒಳಿತಾಗಲಿ, ಪ್ರವಾಹದ ಪರಿಸ್ಥಿತಿ ತಗ್ಗಿ, ಸಮವೃಷ್ಟಿ ನೆಲೆಸಲಿ ಎಂದು ಪ್ರಾರ್ಥಿಸಿದ್ದೇವೆ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ತಿಳಿಸಿದ್ದಾರೆ. ಚಿನ್ನದ ಅಡ್ಡಪಲ್ಲಕ್ಕಿ ಉತ್ಸವವನ್ನು ಎಳೆದು ಮೆರವಣಿಗೆಯಲ್ಲಿ ಪಾಲ್ಗೊಂಡ ಬಳಿಕ ಮಾತನಾಡಿದ ಅವರು, ಕಳೆದ ಎರಡು ವರ್ಷದಿಂದ ಸಾಂಪ್ರದಾಯಿಕ ಆಚರಣೆಗಷ್ಟೇ ವರ್ಧಂತಿ ಮಹೋತ್ಸವ ಸೀಮಿತವಾಗಿತ್ತು. ಈ ಬಾರಿ ಅದ್ದೂರಿಯಾಗಿ ವರ್ಧಂತಿ ಮಹೋತ್ಸವ ಆಚರಿಸಿದ್ದು ಸಂತೋಷ ತಂದಿದೆ. ಸಾಕಷ್ಟು ಮಂದಿ ಭಕ್ತರು ಬೇರೆ ಬೇರೆ ಜಿಲ್ಲೆಯಿಂದ ಆಗಮಿಸಿದ್ದಾರೆ. ಸಂಪ್ರದಾಯದಂತೆ ರಾಜಮನೆತನದ ವತಿಯಿಂದ ನಾಡಿಗೆ ಒಳಿತಾಗಲೆಂದು ವಿಶೇಷ ಪ್ರಾರ್ಥನೆ ಸಲ್ಲಿಸಿದ್ದೇವೆ. ಅಕಾಲಿಕ ಮಳೆ, ಪ್ರವಾಹದ ಭೀತಿ ಎಲ್ಲೆಡೆ ನಿರ್ಮಾಣವಾಗಿದೆ. ಪ್ರವಾಹದ ಸ್ಥಿತಿ ಕುಗ್ಗಿ, ಸಮವೃಷ್ಟಿ ವಾತಾವರಣ ನೆಲೆಸಿ ರೈತರು ಸೇರಿದಂತೆ ನಾಡಿನ ಸಮಸ್ತರಿಗೂ ಶುಭವಾಗಲಿ ಎಂದು ಕೋರಿದ್ದೇವೆ ಎಂದರು.

ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಮುಮ್ಮಡಿಕೃಷ್ಣರಾಜ ಒಡೆಯರ್ ಅವರು ಚಾಮುಂಡಿಬೆಟ್ಟದಲ್ಲಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿದ ದಿನವನ್ನು ವರ್ಧಂತಿ ದಿನ ಎಂದು ಆಚರಿಸಿಕೊಂಡು ಬಂದಿದ್ದಾರೆ. ಈ ಹಿಂದೆ ನಡೆಯುತ್ತಿದ್ದಂತೆ ಈ ಬಾರಿ ವರ್ಧಂತಿ ಮಹೋತ್ಸವವನ್ನು ಸಂಭ್ರಮದಿಂದ ಆಚರಿಸುತ್ತಿರುವುದು ಸಂತೋಷ ತಂದಿದೆ. ನಾಡಿನ ಸಮಸ್ತ ಜನತೆಗೆ ಒಳ್ಳೆ ಆರೋಗ್ಯ, ಅಭಿವೃದ್ಧಿ, ಸಂವೃದ್ಧಿ ದಯಪಾಲಿಸಲಿ ಎಂದು ಬೇಡಿಕೊಂಡಿದ್ದೇವೆ. ಅಲ್ಲದೆ, ಉತ್ತಮ ಮಳೆಯಾಗುತ್ತಿರುವುದರಿಂದ ದೇವರಿಗೆ ಧನ್ಯತಾ ಭಾವದಿಂದ ಪೂಜೆ ಸಲ್ಲಿಸಿದ್ದೇವೆ ಎಂದು ವಿವರಿಸಿದರು.

ಜಿಎಸ್‌ಟಿ ಏರಿಕೆ ವಿಚಾರದಲ್ಲಿ ಮಾತೃ ಹೃದಯದ ಪ್ರಧಾನಿ ಮೋದಿ ಶೀಘ್ರವೇ ಸೂಕ್ತ ನಿರ್ಧಾರ

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ

ಮೈಸೂರು,ಜು.20(ಎಂಟಿವೈ)– ಪ್ರಧಾನಿ ನರೇಂದ್ರ ಮೋದಿ ದೇಶದ ನಿಜವಾದ ಮಾತೃ ಹೃದಯ ಹೊಂದಿರುವ ಮಹಾನ್ ನಾಯಕ. ಜಿಎಸ್‌ಟಿ ಸಂಬಂಧ ದೇಶದ ಜನರ ಭಾವನೆಗೆ ಗೌರವ ಕೊಟ್ಟು ಸೂಕ್ತ ನಿರ್ಧಾರ ಪ್ರಕಟಿಸಲಿದ್ದಾರೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದ್ದಾರೆ.




ಚಾಮುಂಡಿಬೆಟ್ಟದಲ್ಲಿ ವರ್ಧಂತಿ ಮಹೋತ್ಸವದ ಹಿನ್ನೆಲೆಯಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಪತ್ರಕರ್ತರು ದಿನಬಳಕೆ ವಸ್ತುಗಳ ಮೇಲೆ ಜಿಎಸ್‌ಟಿ ವಿಧಿಸಿರುವ ಕುರಿತಂತೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಅಗತ್ಯ ವಸ್ತುಗಳ ಮೇಲಿನ ಜಿಎಸ್‌ಟಿ ವಿಧಿಸಿರುವ ಬಗ್ಗೆ ಮೋದಿ ಈಗಾಗಲೇ ಸಭೆ ನಡೆಸಿದ್ದಾರೆ. ಜನರ ಭಾವನೆಗೆ ಸ್ಪಂದಿಸುವ ನಿರ್ಧಾರವನ್ನು ಪ್ರಕಟಿಸಲಿದ್ದಾರೆ. ದೇಶದ ವಿವಿಧೆಡೆ ಜನರು ನಡೆಸುತ್ತಿರುವ ಪ್ರತಿಭಟನೆಯನ್ನು ಗಮನಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳುತ್ತಾರೆ ಎಂದರು.

ನೆರೆ ಪ್ರವಾಹ: ರಾಜ್ಯದಲ್ಲಿ ಪ್ರವಾಹದಿಂದ ಆಗಿರುವ ಬೆಳೆ ನಷ್ಟದ ವರದಿ ಇನ್ನೂ ಕೇಂದ್ರದ ಕೈಸೇರಿಲ್ಲ. ಪ್ರವಾಹ ಸಂಪೂರ್ಣ ತಗ್ಗಿದ ಮೇಲೆ ಬೆಳೆ ನಷ್ಟ ಎಷ್ಟು ಎಂಬುದು ಗೊತ್ತಾಗಲಿದೆ. ಪ್ರವಾಹ ತಗ್ಗುವವರೆಗೂ ಬೆಳೆ ನಷ್ಟದ ಪ್ರಮಾಣ ಅಂದಾಜು ಮಾಡುವುದು ಕಷ್ಟ. ಈಗ ಕೇವಲ ರಸ್ತೆ, ಸೇತುವೆ ನಾಶವಾಗಿರುವ ಬಗ್ಗೆ ಮಾತ್ರ ವರದಿ ತಯಾರಿಸುತ್ತಿದ್ದಾರೆ. ಪ್ರಾವಾಹದಲ್ಲಿ ಹಲವು ಜಿಲ್ಲೆಗಳಲ್ಲಿ ರೈತರು ಬೆಳೆದಿದ್ದ ಬೆಳೆ ಕೊಚ್ಚಿ ಹೋಗಿದೆ. ಅವರಿಗೆ ಮತ್ತೊಮ್ಮೆ ರಸಗೊಬ್ಬರ ಬೀಜ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಿಂದೆ ಕೊಟ್ಟ ರಸ ಗೊಬ್ಬರ ಬೀಜದಲ್ಲಿ ಅವರು ಬೆಳೆದ ಬೆಳೆ ನೀರು ಪಾಲಾಗಿದೆ. ಇದರ ಎಲ್ಲಾ ವರದಿಗಳನ್ನು ತರಿಸಿಕೊಳ್ಳುತ್ತಿದ್ದೇವೆ. ನನ್ನ ಜಿಲ್ಲೆಯಲ್ಲೂ ಸಾಕಷ್ಟು ಬೆಳೆ ಹಾನಿಯಾಗಿದೆ ಎಂದರು.

ವರ್ಧಂತಿ ಹಿನ್ನೆಲೆಯಲ್ಲಿ ಖಾಸಗಿ ವಾಹನಗಳಲ್ಲಿ ಬರುವ ಭಕ್ತರು ಹಾಗೂ ಪ್ರವಾಸಿಗರಿಗಾಗಿ ಲಲಿತಮಹಲ್ ಪ್ಯಾಲೇಸ್ ಮೈದಾನದಿಂದ ಆಯೋಜಿಸಿದ್ದ ಉಚಿತ ಬಸ್‌ನಲ್ಲೇ ಸಚಿವೆ ಶೋಭಾ ಕರಂದ್ಲಾಜೆ ಚಾಮುಂಡಿಬೆಟ್ಟಕ್ಕೆ ಆಗಮಿಸಿದರು. ಬಳಿಕ ದೇವಾಲಯಕ್ಕೆ ತೆರಳಿ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು. ಪ್ರತಿವರ್ಷದ ಆಷಾಢ ಶುಕ್ರವಾರ ಮೆಟ್ಟಿಲು ಮೂಲಕ ಬೆಟ್ಟಕ್ಕೆ ಆಗಮಿಸುತ್ತಿದ್ದ ಶೋಭಾ ಕರಂದ್ಲಾಜೆ ಈ ಬಾರಿ ವರ್ಧಂತಿ ದಿನ ಆಗಮಿಸಿದ್ದರು. ನವರಾತ್ರಿಯಲ್ಲಿ ಬೆಟ್ಟ ಹತ್ತುತ್ತೇನೆ ಎಂದು ಪತ್ರಕರ್ತರಿಗೆ ತಿಳಿಸಿದರು.

ಮೇಕೆದಾಟು; ತಮಿಳುನಾಡಿಗೆ ಸುಪ್ರೀಂನಲ್ಲಿ ಹಿನ್ನಡೆ

ನವದೆಹಲಿ: ಮೇಕೆದಾಟು ಯೋಜನೆ ವಿಚಾರದಲ್ಲಿ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ನಿರ್ಣಯ ಪರಿಗಣಿಸಬಾರದು ಎಂದು ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಅದರ ಅರ್ಜಿಯ ತುರ್ತು ವಿಚಾರಣೆಗೆ ಕೋರ್ಟ್ ನಿರಾಕರಿಸಿ, ವಿಚಾರಣೆಯನ್ನು ಜುಲೈ 26ಕ್ಕೆ ಮುಂದೂಡಿದೆ. ಕರ್ನಾಟಕ ಸರ್ಕಾರದ



ಪ್ರಸ್ತಾಪಿತ ಮೇಕೆದಾಟು ಯೋಜನೆಯ ಯೋಜನಾ ವರದಿಗೆ ಸಂಬಂಧಿಸಿದಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ಯಾವುದೇ ಆದೇಶ ಅಥವಾ ನಿರ್ದೇಶನವನ್ನು ನೀಡ ದಂತೆ ತಮಿಳುನಾಡು ಸರ್ಕಾರ ಕಳೆದ ವಾರ ಅರ್ಜಿ ಸಲ್ಲಿಸಿತ್ತು. ಅರ್ಜಿ ಕುರಿತು ತುರ್ತು ವಿಚಾರಣೆ ನಡೆಸುವಂತೆಯೂ ಮನವಿ ಮಾಡಿಕೊಂಡಿತ್ತು. ಮೇಕೆದಾಟು ಯೋಜನೆ ಕುರಿತು ಚರ್ಚೆ ನಡೆಸಲು ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ಶುಕ್ರ ವಾರ ಸಭೆ ಸೇರಲಿದೆ. ತಮಿಳುನಾಡು ಜಲಸಂಪನ್ಮೂಲ ಸಚಿವ ದೊರೈಮುರುಗನ್ ಸುಪ್ರೀಂಕೋರ್ಟ್‌ನಲ್ಲಿ ರಾಜ್ಯ ಸರ್ಕಾರವನ್ನು ಪ್ರತಿನಿಧಿಸುವ ವಕೀಲರೊಂದಿಗೆ ಚರ್ಚೆ ನಡೆಸಿದ್ದರು. ನ್ಯಾಯಾಲಯದಲ್ಲಿ ನಮ್ಮ ವಾದಗಳು ನ್ಯಾಯೋಚಿತವಾಗಿವೆ ಮತ್ತು ನ್ಯಾಯಾಲಯದಿಂದ ಅನುಕೂಲಕರ ಆದೇಶವನ್ನು ನಾವು ನಿರೀಕ್ಷಿಸುತ್ತಿದ್ದೇವೆ ಎಂದು ಹೇಳಿದ್ದರು.

ದೊರೈಮುರುಗನ್ ಜೂನ್ 22ರಂದು ನವದೆಹಲಿಗೆ ಪಕ್ಷದ ನಾಯಕರ ನಿಯೋಗದೊಂದಿಗೆ ತೆರಳಿದ್ದರು. ಸುಪ್ರೀಂಕೋರ್ಟ್ ಆದೇಶವನ್ನು ಉಲ್ಲಂಘಿಸಿರುವುದರಿಂದ ಅಣೆಕಟ್ಟು ಯೋಜನೆ ಕುರಿತು ಯಾವುದೇ ಚರ್ಚೆಗೆ ಅವಕಾಶ ನೀಡದಂತೆ ಕೇಂದ್ರ ಸಚಿವರನ್ನು ಒತ್ತಾಯಿಸಿದ್ದರು. ಸಾಲಿಸಿಟರ್ ಜನರಲ್, ಮೇ 4ರಂದು ತಮ್ಮ ಅಭಿಪ್ರಾಯದಲ್ಲಿ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ವ್ಯಾಪಕ ಅಧಿಕಾರವನ್ನು ಹೊಂದಿದೆ. ಈ ಪ್ರಾಧಿಕಾರವು ಪ್ರಶ್ನೆಯಲ್ಲಿರುವ ಯೋಜನೆಯ ಬಗ್ಗೆ ಚರ್ಚಿಸಬಹುದು ಮತ್ತು ಅದರ ವರದಿಯನ್ನು ಕೇಂದ್ರ ಜಲ ಆಯೋಗಕ್ಕೆ ನೀಡಬಹುದು ಎಂದು ಹೇಳಿದ್ದಾರೆ.

ಇಂದು ಕೆಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜು.20–ಚೆಸ್ಕಾಂ ವತಿಯಿಂದ ಜು.21ರಂದು ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಳ್ಳಲಾಗಿದ್ದು, ಮಹದೇವಪುರ ಮುಖ್ಯರಸ್ತೆ, ಬೀಡಿ ಕಾಲೋನಿ, ಶಾಂತಿ



ನಗರ, ಕೆ.ಎಂಹುಂಡಿ, ನೆಹರುನಗರ, ಡಿ.ಟಿ.ಎಸ್.ರಾವ್ ನಗರ, ಹಂಚ್ಯಾ, ಸಾತಗಳ್ಳಿ, ಸಾತಗಳ್ಳಿ ಎ ಮತ್ತು ಬಿ ವಲಯ, ದೇವನೂರು ಎ ಮತ್ತು ಬಿ ವಲಯ, ರಾಜೀವ್ ನಗರ 1ನೇ, 2ನೇ ಮತ್ತು 3ನೇ ಹಂತ, ಹುಡ್ಕೋ ಬಡಾವಣೆ, ಮಾದೇಗೌಡ ವೃತ್ತ ಲಿಡ್ಕರ್ ಕಾಲೋನಿ, ಕೆಎಸ್‌ಎಫ್‌ಸಿ ಬಡಾವಣೆ, ಕೈಫ್ ಮಸೀದಿ, ಕಾವೇರಿ ಬಡಾವಣೆ, ಸನ್‌ಫ್ಲ್ಯಾರ್ ಬಡಾವಣೆ, ವಿಟಿಯು ಕಾಲೇಜು, ರಾಜ್‌ಕುಮಾರ್ ರಸ್ತೆ, ಟೀಚರ್ಸ್ ಬಡಾವಣೆ, ಜೆಎಸ್‌ಎಸ್ ಬಡಾವಣೆ, ಕಲ್ಯಾಣಗಿರಿ, ಮಾನಸೀನಗರ, ವಿದ್ಯಾಶಂಕರ ಬಡಾವಣೆ, ಬನ್ನೂರು ರಸ್ತೆ, ವಿದ್ಯಾವಿಕಾಸ್ ಕಾಲೇಜು, ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ಬೆಳಗ್ಗೆ 10.30ರಿಂದ ಮಧ್ಯಾಹ್ನ 2:30ರವರೆಗೆ ವಿದ್ಯುತ್ ಸರಬರಾಜುವಿನಲ್ಲಿ ವ್ಯತ್ಯಯವಾಗಲಿದೆ.

ಪುಟ್ಟನಂಜಮ್ಮ ನಿಧನ



ಚಾಮರಾಜನಗರ,ಜು.20–ನಗರದ ರಾಮಸಮುದ್ರ ಅಂಬೇಡ್ಕರ್ ಬಡಾವಣೆ ನಿವಾಸಿ ನಂಜುಂಡಯ್ಯ ಪತ್ನಿ ಪುಟ್ಟನಂಜಮ್ಮ (70) ಬುಧವಾರ ಸಂಜೆ ನಿಧನರಾದರು. ಮೃತರು ಪತಿ, ನಾಲ್ವರು ಪುತ್ರರು, ಓರ್ವ ಪುತ್ರಿ ಹಾಗೂ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ಥಳೀಯ ರುದ್ರಭೂಮಿಯಲ್ಲಿ ಗುರುವಾರ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ.

ಮೂಗೂರು ತ್ರಿಪುರ ಸುಂದರಿ ಸೇರಿದಂತೆ ವಿವಿಧ ದೇವಸ್ಥಾನಗಳಲ್ಲಿ ದರೋಡೆ: ಆರು ಮಂದಿ ಬಂಧನ

● ಲಕ್ಷಾಂತರ ರೂ. ಚಿನ್ನಾಭರಣ, ನಗದು ವಶಕ್ಕೆ ● ಬಳೆ, ಗ್ಯಾಸ್‌ಸ್ಟೌವ್ ರಿಪೇರಿ ನೆಪದಲ್ಲಿ ಊರೂರು ಸುತ್ತುವವರಿಂದ ಸೂರೆ ● ಆರೋಪಿಗಳು ಮೈಸೂರು, ಚಾ.ನಗರ ಭಾಗದವರು

ಮೈಸೂರು, ಜು.20(ಎಂಕೆ)– ದೇವಸ್ಥಾನಗಳಲ್ಲಿ ದರೋಡೆ ಮಾಡುತ್ತಿದ್ದ 6 ಮಂದಿಯನ್ನು ಬಂಧಿಸಿ, ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ, 4,06,081 ರೂ. ನಗದು, 22 ವಿವಿಧ ಬಗೆಯ ಮೊಬೈಲ್‌ಗಳು ಹಾಗೂ 3 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್ ತಿಳಿಸಿದರು.



ಬುಧವಾರ ಎಸ್‌ಪಿ ಕಚೇರಿ ಸಭಾಂಗಣದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಜು.16ರಂದು ರಾತ್ರಿ ಟಿ.ನರಸೀಪುರ ತಾಲೂಕಿನ ಮೂಗೂರು ಗ್ರಾಮದ ಶ್ರೀ ತ್ರಿಪುರ ಸುಂದರಿ ಅಮ್ಮನ ದೇವಸ್ಥಾನದ ಬಾಗಿಲು ಮುರಿದು ಸುಮಾರು 17.50 ಲಕ್ಷ ರೂ.ಮೌಲ್ಯದ 484 ಗ್ರಾಂ ಚಿನ್ನದ ಆಭರಣಗಳು ಹಾಗೂ ಹುಂಡಿಯಲ್ಲಿದ್ದ ನಗದು ಹಣ ಕಳವು ಮಾಡಿರುವ ಕುರಿತು ಟಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣ ಸಂಬಂಧ ನಂಜನಗೂಡು ಉಪವಿಭಾಗದ ಡಿಎಸ್‌ಪಿ ಗೋವಿಂದರಾಜು ನೇತೃತ್ವದಲ್ಲಿ ವಿಶೇಷ ತಂಡ ರಚಿಸಿ, ಪ್ರಕರಣ ನಡೆದ ಕೆಲವೇ ದಿನಗಳಲ್ಲಿ ಆರೋಪಿಗಳನ್ನು ಚಾಮರಾಜನಗರದಲ್ಲಿ ಬಂಧಿಸಲಾಗಿದೆ ಎಂದರು.

ಬಂಧಿತ ಆರೋಪಿಗಳಿಂದ ಪಲ್ಸರ್ ಬೈಕ್, ಬಜಾಜ್ ಬೈಕ್, ಟಿವಿಎಸ್ ಎಕ್ಸೆಲ್ ಮೊಪೆಡ್, 22 ವಿವಿಧ ಬಗೆಯ ಮೊಬೈಲ್‌ಗಳು, ಹಣ ಬೊಟ್ಟು, 1 ಜೊತೆ ಚಿನ್ನದ ಉಬ್ಬು, ಚಿನ್ನದ ತಾಳಿ(ಚಿಕ್ಕದು), ತಾಳಿ ಸಮೇತ ಚಿನ್ನದ ಉರಿ ಚೈನ್, ಚಿನ್ನದ ಲಕ್ಷ್ಮಿ ಫಲಕ, 3,89,737 ರೂ. ನಗದು ಹಣ ಹಾಗೂ 16,344 ಚಿಲ್ಲರೆ ನಾಣ್ಯಗಳನ್ನು (ಚಿಲ್ಲರೆ ನಾಣ್ಯಗಳು ಸೇರಿ ಒಟ್ಟು–4,06,081 ರೂ.ನಗದು) ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ದೇವಸ್ಥಾನಗಳೇ ಟಾರ್ಗೆಟ್: ಬಳೆ ಮಾರಾಟ, ಗ್ಯಾಸ್‌ಸ್ಟೌವ್ ರಿಪೇರಿ ಸೇರಿದಂತೆ ಇನ್ನಿತರೆ ವಸ್ತುಗಳ ರಿಪೇರಿ ಮಾಡುತ್ತೇವೆ ಎಂದು ಊರೂರ ಮೇಲೆ ತಿರುಗುವ ಈ ಆರೋಪಿಗಳು ದೇವಸ್ಥಾನಗಳನ್ನೇ ಟಾರ್ಗೆಟ್ ಮಾಡಿಕೊಂಡು ಟಿ.ನರಸೀಪುರ ತಾಲೂಕಿನ ಮೂಗೂರು ಗ್ರಾಮದ ಶ್ರೀ ತ್ರಿಪುರ ಸುಂದರಿ ಅಮ್ಮನ ದೇವಸ್ಥಾನದ ಜೊತೆಗೆ ಹಳೇ ತಿರುಮ ಕೂಡಲು ಗ್ರಾಮದ ಚೌಡೇಶ್ವರಿ ದೇವಸ್ಥಾನ, ಯಳಂದೂರು ತಾಲೂಕಿನ ಅಗರ ಗ್ರಾಮದ ಹಿಂಡಿ ಮಾರಮ್ಮ ದೇವಸ್ಥಾನ, ನಂಜನ ಗೂಡು ತಾಲೂಕಿನ ಚಿನ್ನದಗುಡಿ ಹುಂಡಿ ಗ್ರಾಮದ ರಾಮವ್ವ ದೇವಸ್ಥಾನ ಹಾಗೂ ಮೈಸೂರು ನಗರದ ಆಲನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮೋಟಾರ್ ಬೈಕ್ ಹಾಗೂ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮೊಪೆಡ್ ಕಳವು ಮಾಡಿರುವುದಾಗಿ ವಿಚಾರಣೆ ವೇಳೆ ಆರೋಪಿಗಳು ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು.

ಮೈಸೂರು ಹಾಗೂ ಚಾ.ನಗರ ಭಾಗದವರು: ಆರೋಪಿಗಳು ಮೈಸೂರು ಹಾಗೂ ಚಾ.ನಗರ ಭಾಗದವರೆಂದು ತಿಳಿದುಬಂದಿದೆ. ಅದರಲ್ಲೂ ಕೆಲ ಆರೋಪಿಗಳು 2 ತಿಂಗಳ ಹಿಂದೆಯಷ್ಟೇ ಜೈಲಿಂದ ಬಿಡುಗಡೆಯಾಗಿದ್ದು, ಬಂಧಿಸುವ ವೇಳೆ ಪರಾರಿಯಾದ ಓರ್ವ ಆರೋಪಿಗಾಗಿ ಶೋಧ ಕಾರ್ಯ ನಡೆಯುತ್ತಿದೆ. ಆರೋಪಿಗಳು ಒಂದೇ ಕಡೆ ಹೆಚ್ಚಿನ ದಿನಗಳು ಇರದೆ ಒಂದು ಸ್ಥಳದಲ್ಲಿ ಒಂದೆರಡು ತಿಂಗಳ ಕಾಲ ಇದ್ದು, ಬಳಿಕ ಬೇರೆ ಸ್ಥಳಕ್ಕೆ ಹೋಗುತ್ತಿದ್ದರು ಎಂಬ ಮಾಹಿತಿ ಇದೆ. ಕಳ್ಳತನ ಮಾಡುವುದಕ್ಕೂ ಮುನ್ನವೇ ಶ್ರೀ ತ್ರಿಪುರ ಸುಂದರಮ್ಮ ದೇವಸ್ಥಾನಕ್ಕೆ ಭೇಟಿ ನೀಡಿದ್ದು, ಮೊದಲೇ ಪ್ಲಾನ್ ಮಾಡಿಕೊಂಡು ಕಳ್ಳತನ ಮಾಡಿದ್ದಾರೆ ಎಂದು ತಿಳಿದು ಬಂದಿದೆ ಎಂದರು.

ಬಳಸಿಕೊಂಡಿದ್ದಾರೆ: ಕಳವು ಮಾಡಿದ ವಸ್ತುಗಳನ್ನು ತಮ್ಮ ಬಳಿಯೇ ಇಟ್ಟುಕೊಂಡಿದ್ದ ಆರೋಪಿಗಳು ಚಿನ್ನಾಭರಣ ಕರಗಿಸಿ, ಮಾರಾಟ ಮಾಡಿದ್ದಾರೆ ಎಂಬ ಮಾಹಿತಿ ಇದೆ. ಆದರೆ ಕಳ್ಳತನವಾಗಿ ಎರಡ್ಮೂರು ದಿನವಾಗಿದ್ದರಿಂದ ಹೆಚ್ಚಿನ ಆಭರಣಗಳನ್ನು ಮಾರಾಟ ಮಾಡಲು ಸಾಧ್ಯವಾಗಿಲ್ಲ. ಹಳೇ ಪ್ರಕರಣಗಳಲ್ಲಿ ಕದ್ದ ಚಿನ್ನಾಭರಣವನ್ನು ಎಲ್ಲೆಲ್ಲಿ ಮಾರಾಟ ಮಾಡಿದ್ದಾರೆ ಎಂಬ ಮಾಹಿತಿ ಕಲೆ ಹಾಕಲಾಗುತ್ತಿದೆ ಎಂದು ತಿಳಿಸಿದರು.

ಸಿಸಿಟಿವಿ ಕೆಟ್ಟಿತ್ತು: ಕಳ್ಳತನ ನಡೆದ ಮೂಗೂರು ಗ್ರಾಮದ ಶ್ರೀ ತ್ರಿಪುರ ಸುಂದರಮ್ಮ ದೇವಸ್ಥಾನದಲ್ಲಿ ಅಳವಡಿಸಿದ್ದ ಸಿಸಿಟಿವಿ ಕೆಟ್ಟು ಹೋಗಿತ್ತು. ಪ್ರಕರಣದ ನಡೆದ ಬಳಿಕ ಸಿಸಿಟಿವಿ ಇಲ್ಲದ ಹಾಗೂ ಕೆಟ್ಟು ಹೋಗಿರುವ ದೇವಸ್ಥಾನಗಳಿಗೆ ಸಿಸಿಟಿವಿ ಅಳವಡಿಸುವಂತೆ ಮುಜರಾಯಿ ಇಲಾಖೆಗೆ ಪತ್ರ ಬರೆಯಲಾಗಿದೆ. ದೇವಸ್ಥಾನದಲ್ಲಿ ಸೆಕ್ಯೂರಿಟಿ ಇರಲಿಲ್ಲ. ಬಂಧಿತ ಆರೋಪಿಗಳು ಇನ್ನೂ ಎಲ್ಲೆಲ್ಲಿ ಕಳ್ಳತನ ಮಾಡಿದ್ದಾರೆ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ವಿವರಿಸಿದರು.

10 ಸಾವಿರ ಬಹುಮಾನ: ನಂಜನಗೂಡು ಉಪವಿಭಾಗದ ಡಿಎಸ್‌ಪಿ ಗೋವಿಂದರಾಜು ಹಾಗೂ ಟಿ.ನರಸೀಪುರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಕೃಷ್ಣಪ್ಪ ನೇತೃತ್ವದಲ್ಲಿ ತಂಡ ವೈಜ್ಞಾನಿಕವಾಗಿ ಮಾಹಿತಿ ಸಂಗ್ರಹಿಸಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ.

ಈ ತಂಡಕ್ಕೆ 10 ಸಾವಿರ ನಗದು ಬಹುಮಾನ ನೀಡಲಾಗುವುದು ಎಂದು ಘೋಷಣೆ ಮಾಡಿದರು. ಅಪರ ಪೊಲೀಸ್ ಅಧೀಕ್ಷಕಿ ನಂದಿನಿ ಉಪಸ್ಥಿತರಿದ್ದರು.

ಹುಣಸೂರು ಯುವಕನ ಕೊಲೆ, ಬಿಳಿಗುಲಿ ಗ್ರಾಮದ ತಾಯಿ–ಮಗಳ ಕೊಲೆ ಆರೋಪಿಗಳ ಬಂಧನ

ಹುಣಸೂರಿನಲ್ಲಿ ಜು.12ರಂದು ಇನ್‌ಸ್ಟಾಗ್ರಾಂನಲ್ಲಿ ನಿಂದಿಸಿದನೆಂದು ಸ್ನೇಹಿತನನ್ನೇ (ಬೀರೇಶ್) ಚಾಕುವಿನಿಂದ ಇರಿದು ಕೊಲೆ ಮಾಡಿದ್ದ ಪ್ರಕರಣದಲ್ಲಿ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಇರಿತಕ್ಕೆ ಒಳಗಾಗಿದ್ದ ಯುವಕ ನೀಡಿದ ಹೇಳಿಕೆ ಮೇರೆಗೆ ಆರೋಪಿಗಳನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಎಸ್‌ಪಿ ಆರ್.ಚೇತನ್ ಹೇಳಿದರು.

ಹಾಗೆಯೇ ನಂಜನಗೂಡು ತಾಲೂಕಿನ ಬಿಳಿಗೆರೆ ಪೊಲೀಸ್ ಠಾಣೆ ವ್ಯಾಪ್ತಿಯ ಬಿಳುಗುಲಿ ಗ್ರಾಮದಲ್ಲಿ ಜೂ.15ರಂದು ತಾಯಿ–ಮಗಳ ಕೊಲೆ ಪ್ರಕರಣ ಸಂಬಂಧ ಓರ್ವ ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ತಿಳಿಸಿದರು. ಮೊದಲು ತಾಯಿ–ಮಗಳು ಕಾಣೆಯಾಗಿದ್ದಾರೆ ಎಂದು ದೂರು ದಾಖಲಾಗಿತ್ತು. ನಂತರ ಗ್ರಾಮದ ಹೊರಗೆ ತಾಯಿ–ಮಗಳ ಮೃತದೇಹ ಪತ್ತೆಯಾದ ಬಳಿಕ ಮೃತರ ಸಂಬಂಧಿಕರು ಇಬ್ಬರ ಮೇಲೆ ಅನುಮಾನ ವ್ಯಕ್ತಪಡಿಸಿ ನೀಡಿದ ದೂರಿನ ಮೇರೆಗೆ ವಿಚಾರಣೆ ನಡೆಸಿದಾಗ ವೈಯಕ್ತಿಕ ದ್ವೇಷದ ಹಿನ್ನೆಲೆಯಲ್ಲಿ ಕೊಲೆ ಮಾಡಿರುವುದಾಗಿ ತಿಳಿದುಬಂದಿದೆ ಎಂದರು.

ಟೋಲ್‌ಗೇಟ್‌ಗೆ ಅಪ್ಪಳಿಸಿ ಪಲ್ಟಿಯಾದ ಆಂಬುಲೆನ್ಸ್

ನಾಲ್ವರು ಸಾವು, ಐವರಿಗೆ ಗಾಯ




ಬೈಂದೂರು, ಜು.20– ರೋಗಿಯನ್ನು ತುರ್ತು ಚಿಕಿತ್ಸೆಗಾಗಿ ಸಾಗಿಸುತ್ತಿದ್ದ ಖಾಸಗಿ ಆಸ್ಪತ್ರೆಯ ಆಂಬುಲೆನ್ಸ್ ಚಾಲಕನ ನಿಯಂತ್ರಣ ತಪ್ಪಿ ಶಿರೂರು ಟೋಲ್ ಪ್ಲಾಜಾಗೆ ಅಪ್ಪಳಿಸಿದ ಪರಿಣಾಮ ರೋಗಿ ಸಹಿತ ನಾಲ್ವರು ದಾರುಣವಾಗಿ ಮೃತಪಟ್ಟು ಐವರು ತೀವ್ರವಾಗಿ ಗಾಯಗೊಂಡ ಘಟನೆ ಬುಧವಾರ ಸಂಜೆ 4.10ರ ಸುಮಾರಿಗೆ ನಡೆದಿದೆ.

ಮೃತರನ್ನು ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಹಡಿನಬಾಳ ಹಾಡಗೇರಿ ನಿವಾಸಿಗಳಾದ ಲೋಕೇಶ್ ಮಾಧವನಾಯ್ಕ (38), ಜ್ಯೋತಿ ಲೋಕೇಶ್ ನಾಯ್ಕ (32), ಗಜಾನನ ಲಕ್ಷ್ಮಣ ನಾಯ್ಕ (36) ಹಾಗೂ ಮಂಜುನಾಥ ನಾಯ್ಕ (42) ಎಂದು ಗುರುತಿಸಲಾಗಿದೆ. ಆಂಬುಲೆನ್ಸ್‌ನಲ್ಲಿದ್ದ ಗೀತಾನಾಯ್ಕ ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಹೆಚ್ಚಿನ ಚಿಕಿತ್ಸೆಗೆ ಉಡುಪಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಆಂಬುಲೆನ್ಸ್ ಚಾಲಕ ರೋಶನ್ ರೋಡ್ರಿಗ್ರಸ್, ಟೋಲ್ ಸಿಬ್ಬಂದಿ ಸಂಬಾಜಿ ಗೋಲ್ಪಾಡೆ, ಆಂಬುಲೆನ್ಸ್ ವಾಹನದಲ್ಲಿದ್ದ ಗಣೇಶ್ ನಾಯ್ಕ, ಶಶಾಂಕ್‌ನಾಯ್ಕ ಗಾಯಗೊಂಡು ಕುಂದಾಪುರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಉಸಿರಾಟ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದ ಗಜಾನನ ನಾಯ್ಕ ಅವರನ್ನು ಹೊನ್ನಾವರದ ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಲಾಗಿತ್ತು. ಅಲ್ಲಿನ ವೈದ್ಯರ ಸಲಹೆಯಂತೆ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಉಡುಪಿಯ ಖಾಸಗಿ ಆಸ್ಪತ್ರೆಗೆ ಕುಟುಂಬದವರು ಆಂಬುಲೆನ್ಸ್‌ನಲ್ಲಿ ಕರೆದು ಕೊಂಡು ಬರುತ್ತಿದ್ದರೆನ್ನಲಾಗಿದೆ. ಶಿರೂರು ಟೋಲ್ ಬಳಿ ಆಂಬುಲೆನ್ಸ್ ಅತೀವೇಗದಿಂದ ಆಗಮಿಸುತ್ತಿರುವುದನ್ನು ಅರಿತ ಟೋಲ್ ಸಿಬ್ಬಂದಿ, ರಸ್ತೆಗೆ ಅಡ್ಡ ವಿಟ್ಟಿದ್ದ ಫೈಬರ್ ಬ್ಯಾರಿಕೇಡ್ ತೆರವು ಮಾಡಿ, ಟೋಲ್‌ಗೇಟ್‌ನಲ್ಲೇ ಮಲಗಿದ್ದ ದನವೊಂದನ್ನು ಓಡಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಕೊಡಲು ಮುಂದಾದರು. ಆಗಲೇ ವೇಗದಿಂದ ಟೋಲ್ ಬಳಿ ಬಂದ ಆಂಬುಲೆನ್ಸ್ ಚಾಲಕ ರಸ್ತೆಗೆ ಅಡ್ಡಲಾಗಿ ಬಂದ ದನ ಮತ್ತು ಟೋಲ್ ಸಿಬ್ಬಂದಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸುವ ಸಲುವಾಗಿ ಬ್ರೇಕ್ ಹಾಕಿದಾಗ ನಿಯಂತ್ರಣ ತಪ್ಪಿದ ಆಂಬ್ಯುಲೆನ್ಸ್ ಅಡ್ಡಾದಿಡ್ಡಿ ಚಲಿಸಿ ಟೋಲ್ ಸಂಗ್ರಹ ಕೊಠಡಿ, ಬಳಿಕ ಸಮೀಪದ ಕಂಬಕ್ಕೆ ಅಪ್ಪಳಿಸಿ, ಪಲ್ಟಿಯಾಯಿತು. ಫೈಬರ್ ಬ್ಯಾರಿಗೇಡ್ ತೆಗೆಯಲು ಹೋದ ಟೋಲ್ ಸಿಬ್ಬಂದಿ ಮೇಲೆಯೂ ಬಿತ್ತು. ಅಪಘಾತದ ತೀವ್ರತೆಗೆ ಆಂಬುಲೆನ್ಸ್ ಹಿಂಭಾಗದ ಬಾಗಿಲು ತೆರೆದುಕೊಂಡಿದ್ದು ಹಿಂಬದಿ ಕುಳಿತವರು ರಸ್ತೆಗೆ ಎಸೆಯಲ್ಪಟ್ಟರು. ಇದರಿಂದ ಗಂಭೀರವಾಗಿ ಗಾಯಗೊಂಡ ಮೂವರು ಸ್ಥಳದಲ್ಲಿಯೇ ಮೃತಪಟ್ಟರೆ, ಲೋಕೇಶ್ ಆಸ್ಪತ್ರೆಗೆ ಸಾಗಿಸುವ ದಾರಿ ಮಧ್ಯೆ ಮೃತಪಟ್ಟರೆಂದು ತಿಳಿದುಬಂದಿದೆ. ಈ ಬಗ್ಗೆ ಬೈಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಚಾಲಕನ ನಿಯಂತ್ರಣ ತಪ್ಪಿ ಆಂಬುಲೆನ್ಸ್ ಟೋಲ್‌ಗೇಟ್‌ಗೆ ಅಪ್ಪಳಿಸುವ ಭೀಕರ ದೃಶ್ಯ ಅಲ್ಲಿನ ಸಿಸಿಟಿವಿ ಫುಟೇಜ್‌ನಲ್ಲಿ ಸೆರೆಯಾಗಿದ್ದು, ಎಲ್ಲರನ್ನು ಬೆಚ್ಚಿ ಬೀಳಿಸಿದೆ. ಅತೀ ವೇಗದಿಂದ ಬರುವ ಆಂಬುಲೆನ್ಸ್, ನಿಯಂತ್ರಣ ಕಳೆದುಕೊಂಡು ಟೋಲ್ ಕೊಠಡಿ ಹಾಗೂ ಕಂಬಕ್ಕೆ ಅಪ್ಪಳಿಸುವುದು, ಆಂಬುಲೆನ್ಸ್ ಬಾಗಿಲು ತೆರೆದು ಎಸೆಯಲ್ಪಡುವ ಭೀಕರ ದೃಶ್ಯಗಳು ಸಿಸಿಟಿವಿಯಲ್ಲಿ ಕಂಡು ಬಂದಿದೆ. ಅದೇ ರೀತಿ ಅಲ್ಲಿದ್ದ ಜಾನುವಾರುವೊಂದು ದೂರ ಸರಿಯುವುದು ಮತ್ತು ಚಾಲಕ ತಕ್ಷಣ ಬ್ರೇಕ್ ಹಾಕಿದ ಪರಿಣಾಮ ಟೋಲ್ ಕೇಂದ್ರ ಬಳಿಯ ಹೆದ್ದಾರಿಯಲ್ಲಿ ನಿಂತ ಮಳೆ ನೀರಿನಿಂದ ಆಂಬುಲೆನ್ಸ್ ನಿಯಂತ್ರಣ ಕಳೆದುಕೊಂಡು ಪಲ್ಟಿಯಾಗುತ್ತಿರುವುದು ಸಿಸಿಟಿವಿ ಫುಟೇಜ್‌ನಲ್ಲಿ ಸ್ಪಷ್ಟವಾಗಿ ಕಂಡು ಬಂದಿದೆ.

ಶ್ರೀಲಂಕಾ ನೂತನ ಅಧ್ಯಕ್ಷರಾಗಿ ರನಿಲ್ ವಿಕ್ರಮ ಸಿಂಘೆ ಆಯ್ಕೆ

ಕೊಲಂಬೊ, ಜು.20– ಶ್ರೀಲಂಕಾದ ನೂತನ ಅಧ್ಯಕ್ಷರಾಗಿ ರನಿಲ್ ವಿಕ್ರಮಸಿಂಘೆ ಅವರು ಆಯ್ಕೆಯಾಗಿದ್ದಾರೆ. ಬುಧವಾರ ಶ್ರೀಲಂಕಾ ಸಂಸತ್ತಿನಲ್ಲಿ ನಡೆದ ಚುನಾವಣೆಯಲ್ಲಿ ಹಂಗಾಮಿ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ ಶ್ರೀಲಂಕಾದ ನೂತನ ಅಧ್ಯಕ್ಷರಾಗಿ ಅಧಿಕೃತವಾಗಿ ಆಯ್ಕೆಯಾಗಿದ್ದಾರೆ.



ಆರು ಬಾರಿ ಪ್ರಧಾನಿಯಾಗಿದ್ದ ವಿಕ್ರಮ ಸಿಂಘೆ ಅವರು 225 ಸದಸ್ಯರ ಶ್ರೀಲಂಕಾ ಸಂಸತ್‌ನಲ್ಲಿ 134 ಮತಗಳನ್ನು ಪಡೆದು ಜಯಶಾಲಿಯಾಗಿದ್ದಾರೆ. ಅವರ ಸಮೀಪದ ಪ್ರತಿಸ್ಪರ್ಧಿ ಮತ್ತು ಭಿನ್ನಮತೀಯ ಆಡಳಿತ ಪಕ್ಷದ ನಾಯಕ ಡಲ್ಲಾಸ್ ಅಲಹಪ್ಪೆರುಮಾ 82 ಮತಗಳನ್ನು ಪಡೆದಿದ್ದಾರೆ.

ಎಡಪಕ್ಷ ಜನತಾ ವಿಮುಕ್ತಿ ಪೆರಮುನ (ಜೆವಿಪಿ) ನಾಯಕ ಅನುರ ಕುಮಾರ ಡಿಸ್ಸಾನಾಯಕ ಕೇವಲ ಮೂರು ಮತಗಳನ್ನು ಪಡೆದರು. ನವೆಂಬರ್ 2024 ರಲ್ಲಿ ಕೊನೆಗೊಳ್ಳುವ ರಾಜಪಕ್ಸೆ ಅವರ ಉಳಿದ ಅವಧಿಯನ್ನು ಪೂರೈಸಲು ಹೊಸ ಅಧ್ಯಕ್ಷರು ಜನಾದೇಶವನ್ನು ಹೊಂದಿರುತ್ತಾರೆ. ಇದಕ್ಕೂ ಮೊದಲು, ಅಭೂತಪೂರ್ವ ಆರ್ಥಿಕ ಮತ್ತು ರಾಜಕೀಯ ಬಿಕ್ಕಟ್ಟಿನಿಂದ ದ್ವೀಪ ರಾಷ್ಟ್ರದಲ್ಲಿ ಉಂಟಾದ ಉದ್ವಿಗ್ನತೆಯ ಹಿನ್ನೆಲೆಯಲ್ಲಿ ಬಿಗಿ ಭದ್ರತೆಯ ನಡುವೆ ರಹಸ್ಯ ಮತದಾನ ನಡೆಯಿತು. ಈ ನಿರ್ಣಾಯಕ ಚುನಾವಣೆಯಲ್ಲಿ 223 ಸಂಸದರು ಮತ ಚಲಾಯಿಸಿದರೆ ಇಬ್ಬರು ಸಂಸದರು ಗೈರಾಗಿದ್ದರು. ನಾಲ್ಕು ಮತಗಳು ತಿರಸ್ಕೃತಗೊಂಡಿದ್ದು, ಒಟ್ಟು 219 ಮತಗಳು ಮಾತ್ರ ಮಾನ್ಯವಾಗಿದ್ದವು. 44 ವರ್ಷಗಳಲ್ಲಿ ಶ್ರೀಲಂಕಾ ಸಂಸತ್ತು ನೇರವಾಗಿ ಅಧ್ಯಕ್ಷರನ್ನು ಆಯ್ಕೆ ಮಾಡುತ್ತಿರುವುದು ಇದೇ ಮೊದಲು.

ಇನ್ನು ಹೈ–ವೋಲ್ಟೇಜ್ ರಾಜಕೀಯ ನಾಟಕಕ್ಕೆ ವೇದಿಕೆಯಾಗಿದ್ದ ಲಂಕಾ ರಾಜಧಾನಿ ಕೊಲಂಬೋ ವ್ಯಾಪಕ ಹಿಂಸಾಚಾರ ಕಂಡಿತ್ತು. ಜನರ ಪ್ರತಿಭಟನೆಗೆ ಹೆದರಿ ಹಿಂದಿನ ಅಧ್ಯಕ್ಷ ಗೋಟಬಯ ರಾಜಪಕ್ಸೆ ಅವರು ದೇಶದಿಂದ ಪಲಾಯನ ಮಾಡಿದ್ದರು. ಆರ್ಥಿಕತೆಯನ್ನು ತಪ್ಪಾಗಿ ನಿರ್ವಹಿಸುತ್ತಿದ್ದಾರೆಂದು ಅವರ ಸರ್ಕಾರದ ವಿರುದ್ಧ ಜನ ದಂಗೆ ಎದ್ದ ಬಳಿಕ ಅವರು ರಾಜೀನಾಮೆ ನೀಡಿದ್ದರು.

ಶಾಲೆ ಮಕ್ಕಳಿಗೆ ಮೊಟ್ಟೆ, ಬಾಳೆ ಹಣ್ಣು ವಿತರಿಸಲು ನಿರ್ಧಾರ

ಬೆಂಗಳೂರು,ಜು.20(ಕೆಎಂಶಿ)–1ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ ಪೂರಕ ಪೌಷ್ಠಿಕಾಂಶದ ರೂಪದಲ್ಲಿ ಮೊಟ್ಟೆ ಅಥವಾ ಬಾಳೆ ಹಣ್ಣು ವಿತರಿಸಲಾಗುವುದು. ಈ ಸಂಬಂಧ ಆದೇಶ ಹೊರಡಿಸಿರುವ ಸರ್ಕಾರ ಮಧ್ಯಾಹ್ನದ ಉಪಹಾರದ ವೇಳೆ ಮೊಟ್ಟೆ ಇಲ್ಲವೆ ಬಾಳೆಹಣ್ಣು ನೀಡುವುದಾಗಿ ಹೇಳಿದೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಬುಧವಾರ	124.80 ಅಡಿ
ಒಳಹರಿವು	38162 ಕ್ಯೂಸೆಕ್
ಹೊರಹರಿವು	38065 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಬುಧವಾರ	2283.79 ಅಡಿ
ಒಳ ಹರಿವು	19614 ಕ್ಯೂಸೆಕ್
ಹೊರ ಹರಿವು	8417 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಬುಧವಾರ	2855.12 ಅಡಿ
ಒಳ ಹರಿವು	6111 ಕ್ಯೂಸೆಕ್
ಹೊರ ಹರಿವು	4500 ಕ್ಯೂಸೆಕ್

ಹೇಮಾವತಿ ನೀರಿನ ಮಟ್ಟ



ಗರಿಷ್ಠ ಮಟ್ಟ	2922 ಅಡಿ
ಬುಧವಾರ	2920.10 ಅಡಿ
ಒಳ ಹರಿವು	14584 ಕ್ಯೂಸೆಕ್
ಹೊರ ಹರಿವು	15318 ಕ್ಯೂಸೆಕ್

ಗುತ್ತಿಗೆದಾರ ಸಂತೋಷ್ ಆತ್ಮಹತ್ಯೆ ಪ್ರಕರಣ

ಮಾಜಿ ಸಚಿವ ಕೆ.ಎಸ್.ಈಶ್ವರಪ್ಪಗೆ ಬಿಗ್ ರಿಲೀಫ್



ಬೆಂಗಳೂರು,ಜು.20–ಗುತ್ತಿಗೆದಾರ ಸಂತೋಷ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಕೆ.ಎಸ್ ಈಶ್ವರಪ್ಪಗೆ ಬಿಗ್ ರಿಲೀಫ್ ಸಿಕ್ಕಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಉಡುಪಿ ಟೌನ್ ಪೊಲೀಸರು ಬೆಂಗಳೂರಿನ ಜನಪ್ರತಿನಿಧಿಗಳ ಕೋರ್ಟ್‌ಗೆ ಸಾಕ್ಷ್ಯಾಧಾರ ಕೊರತೆಯಿಂದಾಗಿ ಬಿ ರಿಪೋರ್ಟ್ ಸಲ್ಲಿಸಿದ್ದಾರೆ.

ಕೋರ್ಟ್‌ಗೆ ಸಲ್ಲಿಸಿರುವ ಅಂತಿಮ ವರದಿಯಲ್ಲಿ ಆತ್ಮಹತ್ಯೆಗೆ ಕುಮ್ಮಕ್ಕು ಎಂಬುದಕ್ಕೆ ಸಾಕ್ಷ್ಯಾಧಾರಗಳೇ ಇಲ್ಲ ಎಂದು ಉಲ್ಲೇಖಿಸಲಾಗಿದೆ. ಇನ್ನು ಪೊಲೀಸರು ಸಲ್ಲಿಸಿರುವ ಬಿ–ರಿಪೋರ್ಟ್ ಅನ್ನು ಕೋರ್ಟ್ ಅಂಗೀಕರಿಸಿಲ್ಲ ಎನ್ನಲಾಗಿದೆ. ಏಪ್ರಿಲ್ 12ರಂದು ಗುತ್ತಿಗೆದಾರ ಸಂತೋಷ್ ಉಡುಪಿಯ ಹೋಟೆಲ್‌ನಲ್ಲಿ ಆತ್ಮಹತ್ಯೆಗೆ ಶರಣಾಗಿದ್ದರು. ಸಾವಿಗೂ ಮೊದಲು ಸಂತೋಷ್ ಸ್ನೇಹಿತರಿಗೆ ಸಂದೇಶ ಕಳಿಸಿದ್ದು, ನನ್ನ ಸಾವಿಗೆ ಈಶ್ವರಪ್ಪ ಕಾರಣ ಎಂದು ಉಲ್ಲೇಖೀಸಿದ್ದರು. ಸಂತೋಷ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೋರ್ಟ್‌ಗೆ ಪೊಲೀಸರು ಬಿ–ರಿಪೋರ್ಟ್ ಸಲ್ಲಿಸಿದ ಹಿನ್ನೆಲೆ ಈ ಕುರಿತು ಸಂತಸ ವ್ಯಕ್ತಪಡಿಸಿರುವ ಕೆ.ಎಸ್.ಈಶ್ವರಪ್ಪ, ನಾನು ಆರೋಪದಿಂದ ಮುಕ್ತನಾಗುವ ವಿಶ್ವಾಸವಿತ್ತು. ಮುಂದೆ ಪಕ್ಷದ ಹೈಕಮಾಂಡ್ ಯಾವುದೇ ಜವಾಬ್ದಾರಿ ನೀಡಿದರೂ ನಿಭಾಯಿಸುವೆ ಎಂದಿದ್ದಾರೆ. ಈ ಕುರಿತು ಶಿವಮೊಗ್ಗ ದಲ್ಲಿ ಮಾತನಾಡಿರುವ ಅವರು, ಬಿ–ರಿಪೋರ್ಟ್ ಹಾಕಿರುವ ಸುದ್ದಿ ಕೇಳಿ ಸಂತಸವಾಗಿದೆ. ತಪ್ಪು ಮಾಡಿಲ್ಲವೆಂದು ಮನೆ ದೇವರು ಚೌಡೇಶ್ವರಿ ಮೇಲೆ ಆಣೆ ಮಾಡಿದ್ದೆ. ತಾಯಿ ಚೌಡೇಶ್ವರಿ ಆಶೀರ್ವಾದದಿಂದ ಖುಲಾಸೆಯಾಗಿದೆ ಎಂದರು.

ಈಶ್ವರಪ್ಪ ಪ್ರಭಾವ ಬಳಸಿದ್ದಾರೆ

ಸಂತೋಷ್ ಪಾಟೀಲ್ ಪತ್ನಿ ಆರೋಪ



ಬೆಳಗಾವಿ, ಜು.20– ನಮ್ಮ ಆತಂಕ ಕೊನೆಗೂ ನಿಜವೇ ಆಯಿತು. ನನ್ನ ಪತಿಯ ಸಾವಿಗೆ ಪ್ರಮುಖ ಕಾರಣರಾದ ಕೆ.ಎಸ್.ಈಶ್ವರಪ್ಪ ಅವರು ಪೊಲೀಸ್ ತನಿಖೆ ಮೇಲೆ ಪ್ರಭಾವ ಬೀರಿ, 'ಬಿ' ರಿಪೋರ್ಟ್ ಹಾಕಿಸಿಕೊಂಡಿದ್ದಾರೆ. ನನಗೆ ನ್ಯಾಯ ಸಿಗುವವರೆಗೂ ಸುಮ್ಮನಿರುವುದಿಲ್ಲ ಎಂದು ಸಂತೋಷ್ ಪಾಟೀಲ ಅವರ ಪತ್ನಿ ರೇಣುಕಾ ಪ್ರತಿಕ್ರಿಯಿಸಿದರು.

ತನಿಖೆ ಮೇಲೆ ಈಶ್ವರಪ್ಪ ಪ್ರಭಾವ ಬಳಸುತ್ತಿದ್ದಾರೆ, ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಕೋರಿ ಇತ್ತೀಚೆಗಷ್ಟೇ ರಾಜ್ಯಪಾಲರಿಗೂ ಪತ್ರ ಬರೆದು ಬೇಡಿ ಕೊಂಡಿದ್ದೇನೆ. ನನಗೆ ಯಾವುದರ ಭಯ ಇತ್ತೋ ಈಗ ಅದೇ ಆಗಿದೆ. ಉಡುಪಿ ಪೊಲೀಸರು ರಾಜಕೀಯ ಪ್ರಭಾವಕ್ಕೆ ಒಳಗಾಗಿ ತನಿಖೆ ಮಾಡಿದ್ದು, ನಮಗೆ ಅನ್ಯಾಯ ಮಾಡಿದ್ದಾರೆ ಎಂದು ರೇಣುಕಾ ಕಣ್ಣೀರು ಸುರಿಸಿದರು.

ನನ್ನ ಪತಿಯ ಮೊಬೈಲ್‌ನಲ್ಲಿ ಈಶ್ವರಪ್ಪ ವಿರುದ್ಧದ ಎಲ್ಲ ಸಾಕ್ಷ್ಯಗಳಿದ್ದವು. ಆದರೆ, ಪೊಲೀಸರು ಈವರೆಗೂ ಆ ಮೊಬೈಲ್ ನಮ್ಮ ಕೈಗೆ ಕೊಟ್ಟಿಲ್ಲ. ನನ್ನ ಪತಿಯ ಸಹೋದರ ತನಿಖಾಧಿಕಾರಿ ಹಾಗೂ ಎಸ್ಪಿಗೆ ಕರೆ ಮಾಡಿದರೂ ಸ್ವೀಕರಿಸುತ್ತಿಲ್ಲ. ರಾಜ್ಯಪಾಲರಿಗೆ ಬರೆದ ಪತ್ರದಲ್ಲಿ ಇದನ್ನೂ ತಿಳಿಸಿದ್ದೇನೆ ಎಂದರು.

ಈ ಪ್ರಕರಣದಿಂದ 15 ದಿನಗಳಲ್ಲಿ ಹೊರಬರುತ್ತೇನೆ ಎಂದು ಈಶ್ವರಪ್ಪ ಅವರು ಹೇಳಿದ್ದರು. ಈಗ 'ಬಿ' ರಿಪೋರ್ಟ್ ಹಾಕಿದ್ದರಿಂದ ಅವರ ಮಾತು ನಿಜವೇ ಆಯಿತು ಅಲ್ಲವೇ? ಎಂದೂ ಪ್ರಶ್ನಿಸಿದರು. ಮುಂದೆಯೂ ನಾನು ಕಾನೂನು ಹೋರಾಟ ಮಾಡುತ್ತೇನೆ. ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಒತ್ತಾಯಿಸುತ್ತೇನೆ. ಅಗತ್ಯಬಿದ್ದರೆ ಮುಖ್ಯಮಂತ್ರಿ ಭೇಟಿಯಾಗುತ್ತೇನೆ ಎಂದರು. ಯಾವುದೇ ವ್ಯಕ್ತಿ ಡೆತ್ ನೋಟ್ ಬರೆದರೆ ಮಾತ್ರ ಆರೋಪ ಮಾನ್ಯವಾಗುತ್ತದೆಯೇ? ಹಾಗಾದರೆ ನಾವೆಲ್ಲರೂ ಈಶ್ವರಪ್ಪ ವಿರುದ್ಧ ಡೆತ್‌ನೋಟ್ ಬರೆದು ಸಾಮೂಹಿಕ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ. ಆವಾಗಲಾದರೂ ಅದು ಮಾನ್ಯವಾಗುತ್ತದೆಯೇ? ಎಂದು ಪ್ರಶ್ನಿಸಿದರು.

ನಕ್ಕರೆ ಅದೇ ಸ್ವರ್ಗ

ಗೆಳೆಯ : ನಿನ್ನ ಹೆಂಡತಿ ನರ್ಸಿಂಗ್ ಪರೀಕ್ಷೆ ಪಾಸಾದಳಂತಲ್ಲ. ಒಳ್ಳೆಯದು ಆಯ್ತು ಬಿಡು. ಡಾಕ್ಟರಾದ ನಿನಗೆ ನಿನ್ನವಳೇ ನರ್ಸ್ ಸಿಕ್ಕಂತಾಯ್ತು. ಸಂತೋಷವಲ್ಲವೇ?

ಡಾಕ್ಟರ್ : ಏನು ಸಂತೋಷ ಬಂತು! ನನಗೆ ದುಃಖವೇ ಆಗಿದೆ.

ಗೆಳೆಯ : ಏಕೆ?

ಡಾಕ್ಟರ್ : ಏಕೆಂದರೆ, ನನ್ನ ಹೆಂಡತಿಯನ್ನೇ ನಾನು ಸಿಸ್ಟರ್ ಎಂದು...

ಮೈಸೂರು ಮಿತ್ರ

ಗುರುವಾರ, 21 ಜುಲೈ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಕೆಲಸವನ್ನು ಆರಂಭಿಸುವಾಗ ಅದರ ಫಲಾಫಲಗಳನ್ನು ಯೋಚಿಸಬೇಕು.

–ರಾಮಾಯಣ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಕರೆಂಯೋಕೆ ಎಮ್ಮೆ ತಂದು ಕಡೆಯೋ ಗಡಿಗೆಗೆ ಹೇಗೆ ಅಂದರಂತೆ

ನಿಮ್ಮ ಪತ್ರಗಳು

ನಷ್ಟದಲ್ಲಿರುವ ಬಿಎಸ್‌ಎನ್‌ಎಲ್‌ಗೆ ಕಾಯಕಲ್ಪ ನೀಡಿ

ಮಾನ್ಯರೆ,

ಭಾರಿ ನಷ್ಟಕ್ಕೆ ಸಿಲುಕಿರುವ ಸಾರ್ವಜನಿಕ ವಲಯದ ದೂರಸಂಪರ್ಕ ಸಂಸ್ಥೆಯಾದ ಬಿಎಸ್‌ಎನ್‌ಎಲ್‌ನ ಭವಿಷ್ಯದ ಸ್ಥಿತಿಗತಿಯ ಬಗ್ಗೆ ಸರಕಾರ ಗಂಭೀರವಾಗಿ ಚಿಂತಿಸುವ ಮೂಲಕ ಕಾಯಕಲ್ಪ ನೀಡಬೇಕಿದೆ. ಒಂದು ಕಡೆ ಮಾರುಕಟ್ಟೆಯ ಸ್ಪರ್ಧೆ ಬಿಎಸ್‌ಎನ್‌ಎಲ್‌ಗೆ ಸಮಸ್ಯೆಯಾಗಿದ್ದರೆ, ಮತ್ತೊಂದು ಕಡೆ ಕಂಪನಿಯಲ್ಲಿ ಭಾರಿ ಸಂಖ್ಯೆಯಲ್ಲಿರುವ ಸಿಬ್ಬಂದಿ ಮತ್ತೊಂದು ಸಮಸ್ಯೆ. ಅದರಲ್ಲೂ ಹಿರಿಯರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿರುವುದು. ಒಂದು ವೇಳೆ ವಿಆರ್‌ಎಸ್ (ಸ್ವಯಂ ನಿವೃತ್ತಿ ಯೋಜನೆ) ಯೋಜನೆಗೆ ಅರ್ಹ ವಯೋಮಿತಿಯವರನ್ನು ಪರಿಗಣಿಸಿದರೆ ಅದಕ್ಕೆ ತಗಲುವ ವೆಚ್ಚ ಕೂಡ ಏರಿಕೆಯಾಗಲಿದೆ. ಹೀಗಾಗಿಯೇ ಬಿಎಸ್‌ಎನ್‌ಎಲ್ ನಷ್ಟದ ಹಾದಿಯಲ್ಲಿದೆ.

ಬಿಎಸ್‌ಎನ್‌ಎಲ್‌ನ ನಷ್ಟಕ್ಕೆ ಹಲವಾರು ಕಾರಣಗಳಿವೆ. ಸರಕಾರ 5ಜಿ ಹರಾಜಿಗೆ ಕಾರ್ಯಪ್ರವೃತ್ತವಾಗಿದ್ದರೂ, ಬಿಎಸ್‌ಎನ್‌ಎಲ್ ಇನ್ನೂ 4ಜಿಯನ್ನೇ ಹೊಂದಿಲ್ಲ. ಇದರಿಂದ ಬಿಎಸ್‌ಎನ್‌ಎಲ್ ಚಂದಾದಾರರ ಸಂಖ್ಯೆಯ ಬೆಳವಣಿಗೆ ತೀವ್ರ ಮಂದಗತಿಯಲ್ಲಿ ಸಾಗಿದೆ. ನಗರ ಹಾಗೂ ತೀರಾ ಕುಗ್ರಾಮ ಅನಿಸುವಂತಹ ಗ್ರಾಮೀಣ ಪ್ರದೇಶಗಳಲ್ಲಿ ಬಿಎಸ್‌ಎನ್‌ಎಲ್‌ನ ನೆಟ್‌ವರ್ಕ್ ಜಾಲ ತುಂಬಾ ಸಮರ್ಥವಾಗಿದ್ದು, ಈಗಲೂ ಕೂಡ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅಧಿಕಾರಿ ಹಾಗೂ ನೌಕರ ವರ್ಗ ಸೇರಿದಂತೆ ಲಕ್ಷಾಂತರ ಚಂದಾದಾರರು ಬಿಎಸ್‌ಎನ್‌ಎಲ್ ಅನ್ನು ಆಶ್ರಯಿಸಿದ್ದಾರೆ. ಹೀಗೆ ಬಿಎಸ್‌ಎನ್‌ಎಲ್ ಹೆಚ್ಚು ಜನಸ್ನೇಹಿಯಾಗಿದ್ದರೂ ಮಾರುಕಟ್ಟೆಯ ತೀವ್ರ ಸ್ಪರ್ಧೆಯಿಂದ ಹಾಗೂ ಅದರ ದಕ್ಷ ನಿರ್ವಹಣೆಯ ಕೊರತೆಯಿಂದ ನಷ್ಟದತ್ತ ಸಾಗಿದೆ. ಕೇಂದ್ರ ಸರ್ಕಾರದಿಂದ ತುರ್ತು ನೆರವು ಇಲ್ಲದೇ ಬಿಎಸ್‌ಎನ್‌ಎಲ್ ನಿರ್ವಹಿಸುವುದು ಕಷ್ಟಸಾಧ್ಯವಾಗಿರುವ ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಯಾವುದೇ ಕಾರಣಕ್ಕೂ ಬಿಎಸ್‌ಎನ್‌ಎಲ್ ಅನ್ನು ಮುಚ್ಚಲು ಬಿಡದೇ ಕಾಯಕಲ್ಪ ನೀಡಬೇಕಾಗಿದೆ. ಬಿಎಸ್‌ಎನ್‌ಎಲ್ 4ಜಿ ಸೇವೆಯನ್ನು ದೇಶದಾದ್ಯಂತ ತುರ್ತಾಗಿ ಆರಂಭಿಸುವುದು ಅಗತ್ಯ ಹಾಗೂ ಅವಶ್ಯಕವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಬೀದಿದೀಪಗಳನ್ನು ದುರಸ್ತಿಪಡಿಸಿ

ಮಾನ್ಯರೆ,

ಮೈಸೂರಿನ ಜೆ.ಪಿ.ನಗರ ಮಹದೇವಪುರ ರೈಲ್ವೆ ಟ್ರಾಕ್‌ನ ಮುಖ್ಯ ರಸ್ತೆಯ ಮಾರ್ಗದಿಂದ ಡಾ. ಬಿ.ಆರ್. ಅಂಬೇಡ್ಕರ್ ನವೋದಯ ಬಡಾವಣೆ ಮತ್ತು ಶ್ರೀನಗರ ರೈಲ್ವೆ ಟ್ರಾಕ್‌ವರೆಗೆ ಬೀದಿದೀಪಗಳು ಕೆಟ್ಟು ಸುಮಾರು ತಿಂಗಳಾಗಿದ್ದು, ಸಂಜೆ ಸಮಯದಲ್ಲಿ ಈ ಮಾರ್ಗದಲ್ಲಿ ವಾಹನ ಸವಾರರು, ಮಹಿಳೆಯರು, ಹಿರಿಯ ನಾಗರಿಕರು, ವಾಯುವಿಹಾರಿಗಳು ಸಂಚರಿಸಲು ತೊಂದರೆಯಾಗುತ್ತಿದೆ. ರಾತ್ರಿ ಹೊತ್ತಿನಲ್ಲಿ ಬೀದಿದೀಪಗಳು ಇಲ್ಲದೆ ಸಣ್ಣ–ಪುಟ್ಟ ಅಪಘಾತಗಳು ಸಂಭವಿಸುತ್ತಿವೆ ಹಾಗೂ ರಾತ್ರಿ ವೇಳೆಯಲ್ಲಿ ಈ ಮಾರ್ಗವು ಕುಡುಕರ ಹಾಗೂ ಕಳ್ಳಕಾಕರ ತಾಣವಾಗಿದೆ.

ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಇತ್ತ ಗಮನಹರಿಸಿ ರಾತ್ರಿಯ ಸಮಯದಲ್ಲಿ ಜನರು ನಿರ್ಭೀತಿಯಿಂದ ಸಂಚರಿಸಲು ಕೆಟ್ಟು ಹೋಗಿರುವ ಬೀದಿದೀಪಗಳನ್ನು ಸರಿಪಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕಾಗಿ ಮನವಿ.

– ಟಿ. ರವೀಂದ್ರ, ಅಶೋಕಪುರಂ, ಮೈಸೂರು.

ಇದೇನು ರಸ್ತೆಯೋ, ಕೆಸರು ಗದ್ದೆಯೋ...

ಮಾನ್ಯರೆ,

ಮೈಸೂರಿನ ವಿ.ವಿ. ಮೊಹಲ್ಲಾ 2ನೇ ಮುಖ್ಯ ರಸ್ತೆ, ನಿರ್ಮಲಾ ಕಾನ್ವೆಂಟ್ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಮಳೆ ಬಂದಾಗಲಂತೂ ರಸ್ತೆಯಲ್ಲಿ ದ್ವಿಚಕ್ರ ವಾಹನಗಳು ಸಂಚರಿಸುವಾಗ ಶಾಲೆಗೆ ತೆರಳುವ ಮಕ್ಕಳ ಮೈ ಮೇಲೆ ಕೆಸರು ಹಾರಿರುವುದು ಉಂಟು. ಸಂಪೂರ್ಣ ಗುಂಡಿಮಯವಾದ ರಸ್ತೆಯನ್ನು ಡಾಂಬರೀಕರಣ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

– ಶಾಲಾ ಮಕ್ಕಳ ವ್ಯಾನ್ ಚಾಲಕರು, ಮೈಸೂರು.

ಕರ್ನಾಟಕದ ಕಾಶ್ಮೀರ ಕೊಡಗನ್ನು ಉಳಿಸಿ

ಮಾನ್ಯರೆ,

ಇತ್ತೀಚೆಗೆ ಕಂದಾಯ ಸಚಿವರು ಕೊಡಗಿನಲ್ಲಿರುವ ಸರ್ಕಾರಿ ಭೂಮಿಯನ್ನು ದೀರ್ಘಾವಧಿಗೆ ಗುತ್ತಿಗೆ ನೀಡಲು ಸಂಪುಟ ಸಭೆಯಲ್ಲಿ ನಿರ್ಣಯವಾಗಿರುವ ಬಗ್ಗೆ ತಿಳಿಸಿ, ಶೀಘ್ರದಲ್ಲೇ ಅಧಿಸೂಚನೆ ಹೊರಡಿಸುವುದಾಗಿ ಪ್ರಕಟಿಸಿದ್ದಾರೆ. ಈ ರೀತಿ ಸರ್ಕಾರಿ ಭೂಮಿಯನ್ನು ಹಾಲಿ ಭೂ ಒಡೆಯರು, ಪ್ರಭಾವಿಗಳು, ರಾಜಕಾರಣಿಗಳ ಸಂಬಂಧಿಗಳು, ಅಧಿಕಾರಿಗಳ ಆಪ್ತರು ಕಬಳಿಸುವ ಸಾಧ್ಯತೆ ಹೆಚ್ಚು. ಇನ್ನು ಯಾವ ಸರ್ಕಾರಿ ಜಮೀನು ಎಂಬುದನ್ನು ಸಾರ್ವಜನಿಕವಾಗಿ ಪ್ರಕಟಿಸಿಲ್ಲ. ಅಲ್ಪ ಸ್ವಲ್ಪ ಉಳಿದಿರುವ ಹಸಿರನ್ನು ಹಂಚಿ, ಕೊಡಗನ್ನು ಹಸಿರಿನಿಂದ ವಂಚಿತವಾಗುವಂತೆ ಮಾಡುವುದು ಸರಿಯೇ? ಈಗಾಗಲೇ ಅಭಿವೃದ್ಧಿ ಹೆಸರಲ್ಲಿ ಕೊಡಗು ತತ್ತರಿಸಿದೆ, ಭೂ ಕುಸಿತ, ಅಂತರ್ಜಲ ಕೊರತೆ ಕಾಡುತ್ತಿದೆ.

ಕರ್ನಾಟಕದ ಕಾಶ್ಮೀರ, ಸ್ವಿಡ್ಜರ್‌ಲ್ಯಾಂಡ್ ತನ್ನ ಮೂಲ ಸ್ವರೂಪ ಹಾಗೇ ಉಳಿಸಿಕೊಳ್ಳಲು ಬಿಡಿ, ಪ್ರಕೃತಿಯ ಮೇಲಿನ ಅತ್ಯಾಚಾರ ಕೈಬಿಡಿ.

–ಅನನ್ಯ. ಜಿ, ಮಹಾರಾಜ ಕಾಲೇಜು, ಮೈಸೂರು.

ಆಹಾರ ಧಾನ್ಯಗಳ ಮೇಲಿನ ಜಿಎಸ್‌ಟಿ ರದ್ದಾಗಲಿ

ಮಾನ್ಯರೆ,

ತೆರಿಗೆ ಸಂಗ್ರಹ ಮಾಡುವುದು ಪ್ರತಿಯೊಂದು ಸರ್ಕಾರದ ಜವಾಬ್ದಾರಿ ಮತ್ತು ಅಗತ್ಯ ಕೂಡ ಹೌದು. ಇಲ್ಲವಾದರೆ ದೇಶದ ಅಭಿವೃದ್ಧಿ ಅಸಾಧ್ಯ. ಆದರೆ ಪ್ರತಿನಿತ್ಯ ಬಳಸುವ ಆಹಾರ ಪದಾರ್ಥಗಳ ಮೇಲೆ ತೆರಿಗೆ ವಿಧಿಸುವುದು ಯಾವ ಕ್ರಮ. ಇದರಿಂದಾಗುವ ಪರಿಣಾಮದ ಬಗ್ಗೆ ಚಿಂತಿಸುವ ಅಗತ್ಯವಿದೆ.

ದಿನ ನಿತ್ಯ ಬಳಸುವ ಮೊಸರು, ಪ್ಯಾಕಡ್ ಅಕ್ಕಿ, ಗೋಧಿ ಹಿಟ್ಟು, ಅಕ್ಕಿ ಹಿಟ್ಟು, ಬೆಲ್ಲ, ಹಪ್ಪಳದ ಮೇಲೆ ಶೇ.5 ರಷ್ಟು, ಬ್ಯಾಂಕುಗಳ ಚೆಕ್‌ಗಳು, ಎಲ್‌ಇಡಿ ಲ್ಯಾಂಪ್, ಹೋಟೆಲ್ ರೂಮ್, ಆಸ್ಪತ್ರೆ ರೂಮ್‌ಗಳು, ಪ್ರಿಂಟಿಂಗ್, ಇಂಕ್, ಚಾಕು, ಚಮಚ, ಪೋರ್ಕ್‌ಗಳ ಮೇಲೆ ಶೇ.18ರಷ್ಟು ಜಿಎಸ್‌ಟಿ ತೆರಿಗೆ ವಿಧಿಸಿರುವುದು ಸಾಮಾನ್ಯ ಜನರ ಮೇಲೆ ಹೊರೆಯಾಗಿ ಪರಿಣಮಿಸುತ್ತದೆ.

ಸಂಬಳದ ಮೇಲೆ ಅವಲಂಬಿತರಾಗಿರುವ ಮಧ್ಯಮ ವರ್ಗದ ಮೇಲೆ ದಿನನಿತ್ಯದ ವಸ್ತುಗಳ ಮೇಲಿನ ತೆರಿಗೆ ನೇರ ಪರಿಣಾಮ ಬೀರುತ್ತದೆ. ಸಂಬಳ ಹೆಚ್ಚಾದಾಗ ವಸ್ತುಗಳ ಮೇಲಿನ ತೆರಿಗೆ ಹೆಚ್ಚಾದರೆ ಯಾವುದೇ ಪರಿಣಾಮ ಉಂಟಾಗುವುದಿಲ್ಲ. ಆದರೆ ಸಂಬಳದಲ್ಲಿ ಏರಿಕೆ ಮಾಡದೆ ದಿನ ನಿತ್ಯದ ವಸ್ತುಗಳ ಮೇಲಿನ ತೆರಿಗೆ ಹೆಚ್ಚಾದರೆ ಅದು ಅಕ್ಷರಶಃ ಹೊರೆಯಾಗುತ್ತದೆ.

ಶೀಘ್ರವಾಗಿ ಅಹಾರ ಧಾನ್ಯಗಳ ಮೇಲಿನ ತೆರಿಗೆಯನ್ನು ರದ್ದು ಪಡಿಸಬೇಕೆಂದು ಸಾಮಾನ್ಯ ಜನರ ಪರವಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಿಸೋಣ.

–ರಾಸುಮ ಭಟ್, ಚಿಕ್ಕಮಗಳೂರು.



ಪ್ರೊ. ಆರ್.ಇಂದಿರಾ
ಸಮಾಜ ಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಜಾಗತಿಕ ಲಿಂಗ ಅಂತರ ಸೂಚ್ಯಂಕದಲ್ಲಿ ಭಾರತಕ್ಕೆ 135ನೇ ಸ್ಥಾನ: ಎಚ್ಚರಿಕೆಯ ಕರೆಗಂಟೆ

ವಿಶ್ವ ಆರ್ಥಿಕ ವೇದಿಕೆ(ವರ್ಲ್ಡ್ ಎಕನಾಮಿಕ್ ಫೋರಂ) ಕಳೆದ ವಾರವಷ್ಟೇ ಬಿಡುಗಡೆ ಮಾಡಿದ ಜಾಗತಿಕ ಲಿಂಗ ಅಂತರ ವರದಿ–2022, ಪ್ರಕಾರ ಲಿಂಗ ಸಮಾನತೆಯ ವಿಚಾರದಲ್ಲಿ, ಅಧ್ಯಯನಕ್ಕೆ ಒಳಪಟ್ಟ 146 ದೇಶಗಳಲ್ಲಿ ಭಾರತ 135 ನೇ ಸ್ಥಾನದಲ್ಲಿದೆ. ಈ ಶ್ರೇಯಾಂಕವನ್ನು ನಿರ್ಧರಿಸಲು ನಾಲ್ಕು ಸೂಚ್ಯಂಕಗಳನ್ನು ಪರಿಗಣಿಸಲಾಯಿತು. ಅವುಗಳೆಂದರೆ ಆರ್ಥಿಕ ಭಾಗವಹಿಸುವಿಕೆ ಮತ್ತು ಅವಕಾಶ, ಶೈಕ್ಷಣಿಕ ಸಾಧನೆ, ಆರೋಗ್ಯ ಹಾಗೂ ಜೀವನಾವಧಿ ಮತ್ತು ರಾಜಕೀಯ ಸಶಕ್ತೀಕರಣ. ಅನುಕ್ರಮವಾಗಿ ಈ ನಾಲ್ಕು ಕ್ಷೇತ್ರಗಳಲ್ಲಿ ಭಾರತದ ಸ್ಥಾನ 143, 107 ಮತ್ತು 146, 48 ಎಂದು ಈ ವರದಿ ಸೂಚಿಸಿದ್ದು, ಈ ಲಿಂಗ ಅಂತರ ಕಳೆದ ವರ್ಷಕ್ಕೆ ಹೋಲಿಸಿದರೆ 5 ಸ್ಥಾನಗಳಷ್ಟು ಮೇಲೇರಿದೆ. 2021ರಲ್ಲಿ 156 ದೇಶಗಳಲ್ಲಿ ಭಾರತ 140 ನೇ ಸ್ಥಾನದಲ್ಲಿದ್ದು, 2012 ರಲ್ಲಿ 135 ದೇಶಗಳಲ್ಲಿ 105 ನೇ ಸ್ಥಾನದಲ್ಲಿತ್ತು. 2006 ರಲ್ಲಿ ಲಿಂಗ ಅಂತರ ವರದಿ ಮೊದಲನೆಯ ಬಾರಿ ಪ್ರಕಟವಾದಾಗ ಭಾರತ 115 ರಲ್ಲಿ 98ನೇ ಸ್ಥಾನದಲ್ಲಿತ್ತು.

ಯಾವುದೇ ದೇಶದ ಅಭಿವೃದ್ಧಿಯ ಪ್ರಮಾಣವನ್ನು ಅಳೆಯುವುದರಲ್ಲಿ ಆ ದೇಶ ಸಾಧಿಸಿರುವ ಲಿಂಗ ಸಮಾನತೆಯ ಮಟ್ಟ ಒಂದು ಪ್ರಧಾನ ಸೂಚ್ಯಂಕವಾಗುತ್ತದೆ. ಇದುವರೆಗೂ ಯಾವ ದೇಶವೂ ಸಂಪೂರ್ಣ ಲಿಂಗ ಸಮಾನತೆಯನ್ನು ಸಾಧಿಸಿಲ್ಲವಾದರೂ ಕಾಲದಿಂದ ಕಾಲಕ್ಕೆ ಲಿಂಗಗಳ ನಡುವಣ ಅಂತರ ಕಡಿಮೆಯಾಗುತ್ತ ಹೋಗಬೇಕು. 2022 ರ ಜಾಗತಿಕ ಲಿಂಗ ಅಂತರ ವರದಿಯ ಪ್ರಕಾರ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ (90.8%) ಲಿಂಗ ಅಂತರವನ್ನು ಕಡಿಮೆ ಮಾಡಿರುವ ದೇಶ ಐಸ್‌ಲ್ಯಾಂಡ್. ಹೆಚ್ಚು–ಹೆಚ್ಚು ಲಿಂಗ ಸಮಾನತೆಯತ್ತ ಹೋಗುತ್ತಿರುವ ದೇಶಗಳಲ್ಲಿ ಅನುಕ್ರಮವಾಗಿ ಎರಡನೇ, ಮೂರನೇ, ನಾಲ್ಕನೇ ಮತ್ತು ಐದನೇ ಸ್ಥಾನಗಳಲ್ಲಿರುವ ದೇಶಗಳೆಂದರೆ ಫಿನ್‌ಲ್ಯಾಂಡ್(86%) ನಾರ್ವೇ– (84.5%) ನ್ಯೂಜಿಲ್ಯಾಂಡ್(84.1%) ಮತ್ತು ಸ್ವೀಡನ್(82.5%). ಜಾಗತಿಕ ಲಿಂಗ ಅಂತರ ವರದಿ 2022 ಯಲ್ಲಿ ಅತ್ಯಂತ ನಿರಾಶಾದಾಯಕ ಹಾಗೂ ಭಯ ಹುಟ್ಟಿಸುವಂಥ ಒಂದು ವಿಚಾರವೆಂದರೆ ಕ್ರಮೇಣ ಇಳಿಮುಖವಾಗುತ್ತಿರುವ ಮಹಿಳೆಯರ ಆರ್ಥಿಕ ಭಾಗವಹಿಸುವಿಕೆ. ಜಗತ್ತಿನ ಶೇ.17ರಷ್ಟು ಮಹಿಳಾ ಜನಸಂಖ್ಯೆ ವಾಸಿಸುತ್ತಿರುವುದು ಭಾರತದಲ್ಲಿ. ಆದರೆ ದೇಶದ ಆರ್ಥಿಕ ಕ್ಷೇತ್ರದಲ್ಲಿ ಅವರ ಭಾಗವಹಿಸುವಿಕೆಯ ಪ್ರಮಾಣ ಮಾತ್ರ ಕೆಳಗಿಳಿಯುತ್ತಲೇ ಹೋಗುತ್ತಿದೆ. ಲೇಬರ್ ಫೋರ್ಸ್ ಸರ್ವೇ 2021–22ರ ವರದಿಯ ಪ್ರಕಾರ ದೇಶದ ಕಾರ್ಮಿಕ ವರ್ಗದಲ್ಲಿ ಪುರುಷರ ಭಾಗವಹಿಸುವಿಕೆಯ ಪ್ರಮಾಣ (57.75%)ಕ್ಕೆ ಹೋಲಿಸಿದರೆ ಶೇ.23.15ರಷ್ಟು ಮಹಿಳೆಯರಿಗೆ ಮಾತ್ರ ಈ ಅವಕಾಶ ದೊರೆತಿದೆ. ಇಂಡಿಯಾ ಸ್ಕಿಲ್ಸ್ ರಿಪೋರ್ಟ್ ಪ್ರಕಾರ ಹಾಲಿ ಸಂದರ್ಭದಲ್ಲಿ ಪುರುಷರಿಗಿಂತ ಮಹಿಳೆಯರು ಹೆಚ್ಚು (51.44%) ಉದ್ಯೋಗಾರ್ಹತೆಯನ್ನು ಪಡೆದಿದ್ದಾರೆ. ಆದರೆ ದೇಶದ ಉದ್ಯೋಗ ವರ್ಗದಲ್ಲಿ ಅವರ ಭಾಗವಹಿಸುವಿಕೆ ಮಾತ್ರ 33%.

ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರ ದಾಖಲಾತಿ ಮತ್ತು ಅವರ ಸಾಧನೆಗಳೆರಡೂ ಕಳೆದ ಎರಡು ದಶಕಗಳಲ್ಲಿ ಗಮನಾರ್ಹವಾದ ಹೆಚ್ಚಳವನ್ನು ಕಂಡಿವೆ. ಆದಾಗ್ಯೂ ಅವರು ಸುರಕ್ಷಿತ–ಸುಸ್ಥಿರ ಆದಾಯವನ್ನು ತರುವ ಉದ್ಯೋಗಗಳನ್ನು ಏಕೆ ಪಡೆಯಲಾಗುತ್ತಿಲ್ಲ? ಹೆಣ್ಣು ಮಕ್ಕಳು ಎಷ್ಟೇ ಶೈಕ್ಷಣಿಕ ಸಾಧನೆಗಳನ್ನು ಮಾಡಲಿ ಅವರ ಜೀವನದ ಪ್ರಧಾನ ಗುರಿ ವಿವಾಹ ಎಂಬ ನಂಬಿಕೆಗೆ ಬಹುತೇಕ ಕುಟುಂಬಗಳು ಇಂದಿಗೂ ಕಟ್ಟು ಬಿದ್ದು, ಅವರನ್ನು ಆದಷ್ಟು ಸಣ್ಣ ವಯಸ್ಸಿನಲ್ಲೇ ವಿವಾಹ ಮಾಡುವುದರಿಂದ ಅವರಲ್ಲನೇಕರ ಉದ್ಯೋಗ ಆಕಾಂಕ್ಷೆಗಳು ಸಾಕಾರವಾಗುವುದೇ ಇಲ್ಲ. ಒಳ್ಳೆಯ ಆದಾಯವನ್ನು ತರುವ ವೃತ್ತಿಗಳನ್ನು ಪಡೆದ ಅನೇಕ ಹೆಣ್ಣು ಮಕ್ಕಳೂ ವಿವಾಹಾನಂತರ ವೃತ್ತಿ ಹಾಗೂ



> “ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರ ದಾಖಲಾತಿ ಮತ್ತು ಅವರ ಸಾಧನೆಗಳೆರಡೂ ಕಳೆದ ಎರಡು ದಶಕಗಳಲ್ಲಿ ಗಮನಾರ್ಹವಾದ ಹೆಚ್ಚಳವನ್ನು ಕಂಡಿವೆ. ಆದಾಗ್ಯೂ ಅವರು ಸುರಕ್ಷಿತ–ಸುಸ್ಥಿರ ಆದಾಯವನ್ನು ತರುವ ಉದ್ಯೋಗಗಳನ್ನು ಏಕೆ ಪಡೆಯಲಾಗುತ್ತಿಲ್ಲ? ಹೆಣ್ಣು ಮಕ್ಕಳು ಎಷ್ಟೇ ಶೈಕ್ಷಣಿಕ ಸಾಧನೆಗಳನ್ನು ಮಾಡಲಿ ಅವರ ಜೀವನದ ಪ್ರಧಾನ ಗುರಿ ವಿವಾಹ ಎಂಬ ನಂಬಿಕೆಗೆ ಬಹುತೇಕ ಕುಟುಂಬಗಳು ಇಂದಿಗೂ ಕಟ್ಟು ಬಿದ್ದು, ಅವರನ್ನು ಆದಷ್ಟು ಸಣ್ಣ ವಯಸ್ಸಿನಲ್ಲೇ ವಿವಾಹ ಮಾಡುವುದರಿಂದ ಅವರಲ್ಲನೇಕರ ಉದ್ಯೋಗ ಆಕಾಂಕ್ಷೆಗಳು ಸಾಕಾರವಾಗುವುದೇ ಇಲ್ಲ.

ಸಾಂಸಾರಿಕ ಜವಾಬ್ದಾರಿಗಳ ನಡುವೆ ಸಮತೋಲನ ಸಾಧಿಸಲು ಸಾಧ್ಯವಾಗದೆ, ಇಲ್ಲ ವೃತ್ತಿಯಲ್ಲಿ ಪ್ರಗತಿಯನ್ನು ಸಾಧಿಸುವ ಅವಕಾಶಗಳನ್ನು ಕೈಬಿಡಬೇಕು ಅಥವಾ ವೃತ್ತಿಯಿಂದಲೇ ದೂರ ಸರಿಯಬೇಕು– ಈ ಪರಿಸ್ಥಿತಿಯನ್ನು ತಲುಪುತ್ತಾರೆ. ವೈವಾಹಿಕ ಸಂಬಂಧಗಳಲ್ಲಿ ಕಂಡು ಬರುವ ಅಸಮಾನತೆ, ಗೃಹ ಕೃತ್ಯಗಳು ಹಾಗೂ ಮಕ್ಕಳ ಜವಾಬ್ದಾರಿಗಳನ್ನು ಮಹಿಳೆಯರೇ ನಿರ್ವಹಿಸಬೇಕೆಂಬ ಪುರುಷಪ್ರಧಾನ ಮೌಲ್ಯಾಚರಣೆಗಳು ಅವರ ಉದ್ಯೋಗ ಪ್ರವೇಶ ಅಥವಾ ವೃತ್ತಿಯಲ್ಲಿ ಮೇಲ್ಮುಖ ಚಲನೆಯ ಸಾಧನೆಗೆ ಅಡ್ಡಿ ಬರುತ್ತವೆ.

ರಾಜಕೀಯ ಸಶಕ್ತೀಕರಣ ಎಂಬ ಸೂಚ್ಯಂಕದಲ್ಲಿ ಭಾರತದ ಸ್ಥಾನ 48 ಇದ್ದು, ಇದು ಧನಾತ್ಮಕ ಬದಲಾವಣೆಯೆಂದೇ ಬಿಂಬಿತವಾಗುತ್ತದೆ. ನಿರ್ಧಾರಗಳನ್ನು ತೆಗೆದುಕೊಳ್ಳುವ ಸಂಸ್ಥೆಗಳಲ್ಲಿ ಮೇಲ್ಮಟ್ಟದ ಹುದ್ದೆಗಳನ್ನು ಪಡೆದು ಇತರರ ಬದುಕಿನ ಗುಣಮಟ್ಟವನ್ನು ಪ್ರಭಾವಿಸುವಂಥ ಸ್ಥಾನಗಳಲ್ಲಿ ಮಹಿಳೆಯರ ಪ್ರಮಾಣ ಎಷ್ಟಿದೆ ಎಂಬ ಅಂಶಕ್ಕೆ ಈ ಸೂಚ್ಯಂಕದಲ್ಲಿ ಪ್ರಾಮುಖ್ಯತೆಯನ್ನು ನೀಡಲಾಗುತ್ತದೆ. ರಾಜಕೀಯ ನಾಯಕತ್ವವೇ ಅಲ್ಲದೆ ಹಿರಿಯ ಅಧಿಕಾರದ ಸ್ಥಾನಗಳಲ್ಲಿ ಹಾಗೂ ವೃತ್ತಿಗಳಲ್ಲಿ ಹೆಚ್ಚುತ್ತಿರುವ ಮಹಿಳೆಯರ ಗೋಚರತೆಯನ್ನು ಕೂಡ ಇಲ್ಲಿ ಗಣನೆಗೆ ತೆಗೆದುಕೊಳ್ಳಲಾಗಿದೆ. ಸಂಸತ್ತಿನಲ್ಲಿ ಮಹಿಳೆಯರ ರಾಜಕೀಯ ಪ್ರಾತಿನಿಧ್ಯದ ಬಗ್ಗೆ ಹೇಳುವುದಾದರೆ ಪ್ರಥಮ ಬಾರಿಗೆ ಅದು ಶೇಕಡಾ 14.39ಕ್ಕೆ ಏರಿದ್ದರೂ ರಾಜ್ಯ ರಾಜಕಾರಣದಲ್ಲಿ ಶೇ.10ಕ್ಕಿಂತ ಮೇಲೆ ಹೋಗಿಲ್ಲ.

ನಮ್ಮ ದೇಶದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇಕಡಾ 50 ರಷ್ಟು ಪ್ರಾತಿನಿಧ್ಯ ಇರುವುದರಿಂದ ಅವರ ರಾಜಕೀಯ ಭಾಗವಹಿಸುವಿಕೆಯ ಪ್ರಮಾಣ ಹೆಚ್ಚು ಎಂದು ತೋರಿಸುವ ಸಾಧ್ಯತೆ ಇದೆ. ಆದರೆ ಕೇವಲ ಸಂಖ್ಯಾತ್ಮಕ ಹೆಚ್ಚಳ ಮಹಿಳಾ ಸಶಕ್ತೀಕರಣದ ಸಂಕೇತವಲ್ಲ. ಚುನಾಯಿಸಿ ಬಂದ ಮಹಿಳಾ ಪ್ರತಿನಿಧಿಗಳು ತಮ್ಮ ಅಧಿಕಾರವನ್ನು ಎಷ್ಟರ ಮಟ್ಟಿಗೆ ಇತರ ಮಹಿಳೆಯರ ಬದುಕಿನ ಗುಣಮಟ್ಟವನ್ನು ಏರಿಸುವಂಥ ಕಾರ್ಯಕ್ರಮಗಳು ಮತ್ತು ನೀತಿಗಳನ್ನು ರೂಪಿಸಲು ಉಪಯೋಗಿಸಿದ್ದಾರೆ ಎನ್ನುವುದು ಮುಖ್ಯವಾಗುತ್ತದೆ.

ಶೈಕ್ಷಣಿಕ ಸಾಧನೆ ಎಂದರೆ, ಮೂಲಭೂತ ಶಿಕ್ಷಣವನ್ನಾದರೂ ಪಡೆದ ಮೇಲೆ ಶಿಕ್ಷಣದ ಮೇಲು ಮೇಲಿನ ಹಂತಗಳನ್ನು ತಲುಪಿ ಕೌಶಲ್ಯಾಭಿವೃದ್ಧಿಗೆ ಅವಕಾಶಗಳನ್ನು ಪಡೆಯಲು ಇರುವ ಅನುಕೂಲಗಳು. ಪ್ರಾಥಮಿಕ ಮತ್ತು ಉನ್ನತ ಶಿಕ್ಷಣ ಕ್ಷೇತ್ರಗಳೆರಡರಲ್ಲೂ ಭಾರತದ ಹೆಣ್ಣು ಮಕ್ಕಳ ದಾಖಲಾತಿಯ ಪ್ರಮಾಣ ಹೆಚ್ಚುತ್ತಿದ್ದು, ಈ ಸೂಚ್ಯಂಕದಲ್ಲಿ ನಮ್ಮ ದೇಶ ಜಾಗತಿಕ ಮಟ್ಟದಲ್ಲಿ ಮೇಲು ಮೇಲಿನ ಸ್ಥಾನಕ್ಕೆ ಹೋಗುತ್ತಿರುವುದು ಗಮನಾರ್ಹವಾದ ಸಾಧನೆ. ಕೋವಿಡ್ ತಂದಿಟ್ಟ ಸಂದಿಗ್ಧಗಳ ಕಾರಣದಿಂದಾಗಿ ಬಹುತೇಕ ಶೈಕ್ಷಣಿಕ ಸಂಸ್ಥೆಗಳು ಮುಚ್ಚಬೇಕಾಗಿ ಬಂದು ಹೆಣ್ಣು ಮಕ್ಕಳ ಶಾಲಾ ದಾಖಲಾತಿ–ಹಾಜರಾತಿಗಳಲ್ಲಿ ಸಾಧಿಸಿದ್ಧ ಮುನ್ನಡೆಗೆ ತೀವ್ರ ಆಘಾತವಾಗಿ ಶೈಕ್ಷಣಿಕ ಪ್ರಗತಿ ಒಂದು ತಲೆಮಾರಿನಷ್ಟೇ ಹಿಂದೆ ಸರಿಯಿತು. ಸುಮಾರು ಎರಡು ವರ್ಷಗಳೇ ಕಳೆದು ಹೋದಂತಾಗಿದ್ದು, ಬಾಲ್ಯ ವಿವಾಹಗಳ ಸಂಖ್ಯೆ ಹೆಚ್ಚಾದದ್ದು, ಆನ್‌ಲೈನ್ ತರಗತಿಗಳ ಸೌಲಭ್ಯವನ್ನು ಬಳಸಿಕೊಳ್ಳಲು ಹೆಚ್ಚು–ಕಡಿಮೆ 40 % ಮಕ್ಕಳು ವಿಫಲರಾದದ್ದು–ಇವೆಲ್ಲವೂ ಶೈಕ್ಷಣಿಕ ಹಿಂಬೀಳಿಕೆಗೆ ಕಾರಣವಾದುವು. ಈ ಎಲ್ಲ ಪರಿಸ್ಥಿತಿಗಳ ನಡುವೆಯೂ ಭಾರತದ ಮಹಿಳೆಯರು ಶೈಕ್ಷಣಿಕ ಪ್ರಗತಿಯನ್ನು ಸಾಧಿಸುತ್ತಿದ್ದಾರೆ ಎಂದರೆ ಅದು ಹೆಮ್ಮೆಪಡಬೇಕಾದ ಸಂಗತಿಯೇ ಸರಿ.

ಆರೋಗ್ಯ ಮತ್ತು ಜೀವಿತಾವಧಿ ಎಂಬ ನಾಲ್ಕನೇ ಸೂಚ್ಯಂಕದಲ್ಲಿ ಭಾರತ ಕಟ್ಟ ಕಡೆಯ ಸ್ಥಾನದಲ್ಲಿರುವುದು ಆಶ್ಚರ್ಯ ಮತ್ತು ಆತಂಕಗಳೆರಡನ್ನೂ ಮೂಡಿಸಿದೆ. ಒಂದು ದೇಶದ ಲಿಂಗಾನುಪಾತ, ಜೀವಿತಾವಧಿ, ಆರೋಗ್ಯ ರಕ್ಷಣಾ ವ್ಯವಸ್ಥೆಯ ಸೌಲಭ್ಯವನ್ನು ಪಡೆಯಲು ಇರುವ ಅವಕಾಶಗಳು ಮುಂತಾದ ಅಂಶಗಳ ಆಧಾರದ ಮೇಲೆ ಆ ದೇಶದ ಸ್ಥಾನವನ್ನು ಅಳೆಯಲಾಗುತ್ತದೆ. ಭಾರತದಲ್ಲಿ ಈಗ ಲಿಂಗಾನುಪಾತ(ಪ್ರತಿ 1000 ಪುರುಷರಿಗೆ ಇರುವ ಸ್ತ್ರೀಯರ ಸಂಖ್ಯೆ) ಮಹಿಳೆಯರ ಪರವಾಗಿದ್ದು ಹಾಲಿ ಪ್ರತಿ 1000ಪುರುಷರಿಗೆ 1020 ಸ್ತ್ರೀಯರಿದ್ದಾರೆ. ಈಗ ಮಾತೃ ಮೃತ್ಯತೆಯ ಪ್ರಮಾಣವೂ ಕಡಿಮೆಯಾಗುತ್ತಿದೆ, ಸ್ತ್ರೀ ಜೀವಿತಾಪೇಕ್ಷವೂ (72. 7 ವರ್ಷಗಳು) ಪುರುಷರಿಗಿಂತ(69.4ವರ್ಷಗಳು) ಹೆಚ್ಚಿದೆ. ಫಲಿತತೆಯ ಪ್ರಮಾಣವೂ ಇಳಿಮುಖ ವಾಗುತ್ತಿದ್ದು ವಿವಾಹದ ಸರಾಸರಿ ವಯಸ್ಸೂ ಕ್ರಮೇಣ ಏರುತ್ತಿದೆ. ಆದರೂ ಏಕೆ ಭಾರತದ ಮಹಿಳೆಯರ ಆರೋಗ್ಯ ಪರಿಸ್ಥಿತಿ ಏಕಿಷ್ಟು ಕಳವಳಕಾರಿಯಾಗಿದೆ? ಇದಕ್ಕೆ ಮುಖ್ಯ ಕಾರಣಗಳೆಂದರೆ ಅನೇಕೆಡೆಗಳಲ್ಲಿ ಸಮರ್ಥ ಸಾರ್ವಜನಿಕ ಆರೋಗ್ಯ ಸೇವೆಗಳ ಅಲಭ್ಯತೆ, ದುಬಾರಿ ಖಾಸಗಿ ವ್ಯವಸ್ಥೆಯನ್ನು ಬಳಸಲು ಆಗದಂತಹ ಸ್ಥಿತಿ, ವಿಶೇಷವಾಗಿ ಕೋವಿಡ್ ಸಂದರ್ಭದಲ್ಲಿ ಸಂತಾನೋತ್ಪತ್ತಿ ಆರೋಗ್ಯ ವ್ಯವಸ್ಥೆಯಲ್ಲಿ ಉಂಟಾದ ಏರುಪೇರುಗಳು ಮತ್ತು ಮಹಿಳೆಯರ ಮೇಲೆ ನಿರಂತರವಾಗಿ ನಡೆಯುತ್ತಿರುವ ಕೌಟುಂಬಿಕ ದೌರ್ಜನ್ಯಗಳು.

ಭಾರತದ ಎಲ್ಲ ಸ್ತ್ರೀಯರ ಬದುಕಿನ ಪರಿಸ್ಥಿತಿಗಳೂ ಏಕಪ್ರಕಾರವಾಗಿಲ್ಲ, ಏಕೆಂದರೆ ಇವರು ಒಂದು ಸಮರೂಪ ವರ್ಗವಲ್ಲ.ಮಿಗಿಲಾಗಿ ನಮ್ಮ ದೇಶದಲ್ಲಿ ಕಂಡು ಬರುವ ಪ್ರಾದೇಶಿಕ ಭಿನ್ನತೆಯನ್ನೂ ನಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಆದರೂ ನಾವು ಇದುವರೆಗೂ ಸಾಧಿಸಿರುವ ಲಿಂಗ ಸಮಾನತೆಯನ್ನು ಕಳೆದುಕೊಳ್ಳದಿರಲು ಈ ವರದಿ ನೀಡಿರುವ ಮಾಹಿತಿಯನ್ನು ಗಂಭೀರವಾಗಿ ಪರಿಗಣಿಸುವುದು ಅಗತ್ಯ

ಇಂದು ರಾಷ್ಟ್ರಪತಿ ಚುನಾವಣೆ ಫಲಿತಾಂಶ

ಎನ್‌ಡಿಎ ಅಭ್ಯರ್ಥಿ ಮುರ್ಮು ಭಾರೀ ಗೆಲುವಿನ ನಿರೀಕ್ಷೆ

ನವದೆಹಲಿ, ಜು.20– ದೇಶದ 15ನೇ ರಾಷ್ಟ್ರಪತಿ ಚುನಾವಣೆಯ ಫಲಿತಾಂಶ ನಾಳೆ (ಗುರುವಾರ) ಪ್ರಕಟವಾಗಲಿದೆ.

ನಾಳೆ ಬೆಳಗ್ಗೆ 11 ಗಂಟೆಗೆ ದೆಹಲಿಯ ಸಂಸತ್ ಭವನದ ಮೊದಲ ಮಹಡಿಯ ಕೊಠಡಿ ಸಂಖ್ಯೆ 63ರಲ್ಲಿ ಮತಗಳ ಎಣಿಕೆ ಆರಂಭವಾಗಲಿದ್ದು, ಮಧ್ಯಾಹ್ನದ ನಂತರ ಫಲಿತಾಂಶ ಪ್ರಕಟವಾಗಲಿದೆ. ಮತಗಳ ಎಣಿಕೆ ಸುದ್ದಿವಾಹಿನಿಗಳಲ್ಲಿ ನೇರಪ್ರಸಾರವಾಗಲಿದೆ. ಜು.18ರಂದು ನೂತನ ರಾಷ್ಟ್ರಪತಿ ಆಯ್ಕೆಗಾಗಿ ಚುನಾವಣೆ ನಡೆದಿತ್ತು. ಅಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ಸಂಸತ್ ಭವನ ಹಾಗೂ ರಾಜ್ಯ ವಿಧಾನಸಭೆಗಳಲ್ಲಿನ 30 ಕೇಂದ್ರಗಳಲ್ಲಿ ಮತದಾನ ನಡೆದಿತ್ತು. ಶೇ.99.18 ರಷ್ಟು ಮತದಾನವಾಗಿದ್ದರೆ, 11 ರಾಜ್ಯಗಳಲ್ಲಿ ಶೇ.100ರಷ್ಟು ಮತ ಚಲಾವಣೆಯಾಗಿತ್ತು. ಎನ್‌ಡಿಎ ಅಭ್ಯರ್ಥಿಯಾಗಿ ದ್ರೌಪತಿ ಮುರ್ಮು ಮತ್ತು ವಿರೋಧ ಪಕ್ಷದ ಅಭ್ಯರ್ಥಿಯಾಗಿ ಯಶ್ವಂತ್‌ಸಿನ್ಹಾ ಸ್ಪರ್ಧಿಸಿದ್ದರು. ಬುಡಕಟ್ಟು ಜನಾಂಗದ ನಾಯಕಿಯಾಗಿರುವ ಮುರ್ಮು ಈ ಹಿಂದೆ ಜಾರ್ಖಂಡ್ ರಾಜ್ಯಪಾಲರಾಗಿದ್ದರು. ಯಶ್ವಂತ್ ಸಿನ್ಹಾ ಸಹ ಕೇಂದ್ರದಲ್ಲಿ ಎರಡು ಬಾರಿ ಹಣಕಾಸು ಸಚಿವರಾಗಿ ಸೇವೆ ಸಲ್ಲಿಸಿದ್ದರು. ಈ ಬಾರಿ ರಾಷ್ಟ್ರಪತಿ ಚುನಾವಣೆಯಲ್ಲಿ 4800 ಸಂಸದರು ಹಾಗೂ ಶಾಸಕರು ತಮ್ಮ ಮತ ಚಲಾಯಿಸಿದ್ದರು.



ದ್ರೌಪದಿ ಮುರ್ಮು



ಯಶವಂತ್ ಸಿನ್ಹಾ

ಸಿಎಂ ಬೊಮ್ಮಾಯಿ ಸಂಪುಟದ ಮಿನಿ ವಿಸ್ತರಣೆ?

ಬೆಂಗಳೂರು, ಜು.20– ರಾಜ್ಯ ಬಿಜೆಪಿ ನೇತೃತ್ವದ ಸರ್ಕಾರದ ಸಚಿವ ಸಂಪುಟ ಶೀಘ್ರ ಸಣ್ಣದಾಗಿ ವಿಸ್ತರಣೆಯಾಗುವ ಸಾಧ್ಯತೆಗಳಿವೆ.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜು.25 ಹಾಗೂ 26ರಂದು ದೆಹಲಿಯಲ್ಲಿ ಬಿಡಾರ ಹೂಡಲಿದ್ದು, ಆ ಎರಡು ದಿನ ವರಿಷ್ಠರೊಂದಿಗೆ ಮಹತ್ವದ ಚರ್ಚೆ ನಡೆಸಲಿದ್ದಾರೆ. ಸಂಪುಟ ವಿಸ್ತರಣೆ ಖಚಿತವಾದಲ್ಲಿ ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಪ್ರಕರಣದಲ್ಲಿ ಬಿ ರಿಪೋರ್ಟ್ ಸಲ್ಲಿಕೆ ಆಗಿರುವ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಮತ್ತೆ ಸಂಪುಟ ಸೇರ್ಪಡೆಯಾಗುವ ಸಾಧ್ಯತೆಗಳು ಹೆಚ್ಚಿವೆ. ಇವರೊಂದಿಗೆ ಲೈಂಗಿಕ ಹಗರಣದಲ್ಲಿ ಸಿಲುಕಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ರಮೇಶ್ ಜಾರಕಿಹೊಳಿ ಇನ್ನೂ ಪ್ರಕರಣದಿಂದ ಮುಕ್ತವಾಗದೇ ಇರುವುದರಿಂದ ಅವರ ಸೇರ್ಪಡೆ ಅನುಮಾನ. ಈಗಾಗಲೇ ಸಚಿವ ಸ್ಥಾನದ ಆಕಾಂಕ್ಷಿಗಳಾಗಿರುವ ಪ್ರಾಮಾಣಿಕ ಹಾಗೂ ಪಕ್ಷ ನಿಷ್ಠರಿಗೆ ಅವಕಾಶ ನೀಡುವ ಸಾಧ್ಯತೆಗಳಿವೆ. ಒಂದು ವೇಳೆ ವರಿಷ್ಠರು ಸಂಪುಟ ವಿಸ್ತರಣೆಗೆ ಅನುಮತಿ ನೀಡಿದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಸಂಪುಟವನ್ನು ಸಣ್ಣದಾಗಿ ವಿಸ್ತರಿಸುವ ಉದ್ದೇಶ ಹೊಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ನಾಗೇಂದ್ರ ಭೂಮಿಪೂಜೆ



ಮೈಸೂರು ವಾರ್ಡ್ ನಂ.26ರ ವ್ಯಾಪ್ತಿಯಲ್ಲಿ ಪಾಲಿಕೆ ಸಾಮಾನ್ಯ ಅನುದಾನದಲ್ಲಿ ಕೋಟಿ ರೂ. ವೆಚ್ಚದಲ್ಲಿ ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಭೂಮಿಪೂಜೆ ನೆರವೇರಿಸಿದರು. ಈ ವೇಳೆ ಪಾಲಿಕೆ ಉಪ ಆಯುಕ್ತ ಮಹೇಶ್, ಕಾರ್ಯಪಾಲಕ ಇಂಜಿನಿಯರ್ ಸಿಂಧು, ಅಭಿವೃದ್ಧಿ ಅಧಿಕಾರಿ ರಾಜೀವ್‌ನಾಥ್, ಮಾಜಿ ಕಾರ್ಪೊರೇಟರ್ ಬಾಬು, ಚಾಮರಾಜ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಪುನೀತ್, ದಿನೇಶ್‌ಗೌಡ, ತನ್ವೀರ್, ತಬ್ರೇಜ್, ಶ್ರೀಕಾಂತ್, ಹನೀಮ್, ಸುನ್ನತ್, ಸಲೀಂ, ಮಿರ್ಜಾ ಇಮಾಯುಲ್, ಅಕ್ರಂ, ತೌಶಿಫ್, ಇಂಜುಮಾಮ್, ತನುಜಾ, ಗುತ್ತಿಗೆದಾರರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಚಾಮುಂಡೇಶ್ವರಿ ವರ್ಧಂತಿ ಉತ್ಸವ

ಅಂದಿನಿಂದ ಪ್ರತಿವರ್ಷ, ಈ ದಿನವನ್ನು ವರ್ಧಂತಿ ಮಹೋತ್ಸವ ಎಂದು, ವಿಶೇಷ ಪೂಜೆಯೊಂದಿಗೆ ಆಚರಿಸಲಾಗುತ್ತದೆ. ಮುಂಜಾನೆ 3 ಗಂಟೆಯಿಂದ ಆರಂಭವಾದ ವಿಶೇಷ ಪೂಜೆ ಬೆಳಗ್ಗೆ 7.45ರವರೆಗೂ ನಡೆಯಿತು. ನಂತರ ಬೆಳಗ್ಗೆ 8 ಗಂಟೆಗೆ ಭಕ್ತರಿಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಯಿತು. ಆದರೆ ಮುಂಜಾನೆ 3 ಗಂಟೆಯಿಂದಲೇ ಬೆಟ್ಟಕ್ಕೆ ಬಂದಿದ್ದ ಭಕ್ತರು ಧರ್ಮ ದರ್ಶನ ಹಾಗೂ 300 ರೂ. ಟಿಕೆಟ್ ಪಡೆದು ವಿಶೇಷ ದರ್ಶನ ಸಾಲಿನಲ್ಲಿ ನಿಂತಿದ್ದರು. ಬೆಟ್ಟದಲ್ಲಿ ಭಕ್ತರ ಜಂಗುಳಿ ಹೆಚ್ಚಾಗಿ ಕಂಡು ಬಂದಿತು.

ವಿಶೇಷ ಪೂಜೆ: ದೇವಾಲಯದಲ್ಲಿ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ಸಮ್ಮುಖದಲ್ಲಿ ಗರ್ಭಗುಡಿಯ ದೇವಿಯ ಮೂರ್ತಿಗೆ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು. ಮುಂಜಾನೆ 3 ಗಂಟೆಯಿಂದಲೇ ಅಭ್ಯಂಜನ(ಎಣ್ಣೆಸ್ನಾನ), ಮಹಾನ್ಯಾಸ ಪೂರ್ವಕ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಸಹಸ್ರನಾಮಾರ್ಚನೆ, ತ್ರಿಪದಿ, ಅಷ್ಟೋತ್ತರ ಪೂಜೆ ನಂತರ ಮಂಗಳಾರತಿ ಆಯಿತು. ಸಂಜೆ 4.30ಕ್ಕೆ ಕೈತೋಳ್ ಉತ್ಸವ(ಉತ್ಸವ ಮೂರ್ತಿಯನ್ನು ಹೆಗಲ ಮೇಲೆ ಹೊತ್ತು ಸಾಗುವುದು) ನೆರವೇರಿತು. ರಾತ್ರಿ 8.30ಕ್ಕೆ ಉತ್ಸವ ಪೂಜೆ, 8.45ಕ್ಕೆ ದರ್ಬಾರ್ ಉತ್ಸವ ನೆರವೇರಿಸಲಾಯಿತು. ರಾತ್ರಿ 9.30ಕ್ಕೆ ದೇವಾಲಯ ಬಂದ್ ಮಾಡಲಾಯಿತು.

ವಿಜೃಂಭಣೆಯ ಅಡ್ಡ ಪಲ್ಲಕ್ಕಿ ಉತ್ಸವ: ಪ್ರತಿ ವರ್ಷ ವರ್ಧಂತಿ ಮಹೋತ್ಸವದಂದು ಚಿನ್ನದ ಅಡ್ಡ ಪಲ್ಲಕ್ಕಿ ಉತ್ಸವ ನೆರವೇರುತ್ತದೆ. ಇಂದು ಬೆಳಗ್ಗೆ 9.15ಕ್ಕೆ ಮಂಗಳಾರತಿ ನಂತರ ಚಿನ್ನದ ಆಭರಣಗಳಿಂದ ಅಲಂಕರಿಸಿದ್ದ ಉತ್ಸವ ಮೂರ್ತಿಯನ್ನು ಬಿರುದು ಬಾವಲಿಯೊಂದಿಗೆ ದೇವಾಲಯದ ಹೊರಗೆ ತಂದು ಚಿನ್ನದ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಲಾಯಿತು. 9.30ಕ್ಕೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಕುಮಾರಿ ಒಡೆಯರ್, ಅಡ್ಡ ಪಲ್ಲಕ್ಕಿ ಉತ್ಸವಕ್ಕೆ ಚಾಲನೆ ನೀಡಿದರು. ಮಂಗಳವಾದ್ಯ, ಪೊಲೀಸ್ ಬ್ಯಾಂಡ್ ವಾದನ, ಅರಮನೆಯ ಛತ್ರಿ, ಛಾಮರ, ಬಿರುದು, ಬಾವಲಿಗಳೊಂದಿಗೆ ದೇವಾಲಯದ ಸುತ್ತ ಒಂದು ಸುತ್ತು ಮೆರವಣಿಗೆ ಮಾಡಲಾಯಿತು.

ಗಣ್ಯರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಚನ್ನಮ್ಮ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಚಿವರಾದ ಎಸ್.ಟಿ.ಸೋಮಶೇಖರ್, ಗೋವಿಂದ ಕಾರಜೋಳ, ಶಾಸಕರಾದ ಎಸ್.ಎ.ರಾಮದಾಸ್, ಜಿ.ಟಿ.ದೇವೇಗೌಡ, ಎಲ್.ನಾಗೇಂದ್ರ, ನಿರಂಜನ್‌ಕುಮಾರ್, ಮುಖಂಡ ರಘು ಆರ್.ಕೌಟಿಲ್ಯ ಸೇರಿದಂತೆ ಇನ್ನಿತರರು ದೇವಾಲಯಕ್ಕೆ ಆಗಮಿಸಿ ದೇವಿಯ ದರ್ಶನ ಪಡೆದರು.

ಹೆಚ್ಚುವರಿ ಬಸ್: ಎಂದಿನಂತೆ ಲಲಿತಮಹಲ್ ಪ್ಯಾಲೇಸ್ ಮೈದಾನದಿಂದ ಚಾಮುಂಡಿಬೆಟ್ಟಕ್ಕೆ ಉಚಿತ ಬಸ್ ವ್ಯವಸ್ಥೆ ಮಾಡಲಾಗಿತ್ತು. ಸಾರಿಗೆ ಸಂಸ್ಥೆಯ 30ಕ್ಕೂ ಹೆಚ್ಚು ಬಸ್ಸುಗಳು ಭಕ್ತರನ್ನು ಕರೆದೊಯ್ಯಲು ನಿಯೋಜಿಸಲಾಗಿತ್ತು. ಈ ನಡುವೆ ನಗರ ಬಸ್ ನಿಲ್ದಾಣದಿಂದಲೂ ಹೆಚ್ಚುವರಿ ಬಸ್ ವ್ಯವಸ್ಥೆ ಕಲ್ಪಿಸಲಾಗಿತ್ತು.

ಸಿಹಿ ವಿತರಣೆ: ಇಂದು ಚಾಮುಂಡಿಬೆಟ್ಟ, ಬೆಟ್ಟದ ತಪ್ಪಲು, ಮೆಟ್ಟಿಲು ಮಾರ್ಗದಲ್ಲಿ ಭಕ್ತರಿಗೆ ಲಾಡು, ಪೇಡ, ಕೇಸರಿಬಾತ್, ಮೈಸೂರು ಪಾಕ್ ಸೇರಿದಂತೆ ವಿವಿಧ ಬಗೆಯ ಸಿಹಿ ವಿತರಿಸಲಾಯಿತು. ಇದಲ್ಲದೆ ಮೊಸರನ್ನ, ರೈಸ್‌ಬಾತ್ ಅನ್ನು ಭಕ್ತರಿಗೆ ವಿತರಿಸಲಾಯಿತು.

ಮೈಸೂರಿನ ವಿವಿಧೆಡೆ ಪೂಜೆ: ವರ್ಧಂತಿ ಮಹೋತ್ಸವದ ಅಂಗವಾಗಿ ಮೈಸೂರಿನ ವಿವಿಧ ಬಡಾವಣೆಗಳಲ್ಲಿ, ಆಟೋರಿಕ್ಷಾ ನಿಲ್ದಾಣಗಳಲ್ಲಿಯೂ ಭಕ್ತಿ–ಭಾವದಿಂದ ದೇವಿಗೆ ಪೂಜೆ ನೆರವೇರಿಸಿ ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

ಮೈಸೂರು ನಗರದಾದ್ಯಂತ ವರ್ಧಂತ್ಯುತ್ಸವ: ಮೈಸೂರು ನಗರದಾದ್ಯಂತ ವರ್ಧಂತ್ಯುತ್ಸವದ ಅಂಗವಾಗಿ ವಿಶೇಷ ಪೂಜೆಗಳು ನೆರವೇರಿದವು. ಕೆ.ಜಿ.ಕೊಪ್ಪಲಿನ ಬಂದಂತಮ್ಮ ದೇವಾಲಯ, ರೈಲ್ವೆ ಗೇಟ್ ಬಳಿ ಚಾಮುಂಡೇಶ್ವರಿ ದೇವಾಲಯ, ಅಗ್ರಹಾರದ ಜೆಎಸ್‌ಎಸ್ ಆಸ್ಪತ್ರೆಯ ಬಳಿ ಇರುವ ಚಾಮುಂಡೇಶ್ವರಿ ದೇವಾಲಯದಲ್ಲಿಯೂ ವಿಶೇಷ ಪೂಜೆ ಜರುಗಿದವು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

ಫ್ಲೋರ್ ಮಿಲ್ ಬಾಡಿಗೆಗೆ ಲಭ್ಯ
ಮೈಸೂರಿನ ಹೆಬ್ಬಾಳು ಸೂರ್ಯ ಬೇಕರಿ ಬಳಿ 4 ಫ್ಲೋರ್ ಮಿಲ್‌ವುಳ್ಳ (2 ಪ್ಲೇಟ್ ಮಿಲ್‌ಗಳು, 2 ಸ್ಟೋನ್ ಮಿಲ್‌ಗಳು), 1 ಡೀಸ್ಟೋನರ್, 1 ಪಾಲಿಷರ್ ಹಾಗೂ 1 ಚಿಲ್ಲಿ ಕಟರ್ 20 ಹೆಚ್‌ಪಿ ಪವರ್ ಸಪ್ಲೈನೊಂದಿಗೆ ಬಾಡಿಗೆಗೆ ಲಭ್ಯವಿದೆ.
9901212321, 8880883339

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷಿನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ವಿಕ್ಕಿ ಸ್ಪೋರ್ಟ್ಸ್‌ವೇರ್
K.G.ಕೊಪ್ಪಲು ಮೈಸೂರು
ಟಿ–ಶರ್ಟ್‌ಗಳು
ರೂ–100, ರೂ–150, ರೂ.–200 ರೂ.–250, ರೂ.–300, ರೂ.–350
ಗ್ರಾಹಕರು 600 ರೂ ಮೇಲ್ಪಟ್ಟು ಖರೀದಿಸಿದರೆ (ಷರತ್ತುಗಳು ಅನ್ವಯಿಸುತ್ತವೆ.) 300 ರೂ. ಬೆಲೆಯ ಟಿ–ಶರ್ಟ್ ಉಚಿತ
8088812221

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ಮನೆ ಮಾರಾಟಕ್ಕಿದೆ
ರಾಮಕೃಷ್ಣನಗರ E & F ಬ್ಲಾಕ್ 20x30 12ನೇ ಕ್ರಾಸ್
9731343433

ಬೇಕಾಗಿದ್ದಾರೆ
ಮೈಸೂರು ನಗರಾದ್ಯಂತ ದಿನಸಿ ವಸ್ತುಗಳನ್ನು ಸರಬರಾಜು ಮಾಡಲು ದ್ವಿಚಕ್ರ ವಾಹನ ಹಾಗೂ ವಾಹನ ಚಾಲನಾ ಪರವಾನಗಿ (ಲೈಸೆನ್ಸ್) ಹೊಂದಿರುವ 35 ವರ್ಷ ಒಳಪಟ್ಟಿರುವ ಪುರುಷರು ಬೇಕಾಗಿದ್ದಾರೆ. ವೇತನ: 15,000 ರಿಂದ 18,000 ವರೆಗೆ. ಸಂಪರ್ಕಿಸಿ:
9036461347

WANTED
Captain, Cashier, Supervisor, Room Boys, Waiters, Asst. Waiters,
Full time & Part time
Attractive Salary, PF & ESI with food and accommodation
Contact: Parklane Hotel
2720, Harsha Road, Mysore - 01

ಕಳೆದುಹೋಗಿದೆ
ಮನೆ ನಂ. 175/2, ಕಾವೇರಿ ಮುಖ್ಯ ರಸ್ತೆ, 7ನೇ ಕ್ರಾಸ್, ರಾಘವೇಂದ್ರನಗರ, ಮೈಸೂರು ಇದರ ಮೂಲ ದಾಖಲಾತಿಗಳು, ಓಲ್ಡರ್ ಖಾತಾ ಹಾಗೂ ಇನ್ನಿತರೆ ಪತ್ರಗಳು ಕಳೆದು ಹೋಗಿರುತ್ತದೆ. ಯಾರಿಗಾದರೂ ದೊರೆತಲ್ಲಿ ಈ ವಿಳಾಸಕ್ಕೆ ತಲುಪಿಸಲು ಕೋರಿದೆ.
Mob: 9606193832

Ideal School, Yelawala English Medium
Wanted Teachers
PUC, D.Ed., B.A., D.Ed, B.A, B.Sc, Hindi. Contact
9900593211
9845353761

ಸೈಟು ಮಾರಾಟಕ್ಕಿದೆ
40x69
7ನೇ ಕ್ರಾಸ್, ವಿ.ವಿ.ನಗರ, ಸೋಮೇಶ್ವರ ಛತ್ರದ ರಸ್ತೆ, ಕಲ್ಲಹಳ್ಳಿ, ಮಂಡ್ಯ
9449620605

TEACHERS REQUIRED
A.K.ACADEMY,
English Medium-2022-2023,
Bannimantap, 'B' Layout, Mysore-570015.
1. High School: 1.B.Sc., B.Ed., (PCMB)
2. High School: 2. B.A, B.Ed., (Hindi)
Contact:
8861977636
(Timing 10.30am to 1.00pm)

WANTED
Security Field Officer (Male) Candidate
Experience should have 2-3 years Fresher's, BSF & Ex-Serviceman can also apply with good communication Skill
nimishpvtltd@gmail.com
9513999755

WANTED
Well Experienced Security Field Officer with Good Communication Wanted Immediately.
Place of Work: Nanjangud
0821-4852002
9035269781

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

Site for Sale
40x60, R.I. Layout, 4th Stage, Vijayanagar, Near N.P.S. School
94480-54390

Mineral Water Factory Equipment for Sale.Contact:
9742934598
9480966998

ಬೈಕ್ ರೈಡರ್ ಬೇಕಾಗಿದ್ದಾರೆ
ರಾಪಿಡೋ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/- ವರೆಗೂ ಸಂಪಾದಿಸಿ. ಅಗತ್ಯ ದಾಖಲೆಗಳು DL, ವಾಹನದ ದಾಖಲೆಗಳು ಮತ್ತು ಆಧಾರ್. ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ.
04045209698

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು.
Mob.: 9986926101

ITI ಗೆ ಪ್ರವೇಶಾವಕಾಶ
ITI (Fitter - NSQF) ವೃತ್ತಿಗೆ SSLC/PUC Pass or Fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ.
Benaka ITI
(NCVT ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ)
Near Cauvery Circle, Dr|| Rajkumar Road, Raghavendra Nagar, Mysore.
9342123467 / 9141756695

ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್
8.09.2022, 14 ದಿನಗಳ ಯುಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದರಿನಾಥ್, ಚಾರ್ಧಾಮ್ ಪ್ರವಾಸ. 05–10–2022, 16 ದಿನಗಳ ಅಷ್ಟ ಜ್ಯೋತಿರ್ಲಿಂಗ ದರ್ಶನ, ನಾಸಿಕ್, ಶಿರಡಿ, ಓಂಕಾರೇಶ್ವರ್, ಉಜ್ಜಯಿನಿ ಮಹಾಕಾಳೇಶ್ವರ, ವಲ್ಲಭ ಬಾಯಿ ಪಟೇಲರ ಪ್ರತಿಮೆ, ದ್ವಾರಕಾ, ಸೋಮನಾಥ್, ಮಾತೃಗಯಾ ಸಂಪರ್ಕಿಸಿ: ತ್ಯಾಗರಾಜನಗರ, ಬೆಂಗಳೂರು–70
9342287551 / 8050629305

ತಕ್ಷಣ ಬೇಕಾಗಿದ್ದಾರೆ
HOME BASSED
E-CODE GAS SAFE

EDUCATION	WORK TIME	SALARY
SSLC,PUC,DIP Any Degree	4 HOURS	12000/-

ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲಿ ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ
android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226

ಟೈಲರಿಂಗ್ ತರಬೇತಿ
ನಮ್ಮಲ್ಲಿ ನುರಿತ ತರಬೇತುದಾರರಿಂದ ಟೈಲರಿಂಗ್ ತರಬೇತಿ ನೀಡಲಾಗುತ್ತದೆ.
ಇಂದೇ ಸಂಪರ್ಕಿಸಿ:
ಗಾನವಿ ಇಂಟರ್ ನ್ಯಾಷನಲ್
22/2, ಚಂದ್ರಗುಪ್ತ ರಸ್ತೆ, ಸಂಗಮ್ ಥಿಯೇಟರ್ ಹತ್ತಿರ, ಮೈಸೂರು.
6360737581 / 8123819136
9590666328

ತಕ್ಷಣ ಬೇಕಾಗಿದ್ದಾರೆ
ಹುಣಸೂರಿನ ಕಟ್ಟೆಮಳವಾಡಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & ಮೇಲ್ಪಟ್ಟು, ಸಂಬಳ: 14,500/- , ವಯೋಮಿತಿ :– 45 ವರ್ಷದ ಒಳಗೆ, ESI ಮತ್ತು PF ಸೌಲಭ್ಯವಿರುತ್ತದೆ.
ಸಂಪರ್ಕಿಸಬೇಕಾದ ಸಂಖ್ಯೆಗಳು:
9620667819 / 9620777819

S.M GOLD
ಗಿರವಿ ಚಿನ್ನಾಭರಣ ಖರೀದಿ
22 ಕ್ಯಾರೆಟ್ ಗೋಲ್ಡ್ 10 ಗ್ರಾಂ ಚಿನ್ನಕ್ಕೆ 45500
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ – (T&C)
6364414499

Join ASFT Fashion Design Courses
* Certification Course
* Diploma Course
* Advance Diploma Course

Alpha School of Fashion Technology & Interior Design
AT: SRIRAMPURA, GOKULAM, UDAYAGIRI, MYSORE
Mob: 7829937469, 9901803394

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಬೇಕಾಗಿದ್ದಾರೆ
ಲೀಡಿಂಗ್ ಆಟೋ ಮೊಬೈಲ್ ಡೀಲರ್‌ಶಿಪ್, ಮೈಸೂರು
0821-2404555 / 9632263202
kshatriyaforcesales@gmail.com
ಸರ್ವಿಸ್ ಮ್ಯಾನೇಜರ್ / ಆಟೋಮೊಬೈಲ್ ಕ್ಷೇತ್ರದಲ್ಲಿ ಉತ್ತಮ ಅನುಭವ ಹೊಂದಿರಬೇಕು. ಸೇಲ್ಸ್ ಎಕ್ಸಿಕ್ಯುಟಿವ್/ ಮೆಕ್ಯಾನಿಕ್ಸ್ / ಟಿಂಕರಿಂಗ್/ ಎಲೆಕ್ಟ್ರಿಷಿಯನ್, ಆಟೋಮೊಬೈಲ್ ಕ್ಷೇತ್ರದಲ್ಲಿ ಉತ್ತಮ ಅನುಭವ

HOUSE FOR SALE
MUDA Property
30x20 N/F
2 Partion House in Hebbal 1st Stage, Near CITB Chowltry, Mysore
Price: 70 Lakhs
7348958463

ಸೆಕ್ಯೂರಿಟಿ ಗಾರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ
ದೇವೇಗೌಡ ಸರ್ಕಲ್‌ನಲ್ಲಿ MNC ಕಂಪನಿಯಲ್ಲಿ ಹೆಬ್ಬಾಳ್ ಇಂಡಸ್ಟ್ರೀಸ್‌ನಲ್ಲಿ, ಗದ್ದಿಗೆ ರಸ್ತೆಯ ಕಂಪನಿಯಲ್ಲಿ, ದೊಡ್ಡಗಡಿಯಾರದ ಹತ್ತಿರ ಆಫೀಸ್‌ನಲ್ಲಿ ಸೆಕ್ಯೂರಿಟಿಗಾರ್ಡ್‌ಗಳು ಹಾಗೂ ಅರಸುರೋಡ್‌ನ ಬಟ್ಟೆ ಶೋ ರೂಂನಲ್ಲಿ ಕೆಲಸ ಮಾಡಲು ಹೌಸ್‌ಕೀಪಿಂಗ್‌ಹುಡುಗರು ಬೇಕಾಗಿದ್ದಾರೆ.
9035050656 / 9035050653

CHANGE OF NAME
I, Bhagyamma, residing at No. 855, 3rd Stage, 1st Cross, Naidunagar, Kesare, Mysuru-570 007, have changed my name as Bhavana. C., on my own free will, in front of Notary A.M. Sumithra on 18.7.2022. I declare that I shall at times hereafter in all my records, deeds and writings and in all proceedings, dealings and transactions, private as well as upon all occasions whatsoever use and sign the name of Bhavana. C. Sd/- Bhavana. C.

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ.
ಆಸಕ್ತರು ಸಂಪರ್ಕಿಸಿ:
7676844160
6361056646

FOR SALE
A) 30x40 HD Kote Road 12 lakhs
B) 30x50 Saptamantruke Layout attch 28 L
C) 40x60 Bannur Road KBL Layout
D) 20x30 G+1 New House University Layout
E)12 /36 house near Vijay bank circle Kuvempu nagar. Prakruthi Properties
90359 90359 / 95386 90359

FOR SALE
* 30x40 WF site for sale in Lalithamahal Nagar
* 30x50 corner site for sale in shadara layout attached Srinagar
* 40x60 WF site for sale in Bogadi 2 Nd stage
* 40*60 WF site for sale in shadara layout attached Srinagar

9880344263

PART TIME WORK
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ 3000/– ರಿಂದ 5000/– ಮೇಲ್ಪಟ್ಟು ಕೊರಿಯರ್ ಸೌಲಭ್ಯವಿದೆ.
9743217566
9108418233

ಬೇಕಾಗಿದ್ದಾರೆ
ಡೆಲಿವರಿ ಬಾಯ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸಂಬಳ 12000/-
Ph.9380142144

ಕೂಡಲೇ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ / ಇಲ್ಲದ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ:
ಶ್ರೀ ಭಗವಾನ್ ಸಿಲ್ಕ್ಸ್
ಕೆ.ಆರ್. ಸರ್ಕಲ್, ಮೈಸೂರು

WANTED TEACHERS
Tailoring
Fashion Designer
Beautician
Computer
Hand embroidery
Location: Mysore & Nanjangud
8310287187
9880604416

WANTED
1. Accountant (Tally Trained)
2. Designer & DTP Operator Fresher & Experienced
3. Printing machine helpers

9448067939
9739569260

IMMIDIATE HIRING IN MYSORE
Accountant Required
Qualification: ITI, Diploma, Any Degree, Salary: 15,000-30,000, Age Limit: Below 35, Applicable for Male Candidates only
9880151303 / 6366638189

ವಾಹನ ಬೇಕಾಗಿದೆ
ವೃದ್ಧಾಶ್ರಮಕ್ಕೆ ಯಾವುದೇ ಮಾಡೆಲ್‌ನ ಬಿಳಿ ಬಣ್ಣದ ಮಾರುತಿ ವ್ಯಾನ್ ಬೇಕಾಗಿದೆ. ಆಸಕ್ತರು ದಯವಿಟ್ಟು ಸಂಪರ್ಕಿಸಿ
8095224800

ತಕ್ಷಣ ಬೇಕಾಗಿದ್ದಾರೆ
ಮನೆ ಕೆಲಸ ಮಾಡಲು 45 ವರ್ಷದೊಳಗಿನ ಮಹಿಳೆ ಸರಸ್ವತಿಪುರಂ, ಕುವೆಂಪುನಗರ ಸುತ್ತಮುತ್ತ ಇರುವವರಿಗೆ ಆದ್ಯತೆ ಸಂಪರ್ಕಿಸಿ
9632264111

ಪ್ರಮಾಣ ಪತ್ರ
ಸಂತೋಷ್‌ಗೌಡ ಜಿ.ಎನ್., ಆದ ನಾನು ಫ್ಲಾಟ್ ನಂ. 008, ಗ್ರಾವಿಟಿ–1, ವಿಯಾನ ಅಪಾರ್ಟ್‌ಮೆಂಟ್, ವಿಜಯನಗರ 4ನೇ ಹಂತ, 2ನೇ ಘಟ್ಟ, ಮೈಸೂರು ಇಲ್ಲಿ ವಾಸವಿದ್ದು, ನನ್ನ ಮಗಳ ಹೆಸರು ಆಧಾರ್ ಕಾರ್ಡ್ ಮತ್ತು ಶಾಲಾ ದಾಖಲಾತಿಗಳಲ್ಲಿ ನೈರಾ ಎಸ್. ಗೌಡ ಎಂದು ನಮೂದಾಗಿದೆ. ಆದರೆ HDFC Ergo General Insurance Company Limited ಪಾಲಿಸಿ ನಂ. 2805203562737601 ರಲ್ಲಿ ಜಾನವಿ ಸಂತೋಷ್ ಗೌಡ ಎಂದಾಗಿರುತ್ತದೆ. ನನ್ನ ಮಗಳ ಸರಿಯಾದ ಹೆಸರು ನೈರಾ ಎಸ್. ಗೌಡ ಎಂದು ಪ್ರಮಾಣೀಕರಿಸುತ್ತೇನೆ.
ಸಹಿ/– ಸಂತೋಷ್ ಗೌಡ ಜಿ.ಎನ್.

ಪ್ರಮಾಣ ಪತ್ರ
ಸಂತೋಷ್‌ಗೌಡ ಜಿ.ಎನ್., ಆದ ನಾನು ಫ್ಲಾಟ್ ನಂ. 008, ಗ್ರಾವಿಟಿ–1, ವಿಯಾನ ಅಪಾರ್ಟ್‌ಮೆಂಟ್, ವಿಜಯನಗರ 4ನೇ ಹಂತ, 2ನೇ ಘಟ್ಟ, ಮೈಸೂರು ಇಲ್ಲಿ ವಾಸವಿದ್ದು, ನನ್ನ ಮಗಳ ಹೆಸರು ಆಧಾರ್ ಕಾರ್ಡ್ ಮತ್ತು ಶಾಲಾ ದಾಖಲಾತಿಗಳಲ್ಲಿ ನೈನಾ ಎಸ್. ಗೌಡ ಎಂದು ನಮೂದಾಗಿದೆ. ಆದರೆ HDFC Ergo General Insurance Company Limited ಪಾಲಿಸಿ ನಂ. 2805203562737601 ರಲ್ಲಿ ಜನನಿ ಸಂತೋಷ್ ಗೌಡ ಎಂದಾಗಿರುತ್ತದೆ. ನನ್ನ ಮಗಳ ಸರಿಯಾದ ಹೆಸರು ನೈನಾ ಎಸ್. ಗೌಡ ಎಂದು ಪ್ರಮಾಣೀಕರಿಸುತ್ತೇನೆ.
ಸಹಿ/– ಸಂತೋಷ್ ಗೌಡ ಜಿ.ಎನ್.

ಪ್ರಮಾಣ ಪತ್ರ
ಸಂತೋಷ್‌ಗೌಡ ಜಿ.ಎನ್., ಆದ ನಾನು ಫ್ಲಾಟ್ ನಂ. 008, ಗ್ರಾವಿಟಿ–1, ವಿಯಾನ ಅಪಾರ್ಟ್‌ಮೆಂಟ್, ವಿಜಯನಗರ 4ನೇ ಹಂತ, 2ನೇ ಘಟ್ಟ, ಮೈಸೂರು ಇಲ್ಲಿ ವಾಸವಿದ್ದು, ನನ್ನ ಮಗನ ಹೆಸರು ಆಧಾರ್ ಕಾರ್ಡ್ ಮತ್ತು ಶಾಲಾ ದಾಖಲಾತಿಗಳಲ್ಲಿ ಯಧುವೀರ್ ಎಸ್. ಗೌಡ ಎಂದು ನಮೂದಾಗಿದೆ. ಆದರೆ HDFC Ergo General Insurance Company Limited ಪಾಲಿಸಿ ನಂ. 2805203562737601 ರಲ್ಲಿ ಸಿದ್ಧಾಂತ್ ನಾಗರಾಜ್ ಜಿ.ಎಸ್. ಎಂದಾಗಿರುತ್ತದೆ. ನನ್ನ ಮಗನ ಸರಿಯಾದ ಹೆಸರು ಯಧುವೀರ್ ಎಸ್. ಗೌಡ ಎಂದು ಪ್ರಮಾಣೀಕರಿಸುತ್ತೇನೆ.
ಸಹಿ/– ಸಂತೋಷ್ ಗೌಡ ಜಿ.ಎನ್.

MUDA Approved Sites @ Lalithadri Nagar
with in Ring Road- Call Northeast Properties. Immediate Registration & Bank Loan Available
9880065122
7795609173

(40X60) COMMERCIAL SITE FOR SALE
@ Yelwala (Near Satelite Bus Stand, Mys- Hunsur, N.H.Road) Suitable for M.R.P, Lodge, Hospital. 65 Lakhs
9538839926

CHANGE OF NAME
I, Lavanya Unnamalai, D/o A.R. Alagappan, No.13/2, Vivekananda Road, Yadavagiri, Mysore-570020. have Changed my name from Lavanya to Lavanya Unnamalai on my own free will Sworn in before Notary Vasudeva Mysuru, Vide affidavit dated: 19/07/2022.
Sd/- Lavanya Unnamalai

EXCELLENT COACHING
Engg. Maths M1, M2, M3, M4 DMS, SNS (All Engg. Subjects) I & II PUC (Science & Comm)
100% Results
Dip. , Maths
9845463807

WANTED Teachers
Jnanajyothi Vidyalaya Beerihundi. NST, Montessori Teacher, Mathematics and Science Teacher Wanted (M.Sc, B.Sc any Degree)
9845390377
8197057626

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ತಕ್ಷಣ ಬೇಕಾಗಿದ್ದಾರೆ. ಮೇಟಗಳ್ಳಿ ಫ್ಯಾಕ್ಟರಿ ಏರಿಯಾದಲ್ಲಿ ಅನುಭವವುಳ್ಳ ಹಾಗೂ ವಿದ್ಯಾಭ್ಯಾಸವಿರುವಂತ ಸೆಕ್ಯೂರಿಟಿ ಗಾರ್ಡ್ ತಕ್ಷಣ ಬೇಕಾಗಿದ್ದಾರೆ ಮತ್ತು PF, ESI ಊಟ, ತಿಂಡಿಯೊಂದಿಗೆ '8' ಗಂಟೆ ಕೆಲಸ ಆಸಕ್ತಿವುಳ್ಳವರು ಕೂಡಲೇ ತಕ್ಷಣ ಮೂಲ ದಾಖಲಾತಿಯೊಂದಿಗೆ ಸಂಪರ್ಕಿಸಿ:
9663958939
9731222975

ಬೇಕಾಗಿದ್ದಾರೆ
1. ಸೆಕ್ಯೂರಿಟಿ ಗಾರ್ಡ್ – 2 ಹುದ್ದೆ
ದಿ ಕೋರಮ್ ಹೋಟೆಲ್
ನಂ.2257/1, ವಿನೋಭಾ ರಸ್ತೆ, ಕಲಾಮಂದಿರ ಹತ್ತಿರ, ಮೈಸೂರು.
9620274630

ಬೇಕಾಗಿದ್ದಾರೆ
ಮೈಸೂರಿನಲ್ಲಿ ನೂತನವಾಗಿ ಆರಂಭವಾಗಿರುವ AWBM ಕಂಪನಿಯೊಂದಕ್ಕೆ SSLC (Pass), PUC, ITI, JOC, Dip, Any Degree ಆದಂತಹ ಅಭ್ಯರ್ಥಿಗಳನ್ನು ನೇರ ಸಂದರ್ಶನದೊಂದಿಗೆ ನೇರ ಆಯ್ಕೆ ಮಾಡಿಕೊಳ್ಳುತ್ತಿದ್ದೇವೆ. ವಯೋಮಿತಿ: 18-39 years, ತಿಂಗಳಿಗೆ: 25,000-34,000 (ಉಚಿತ ವಸತಿ ಸೌಲಭ್ಯವಿದೆ) ಸ್ವಾತಿಗೌಡ:
9663481922 / 8494828606

IMMIDIATE HIRING IN MYSORE
TV / LED / LCD Repair Technician Required
Qualification: ITI, Diploma, Any Degree, Salary: 15,000-30,000, Age Limit: Below 35, Applicable for Male Candidates only
9880151303 / 6366638189

SITES FOR SALE
20x30 - 12.60 Lakhs
30x40 - 25.20 Lakhs
Bank Loan upto 75%, Ready for Registration, Near Gurur Bus Stop, Ramabainagar, Mysore, DTCP approved, (Corporation Limits) 1.5 kms from J P Nagar Ring Road.
8660105902

ಕೆಲಸಕ್ಕೆ ಬೇಕಾಗಿದ್ದಾರೆ
ಯುವತಿಯರು (ವಯಸ್ಸು 20–30) ವಿದ್ಯಾರ್ಹತೆ: 2nd PUC & ಯಾವುದೇ ಪದವಿ
8296366894 / 7996011692
ಸ್ಥಳ: ಸೆರಾಕೇರ್ ಹೆಲ್ತ್ ಸೆಂಟರ್
ನ್ಯೂ ಕಾಂತರಾಜ ಅರಸು ರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು

ವೆಜ್ ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಅಡುಗೆ ಭಟ್ಟರು, ದೋಸೆ Maker Helper, ಸಪ್ಲೇಯರ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ:
7795518038
8884208814

ವಾಸ್ತು ಪ್ರಕಾರ
ಹೊಸದಾಗಿ ಮನೆ ಮತ್ತು ಆಲ್ಟ್ರೇಷನ್ ಕೆಲಸ / ಕನ್‌ಸ್ಟ್ರಕ್ಷನ್ ಮಾಡಿಕೊಡಲಾಗುತ್ತದೆ.
ಒಂದು ಚದರಕ್ಕೆ 180000/–
*ಷರತ್ತು ಅನ್ವಯ
ಸ್ವಾಮಿ ಎಂ. ಸಿವಿಲ್ ಕಂಟ್ರಾಕ್ಟರ್
9945442361 / 9380885787

WANTED DTP OPERATOR
having good Kannada & English Typing skills Computer Knowledge Only for Female
ಕಂಪ್ಯೂಟರ್ ಮತ್ತು ಡಿಟಿಪಿ ಆಪರೇಟರ್ ಬೇಕಾಗಿದ್ದಾರೆ. (ಕನ್ನಡ & ಇಂಗ್ಲೀಷ್ ಟೈಪಿಂಗ್ ಉತ್ತಮವಾಗಿ ತಿಳಿದಿರುವವರು)
8050473454
9945592228

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ – ಯುವತಿಯರು ಬೇಕಾಗಿದ್ದಾರೆ.
Salary: 13,000-21,000 + ESI, PF ವಿದ್ಯಾರ್ಹತೆ: 10th, PUC, ITI, Diploma and Any Degree.
ಇಂದೇ ಸಂಪರ್ಕಿಸಿ:
9035734821

30x20 3BHK HOUSE FOR SALE
Newly Construction Near BEML Layout (Arch) Srirampura 2nd Stage, Mysore
9611537157
9900251194

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಸುತ್ತಮುತ್ತ ಕೊರಿಯರ್ ಆಫೀಸ್‌ಗೆ ಡೆಲಿವರಿ ಬಾಯ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವೇತನ 18,000 ರಿಂದ 20,000 ಇರುತ್ತದೆ.
7899752014

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ.
ಸಂಬಳ+ಓಟಿ, 15,200–86000
9740733021 / 9535028750

ಬೇಕಾಗಿದ್ದಾರೆ
ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಪ್ಲಾಸ್ಟಿಕ್ ಕಂಪನಿಗೆ 18 ರಿಂದ 35 ವರ್ಷದ ಪುರುಷರು ಮತ್ತು ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.
ಸಂಬಳ ಪುರುಷರಿಗೆ : 11,290/–,
ಮಹಿಳೆಯರಿಗೆ: 8,500/–
ಉಚಿತ ಕ್ಯಾಂಟೀನ್ ಸೌಲಭ್ಯವಿರುತ್ತದೆ.
ಸಂಪರ್ಕಿಸಿ: ಚಾಮುಂಡೇಶ್ವರಿ ಎಂಟರ್‌ಪ್ರೈಸಸ್ ಮೈಸೂರು. ಲೋಕೇಶ್:
8722844236

ಬೇಕಾಗಿದ್ದಾರೆ
ಪ್ರಿಂಟಿಂಗ್ ಪ್ರೆಸ್‌ಗೆ ಸಿಂಗಲ್ ಕಲರ್ ಪ್ರಿಂಟಿಂಗ್ ಮಿಷಿನ್, ಕಟಿಂಗ್ ಮಿಷಿನ್, ಫೋಲ್ಡಿಂಗ್ ಮಿಷಿನ್‌ಗೆ ಆಪರೇಟರ್ ಮತ್ತು ಹೆಲ್ಪರ್‌ಗಳು ಬೇಕಾಗಿದ್ದಾರೆ. ಡಿಟಿಪಿ ಆಪರೇಟರ್‌ಗಳು ಮತ್ತು ಡಿಸೈನರ್‌ಗಳು ಬೇಕಾಗಿದ್ದಾರೆ. ಅನುಭವ ಇದ್ದವರಿಗೆ ಮೊದಲ ಆದ್ಯತೆ.
9449853308

ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್ ವೈಸರ್, ಸೆಕ್ಯೂರಿಟಿ ಗಾರ್ಡ್ಸ್, ಹೌಸ್‌ಕೀಪಿಂಗ್ ಮಹಿಳೆಯರು ಮತ್ತು ಹುಡುಗರು ಆಲನಹಳ್ಳಿ, ಲಲಿತಾದ್ರಿಪುರ, ರಾಮಕೃಷ್ಣನಗರ, ಜೆ.ಪಿ.ನಗರ, ಅಗ್ರಹಾರ ಸುತ್ತಮುತ್ತ ಯಾವುದೇ ಶುಲ್ಕ ಇಲ್ಲ. ಸಂಪರ್ಕಿಸಿ.
9964008146 / 7975066539
080-73553033

ಕೆಲಸಕ್ಕೆ ಬೇಕಾಗಿದ್ದಾರೆ
CSC ಸೆಂಟರ್‌ಗೆ ಕಂಪ್ಯೂಟರ್ Knowledge ಉಳ್ಳವರು ಕೆಲಸಕ್ಕೆ ಬೇಕಾಗಿದ್ದಾರೆ.
(ವಿಳಾಸ:– ಮೈಸೂರು ದಕ್ಷಿಣ)
9663369171

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಮಧ್ಯಭಾಗದಲ್ಲಿರುವ ಲಾಡ್ಜ್‌ಗೆ ರೂಂಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ. ವಯಸ್ಸು: 18 – 40 ರ ಒಳಗೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
9663427888
9739742344

ಬೇಕಾಗಿದ್ದಾರೆ
ಆರ್ಟ್‌ಫುಲ್ ಕ್ರಿಯೇಷನ್ಸ್
ಗಣೇಶ ದೇವಸ್ಥಾನ ರಸ್ತೆ, ಎನ್.ಆರ್.ಮೊಹಲ್ಲಾ. ಟೈಲರಿಂಗ್ ಗೊತ್ತಿರುವ ಸೇಲ್ಸ್‌ಗರ್ಲ್ಸ್ ಮತ್ತು ಲೇಡಿಸ್ ಟೈಲರ್ಸ್ ಬೇಕಾಗಿದ್ದಾರೆ.
9845852173

ಶ್ರೀ ಮಹಾಕಾಳಿ ಜ್ಯೋತಿಷ್ಯರು ಪಂಡಿತ್ ॥ ಹನುಮಂತರಾವ್
ನಿಮ್ಮೆಲ್ಲಾ ಸಮಸ್ಯೆಗಳಿಗೂ ಆಗಮಶಾಸ್ತ್ರದ ಪೂಜಾ ಪದ್ಧತಿಗಳಿಂದ ಪರಿಹಾರ ಮಾಡಿಕೊಡುತ್ತಾರೆ.
ಸಂಪರ್ಕಿಸಿ:
9686487402
ನಿಮ್ಮ ಸಮಸ್ಯೆಗಳನ್ನು ಗೌಪ್ಯವಾಗಿ ಇಡಲಾಗುವುದು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಮಾಂತ್ರಿಕ ಕೇರಳ ಶ್ರೀ ಭಗವತಿ ಜೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿ ಚೇತನ್ ಮಾರ್ತಾಂಡ ದೇವಿ ಭಗವತಿ ಕಾಟೇರಿ ಪ್ರಯೋಗದಿಂದ, ಸ್ತ್ರೀ ಪುರುಷ ಪ್ರೇಮ, ವಿವಾಹ, ಸಂತಾನ, ದಾಂಪತ್ಯ ಸಮಸ್ಯೆ, ಶತ್ರು ಬಾಧೆ, ಪ್ರೇತಾ ಬಾಧೆ, ಹಣದ ಸಮಸ್ಯೆ, ತನ್ನವರೇ ತನಗೆ ಶತ್ರು, ಕೌಟುಂಬಿಕ ಕಲಹ ನಿಮ್ಮ ಯಾವುದೇ ಸಮಸ್ಯೆಗಳಿಗೆ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ತಕ್ಷಣ ಪರಿಹಾರ ಶತಃಸಿದ್ಧ.
ಖಾಯಂ ಮನೆ ವಿಳಾಸ: ಮನೆ ನಂ 68, ಸತ್ಯ ಮಾರ್ಗ, ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ.ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಕೊಳ್ಳೇಗಾಲ ಜ್ಯೋತಿಷ್ಯರು ನಂ. 01 ಮೋಡಿ ಮಾಂತ್ರಿಕರು
ಪಂ. ಎಸ್. ಕುಮಾರಸ್ವಾಮಿ
Mob: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ–ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಶಾಶ್ವತ ಪರಿಹಾರ ಶತಃಸಿದ್ಧ. ಕರೆ ಮಾಡಿ ಬನ್ನಿ.
ಖಾಯಂ ವಿಳಾಸ ಎ.ಟಿ.ಎಂ. ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್), ಬಿ.ಎನ್. ರೋಡ್, ಕೆ.ಎಸ್.ಆರ್.ಟಿ.ಸಿ. ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 7 ರಲ್ಲಿ

ಕೊಡಗಲ್ಲಿ ಕಾಡುಪ್ರಾಣಿ ಹಾವಳಿ ತಡೆಗೆ ನೀಲಿನಕ್ಷೆ ಸಿದ್ಧ

ಅರಣ್ಯ ಸಂರಕ್ಷಣಾಧಿಕಾರಿಗಳು, ರೈತರ ಸಂವಾದದಲ್ಲಿ ಅರಣ್ಯ ಸಂರಕ್ಷಣಾಧಿಕಾರಿ ಹೇಳಿಕೆ

- ಕಾಡಾನೆ ತಡೆಗೆ ರೈಲ್ವೆ ಬ್ಯಾರಿಕೇಡ್ ನಿರ್ಮಾಣ
- ಕೊರತೆ ಇರುವ ಕಡೆ ಹೆಚ್ಚುವರಿ ಸಿಬ್ಬಂದಿ ನೇಮಕ
- ಬೆಳೆ ಹಾನಿ, ಜೀವ ಭಯದಲ್ಲಿ ಜೀವನ; ರೈತರ ಆಕ್ರೋಶ



ವಿರಾಜಪೇಟೆ, ಜು.20– ವನ್ಯಜೀವಿ ಮತ್ತು ಮಾನವ ಸಂಘರ್ಷ ರಾಜ್ಯದ ಉಳಿದ ಕಡೆಗಳಿಗಿಂತ ಕೊಡಗಲ್ಲಿ ಹೆಚ್ಚಾಗಿದ್ದು, ಕಾಡಾನೆ ಮತ್ತು ಹುಲಿ ಸೇರಿದಂತೆ ಕಾಡು ಪ್ರಾಣಿಗಳ ಹಾವಳಿ ತಡೆಯಲು ನೀಲಿನಕ್ಷೆ ಸಿದ್ದವಾಗಿದೆ ಎಂದು ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎನ್. ಮೂರ್ತಿ ತಿಳಿಸಿದ್ದಾರೆ.

ವಿರಾಜಪೇಟೆ ಅರಣ್ಯ ಭವನದಲ್ಲಿ ಇಂದು ಕೊಡಗು ಜಿಲ್ಲಾ ರೈತ ಸಂಘ ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳ ನಡುವೆ ಏರ್ಪಡಿಸಲಾಗಿದ್ದ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಈ ಸಾಲಿನಲ್ಲಿ ಕಾಡಾನೆ ಹಾವಳಿ ತಡೆಯಲು ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ 12 ಕೋಟಿ ರೂ. ಬಂದಿದ್ದು, ಅದರಲ್ಲಿ ಬ್ಯಾರಿಕೇಡ್ ಕೆಲಸ ನಡೆಯುತ್ತಿದೆ. ಸರಕಾರ ಎಷ್ಟು ಅನುದಾನ ನೀಡುತ್ತದೆಯೋ ಅಷ್ಟು ಕೆಲಸ ಮಾಡಬಹುದು. ನಾಗರಹೊಳೆಯ ಅರಣ್ಯ ವ್ಯಾಪ್ತಿ ಸುತ್ತ ಬ್ಯಾರಿಕೇಡ್ ಹಾಕಲು ಕೋಟ್ಯಾಂತರ ಹಣ ಬೇಕು ಅದು ಪೂರ್ತಿಯಾಗದೆ ಕಾಡಾನೆಗಳ ಹಾವಳಿ ತಡೆಯಲು ಸಾಧ್ಯವಿಲ್ಲ ಎಂದರು.

ನಾಡಿನಲ್ಲಿ ಬೀಡು ಬಿಟ್ಟಿರುವ ಕಾಡಾನೆ ಓಡಿಸಲು ಮತ್ತು ಜನರಿಗೆ ರಕ್ಷಣೆ ನೀಡಲು ಅರಣ್ಯ ಸಿಬ್ಬಂದಿಗಳ ಕೊರತೆ ಇರುವುದರಿಂದ ತಾತ್ಕಾಲಿಕ ಸಿಬ್ಬಂದಿಗಳ ನೇಮಕದ ಸಂಖ್ಯೆ ಹೆಚ್ಚಿಸಲು ಕ್ರಮ ಕೈಗೊಳ್ಳುತ್ತೇವೆ. ನಾಗರಹೊಳೆ ಭಾಗದ ಐದು ಕಿಮೀ ವ್ಯಾಪ್ತಿಯಲ್ಲಿ ಸುಸಜ್ಜಿತ ಕೊಟ್ಟಿಗೆ ನಿರ್ಮಾಣಕ್ಕೆ 10 ಲಕ್ಷ ರೂ. ಅನುದಾನವಿದ್ದು, ಇದರಲ್ಲಿ ಆಗತ್ಯ ರೈತರಿಗೆ ಅನುದಾನ ನೀಡಲಾಗುತ್ತದೆ. ಈಗಾಗಲೆ ಎರಡು ಆನೆ ಸೆರೆ ಹಿಡಿಯಲಾಗಿದ್ದು, ಮಳೆ ಕಡಿಮೆಯಾದ ನಂತರ ಜಿಲ್ಲೆಯಲ್ಲಿ ಇನ್ನು ಮೂರು ಕಾಡಾನೆಗಳನ್ನು ಹಿಡಿಯುವುದಾಗಿ ಅವರು ತಿಳಿಸಿದರು.

ನಾಡಿನಲ್ಲಿ ಗುಂಪು ಗುಂಪಾಗಿರುವ ಕಾಡಾನೆಗಳಲ್ಲಿ ಗಂಡಾನೆಗಳನ್ನು ಸ್ಥಳಾಂತರಿಸುವ ಕಾರ್ಯ ನಡೆಯಲಿದೆ. ಹೆಣ್ಣಾನೆ ಸ್ಥಳಾಂತರ ಮಾಡಿದರೆ ಉಳಿದ ಗಂಡು ಆನೆಗಳು ಇನ್ನಷ್ಟು ಉಗ್ರವಾಗುತ್ತದೆ. ಅದರಿಂದ ಹೆಣ್ಣಾನೆಯನ್ನು ಇಲ್ಲೆ ಬಿಡಬೇಕಾಗುತ್ತದೆ. ಎಂದರಲ್ಲದೆ ಕಾಫಿ ಗಿಡ ಒಂದಕ್ಕೆ 6 ಸಾವಿರ ರೂ. ಪರಿಹಾರ ನೀಡುವಂತೆ ಸರಕಾರವನ್ನು ಒತ್ತಾಯಿಸುವುದಾಗಿ ತಿಳಿಸಿದರು.

ಕೊಡಗು ರೈತ ಸಂಘದ ಅಧ್ಯಕ್ಷ ಮನು ಸೋಮಯ್ಯ ಪ್ರಾಸ್ತಾವಿಕವಾಗಿ ಮಾತನಾಡಿ, ಕೊಡಗಿನಲ್ಲಿ ವನ್ಯ ಜೀವಿಗಳ ಹಾವಳಿ ಹೆಚ್ಚಾಗಿದ್ದು, ಎಲ್ಲಾ ಕಡೆಗಳಲ್ಲಿಯು ಕಾಡಾನೆಗಳ ಹಾವಳಿಯಿಂದ ಬೆಳೆ ನಷ್ಟವಾಗುತ್ತಿದೆ ಜೊತೆಗೆ ಹುಲಿಯು ಗ್ರಾಮಗಳಲ್ಲಿ ಜಾನುವಾರುಗಳನ್ನು ಕೊಲ್ಲುತ್ತಿದೆ. ಈ ಸಂಬಂಧ ಅಧಿಕಾರಿಗಳಿಗೆ ಎಷ್ಟೇ ಅರ್ಜಿ ನೀಡಿದರೂ, ರೈತರು ನೆಮ್ಮದಿಯಿಂದ ಜೀವನ ನಡೆಸಲು ಸಾಧ್ಯವಾಗುತ್ತಿಲ್ಲ. ಹಲವಾರು ಗ್ರಾಮಗಳಲ್ಲಿ ಜನರು ಭಯದಿಂದ ದಿನ ಕಳೆಯುವಂತಾಗಿದೆ. ಆನೆ ಹಾವಳಿ ತಡೆಗೆ ನಿರ್ಮಾಣವಾಗುತ್ತಿರುವ ರೈಲ್ವೆ ಬ್ಯಾರಿಕೇಡ್ ಕೆಲಸ ಆಮೆ ಗತಿಯಲ್ಲಿ ಸಾಗುತ್ತಿದೆ. ಅರಣ್ಯ ಅಧಿಕಾರಿಗಳು ಸಮಸ್ಯೆ ಬಗೆಹರಿಸಲು ಪರಿಹಾರ ಕಂಡುಕೊಳ್ಳುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ ಎಂದರು.

ಅನೇಕ ಕಾಫಿ ತೋಟದಲ್ಲಿ ಕಾಡಾನೆಗಳ ಕಾರಿಡಾರ್ ಅನ್ನು ಬಂದ್ ಮಾಡಿ ಅರಾಮವಾಗಿದ್ದಾರೆ. ವಿರಾಜಪೇಟೆ ಅರಣ್ಯ ಸಂರಕ್ಷಣಾಧಿಕಾರಿ ಚಕ್ರಪಾಣಿ ಅವರನ್ನು ತಕ್ಷಣ ವರ್ಗಾವಣೆ ಮಾಡಬೇಕು. ಇವರ ಕಚೇರಿಯಲ್ಲಿ ಅನೇಕ ಸಿಬ್ಬಂದಿ ಹಲವು ವರ್ಷಗಳಿಂದಲೂ ಇಲ್ಲಿಯೇ ಠಿಕಾಣಿ ಹೂಡಿದ್ದಾರೆ. ಇವರಿಗೆ ಅಕ್ರಮ–ಸಕ್ರಮ ಕಡತ ವಿಲೇವಾರಿ ಮಾಡಲು ರೈತರು ಒಂದು ಲಕ್ಷ ರೂ. ಲಂಚ ನೀಡಬೇಕು, ಸ್ವಂತ ಉಪಯೋಗಕ್ಕೆ ಮರ ಕಡಿಯಲು ತಿಂಗಳುಗಟ್ಟಲೆ ಅಲೆದಾಡುವಂತಾಗಿದೆ. ಈ ವಿಚಾರಗಳ ಬಗ್ಗೆ ಆಗತ್ಯ ಕ್ರಮ ಕೈಗೊಳ್ಳುವ ಮೂಲಕ ರೈತರಿಗೆ ನೆಮ್ಮದಿಯಿಂದ ಬದುಕಲು ಸಹಕಾರ ನೀಡುವಂತಾಗಬೇಕು ಎಂದರು.

ರೈತ ಸಂಘದ ಉಪಾಧ್ಯಕ್ಷ ಸುಜಯ್ ಬೋಪಯ್ಯ ಮಾತನಾಡಿದರು. ಬಿದ್ದಂಡ ಮಾದಯ್ಯ, ಮೈತಾಡಿಯ ಚಪ್ಪಂಡ ಹರೀಶ್, ತಿತಿಮತಿ ನೋಕ್ಯದ ಬೆಳ್ಯಪ್ಪ, ಸಿದ್ದಾಪುರದ ಬೋಪಣ್ಣ, ರೈತ ಸಂಘದ ಕಾರ್ಯದರ್ಶಿ ಶ್ರೀಮಂಗಲದ ಚಂಗಪ್ಪ, ಸೋಮವಾರಪೇಟೆ ಲಕ್ಷ್ಮಣ ಹಾಗೂ ಕೆಲ ರೈತರು ಕಾಡಾನೆಗಳಿಂದ ತಮಗೆ ಆಗಿರುವ ನಷ್ಟದ ಬಗ್ಗೆ ಸಭೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ವಿರಾಜಪೇಟೆ ಉಪ ಅರಣ್ಯ ಪ್ರಭಾರ ಸಂರಕ್ಷಣಾಧಿಕಾರಿ ಶಿವರಾಮ್ ಹಾಗೂ ಹಲವು ವಿಭಾಗದಿಂದ ಆಗಮಿಸಿದ ಅರಣ್ಯ ಅಧಿಕಾರಿಗಳು ಉಪಸ್ಥಿತರಿದ್ದರು.

ಕೊಡಗಲ್ಲಿ ಬಿಡುವು ನೀಡಿದ ವರುಣ

25 ದಿನಗಳ ಬಳಿಕ ಬಿಸಿಲಿನ ವಾತಾವರಣ

* ತೇವದಿಂದ ಕುಸಿದ ಮನೆ, 4 ಮನೆಗಳಿಗೆ ಸ್ವಲ್ಪ ಹಾನಿ

ಮಡಿಕೇರಿ,ಜು.20– ಕೊಡಗು ಜಿಲ್ಲೆಯಲ್ಲಿ ವರುಣ ಸಂಪೂರ್ಣ ಬಿಡುವು ನೀಡಿದ್ದು, ಕಳೆದ 25 ದಿನಗಳ ಬಳಿಕ ಬಿಸಿಲಿನ ವಾತಾವರಣ ಕಂಡು ಬಂದಿದೆ. ಕೆಲ ದಿನಗಳ ಹಿಂದೆ ವ್ಯಾಪಕ ಮಳೆಯಾಗಿರುವ ಹಿನ್ನೆಲೆಯಲ್ಲಿ ಮನೆಯ ಗೋಡೆಗಳು ನೀರಿನಿಂದ ತೇವಗೊಂಡು ಕುಸಿದು ಬಿದ್ದಿರುವ ಬಗ್ಗೆ ವರದಿಯಾಗಿದೆ.

ಕಳೆದ 24 ಗಂಟೆ ಅವಧಿಯಲ್ಲಿ 1 ಮನೆ ಸಂಪೂರ್ಣವಾಗಿ ಕುಸಿದು ಬಿದ್ದರೆ, 4 ಮನೆಗಳಿಗೆ ಅಲ್ಪ ಪ್ರಮಾಣದ ಹಾನಿಯಾಗಿದೆ. 36 ವಿದ್ಯುತ್ ಕಂಬಗಳಿಗೆ ಹಾನಿಯಾಗಿದ್ದು, ಶೀತ ವಾತಾವರಣದಿಂದ 1 ಜಾನುವಾರು ಮೃತಪಟ್ಟಿದೆ. 5 ಕಾಳಜಿ ಕೇಂದ್ರಗಳು ತೆರೆಯಲ್ಪಟ್ಟಿದ್ದು, ಪ್ರಸ್ತುತ 568 ಮಂದಿ ಆಶ್ರಯ ಪಡೆದಿದ್ದಾರೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.

ಸ್ತ್ರೀ ವೇಷ ಧರಿಸಿ ದೇವಾಲಯದಲ್ಲಿ ಕಳ್ಳತನ ಮಾಡಿದ್ದವನ ಸೆರೆ

ಮೂರೇ ದಿನದಲ್ಲಿ ಪ್ರಕರಣ ಭೇದಿಸಿದ ಪೊಲೀಸರು

ಮಡಿಕೇರಿ,ಜು.20– ಸ್ತ್ರೀ ವೇಷ ತೊಟ್ಟು ದೇವಾಲಯ ಕಳ್ಳತನ ಮಾಡಿದ ಆರೋಪಿಯನ್ನು ಕುಶಾಲನಗರ ಪೊಲೀಸರು ಬಂಧಿಸಿದ್ದಾರೆ.

ಕೂಡಿಗೆಯ ಶ್ರೀ ಉದ್ಭವ ಸುಬ್ರಹ್ಮಣ್ಯ ಸ್ವಾಮಿ ದೇವಾಲಯಕ್ಕೆ ನುಗ್ಗಿದ ಸ್ತ್ರೀ ವೇಷಧಾರಿ ಮಹಮ್ಮದ್ ಗೌಸ್ ಎಂಬಾತ ಹುಂಡಿಯನ್ನು ಹಾರೆಯಿಂದ ಮೀಟಿ ಹಣ ದೋಚಿದ್ದ. ಈ ದೃಶ್ಯಾವಳಿ ಸಿ.ಸಿ. ಕ್ಯಾಮರಾದಲ್ಲಿ ಸೆರೆಯಾಗಿದ್ದು, ಪ್ರಕರಣ ದಾಖಲಿಸಿಕೊಂಡಿದ್ದ ಕುಶಾಲನಗರ ಗ್ರಾಮಾಂತರ ಪೊಲೀಸರು ತನಿಖೆ ಕೈಗೊಂಡಿದ್ದರು.

ಪ್ರಕರಣ ನಡೆದ ಮೂರೇ ದಿನಗಳಲ್ಲಿ ಆರೋಪಿ ಮಹಮ್ಮದ್ ಗೌಸ್‌ನನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದು, ಮುಂದಿನ ತನಿಖೆ ನಡೆಸುತ್ತಿದ್ದಾರೆ.

ನಾಪೋಕ್ಲು ನಾಡ ಕಚೇರಿಗೆ ತೆರಳುವ ರಸ್ತೆ ಅಧ್ವಾನ

ಕೆಸರು ಗದ್ದೆಯಂತಹ ರಸ್ತೆ, ರಸ್ತೆಗೆ ಚಾಚಿಕೊಂಡಿರುವ ಪೊದೆಗಳ ಅವಾಂತರ



ನಾಪೋಕ್ಲು, ಜು.20–ಇಲ್ಲಿನ ನಾಡ ಕಚೇರಿಗೆ ತೆರಳುವ ರಸ್ತೆ ಅಧ್ವಾನದಿಂದ ಕೂಡಿದ್ದು, ರಸ್ತೆಯ ಇಕ್ಕೆಲಗಳಲ್ಲಿ ಪೊದೆಗಳು ಬೆಳೆದು ರಸ್ತೆಗೆ ಚಾಚಿಕೊಂಡಿವೆ. ರಸ್ತೆಯ ಎರಡೂ ಬದಿ ಚರಂಡಿ ಇಲ್ಲದೆ ಕೆಸರು ನೀರು ರಸ್ತೆಯಲ್ಲಿಯೇ ಹರಿಯುತ್ತಿದ್ದು ರಸ್ತೆ ದುರಸ್ತಿ ಪಡಿಸುವವರೇ ಇಲ್ಲ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

1890ರಲ್ಲಿ ನಿರ್ಮಿಸಲಾದ ನಾಡಕಚೇರಿಯು ಹಲವು ಗ್ರಾಮಸ್ಥರ ದಿನನಿತ್ಯದ ವ್ಯವಹಾರದ ತಾಣವಾಗಿದೆ. ನಾಪೋಕ್ಲು ಹೋಬಳಿ ವ್ಯಾಪ್ತಿಗೆ ಒಳಪಟ್ಟ 27 ಗ್ರಾಮಗಳ ಗ್ರಾಮಸ್ಥರು ಕಂದಾಯ ಇಲಾಖೆಯ ವಹಿವಾಟಿಗಾಗಿ ನಾಡ ಕಚೇರಿಗೆ ಆಗಮಿಸುತ್ತಾರೆ. ಅದ್ವಾನದಿಂದ ಕೂಡಿದ ರಸ್ತೆಯು ಜನರಿಗೆ ಸಮಸ್ಯೆಯ ತಾಣವಾಗಿದೆ.

ಈ ರಸ್ತೆಯಲ್ಲಿ ನಡೆದಾಡುವುದೇ ಕಷ್ಟಕರವಾಗಿದೆ. ಸಮೀಪದಲ್ಲೇ ವಿದ್ಯುತ್ ಇಲಾಖೆಯ ಕಚೇರಿ ಇದ್ದು, ಬಿಲ್ ಪಾವತಿಸಲು ಬರುವವರು ಕೆಸರಿನಲ್ಲೆ ನಡೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಸಂಬಂಧಪಟ್ಟವರು ಈ ರಸ್ತೆಯ ದುರಸ್ತಿ ಕಾರ್ಯಕ್ಕೆ ಕೂಡಲೇ ಮುಂದಾಗಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಮಹದೇವಿ ನಿಧನ

ನಾಪೋಕ್ಲು, ಜು.20– ಇಲ್ಲಿಗೆ ಸಮೀಪದ ಹಳೆ ತಾಲೂಕು ನಿವಾಸಿ ದಿವಂಗತ ಸಿ.ಪುಂಗುರಿ (ರಾಜ) ಅವರ ಧರ್ಮಪತ್ನಿ ಮಹದೇವಿ(51) ಬುಧವಾರ ನಿಧನರಾದರು. ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ನಾಪೋಕ್ಲು ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.



ಇಂದು ಮದ್ಯ ಮಾರಾಟ ನಿಷೇಧ

ಮಂಡ್ಯ,ಜು.20–ಕೆ.ಆರ್.ಪೇಟೆ ತಾಲೂಕಿನ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆ ಕಾರ್ಯಕ್ರಮ ಜು. 21ರಂದು ನಡೆಯುವ ಹಿನ್ನೆಲೆಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 21ರನ್ವಯ ಪ್ರದತ್ತವಾದ ಅಧಿಕಾರ ಚಲಾಯಿಸಿ ಜು.21ರ ಸಂಜೆ 6 ಗಂಟೆಯವರೆಗೆ ಕೆ.ಆರ್. ಪೇಟೆ ತಾಲೂಕಿನಾದ್ಯಂತ ಎಲ್ಲಾ ಮಾದರಿಯ ಮದ್ಯದ ಅಂಗಡಿ, ಬಾರ್ ಮತ್ತು ರೆಸ್ಟೋರೆಂಟ್‌ಗಳನ್ನು ಮುಚ್ಚುವಂತೆ ಹಾಗೂ ಮದ್ಯ ಮಾರಾಟ, ಸಂಗ್ರಹಣೆ, ಸಾಗಣಿಕೆಯನ್ನು ನಿಷೇಧಿಸಿ ಜಿಲ್ಲಾಧಿಕಾರಿ ಎಸ್.ಅಶ್ವತಿ ಆದೇಶ ಹೊರಡಿಸಿದ್ದಾರೆ.

ಚಾಮುಂಡೇಶ್ವರಿ ತಾಯಿಗೆ ವಿಶೇಷ ಪೂಜೆ



ಕೆ.ಆರ್.ಪೇಟೆ, ಜು.20– ತಾಲೂಕಿನ ಅಕ್ಕಿಹೆಬ್ಬಾಳು ಗ್ರಾಮದ ಕುವೆಂಪು ಬಡಾವಣೆಯಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ಚಾಮುಂಡೇಶ್ವರಿ ವರ್ಧಂತಿಯ ಅಂಗವಾಗಿ ವಿಶೇಷ ಪೂಜೆ ನಡೆಯಿತು.

ಶ್ರೀ ಚಾಮುಂಡೇಶ್ವರಿ ದೇವಾಲಯದ ಪ್ರಧಾನ ಅರ್ಚಕ ಜಯಶಂಕರ್ ನೇತೃತ್ವದಲ್ಲಿ ಬೆಳಗ್ಗೆಯಿಂದಲೇ ವಿಶೇಷ ಪೂಜೆ, ಅಭಿಷೇಕ, ಹೂವಿನ ಅಲಂಕಾರ ಜರುಗಿತು. ತೀರ್ಥ ಪ್ರಸಾದ ವಿನಿಯೋಗ ಕಾರ್ಯ ಕ್ರಮಗಳು ದಿನವಿಡೀ ನಡೆದವು. ಶ್ರೀ ಚಾಮುಂಡೇಶ್ವರಿ ಅಮ್ಮನವರ ಆಶೀರ್ವಾದದಿಂದ ಕಳೆದ 2ವರ್ಷಗಳಿಂದ ವಿಶ್ವವನ್ನೇ ಕಾಡುತ್ತಿದ್ದ ಕೊರೊನಾ ಸೋಂಕು ದೂರವಾಗಿದೆ. ಮಳೆ ಬೆಳೆ ಚೆನ್ನಾಗಿ ಆಗುತ್ತಿದೆ. ನಾಡದೇವತೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕೃಪಾಶೀರ್ವಾದದಿಂದ ನಾಡಿಗೆ ಒಳಿತಾಗಲಿ ಎಂದು ದೇವರಲ್ಲಿ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥಿಸಲಾಯಿತು ಎಂದು ಪ್ರಧಾನ ಅರ್ಚಕ ಜಯಶಂಕರ್ ತಿಳಿಸಿದರು.

ಈ ವೇಳೆ ಜೋಗಪ್ಪ, ಮಂಜುಳಾ, ರಾಣಿಯಮ್ಮ, ಸುನಂದಮ್ಮ, ಜ್ಯೋತಿ, ಪ್ರಕಾಶ್, ಪುಟ್ಟಣ್ಣ, ಶಿವಣ್ಣ, ಶೋಭಾ, ರಾಜು, ಮಹೇಶ್‌ನಾಯಕ್, ಜಗದೀಶ್, ಲೋಕೇಶ್, ಲಕ್ಷ್ಮೀದೇವಿ ದೇವಾಲಯದ ಜಯಲಕ್ಷ್ಮೀ ಮತ್ತಿತರರು ಇದ್ದರು.

ಸಿದ್ದರಾಮೋತ್ಸವಕ್ಕೆ ಜಿಲ್ಲೆಯಿಂದ 20 ಸಾವಿರ ಜನರು ಭಾಗಿ: ಎಂ.ಎಲ್.ಸುರೇಶ್



ಮದ್ದೂರು, ಜು.20– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 75ನೇ ಹುಟ್ಟುಹಬ್ಬದ ಅಂಗವಾಗಿ ದಾವಣಗೆರೆಯಲ್ಲಿ ಆ.3ರಂದು ನಡೆಯುವ ಸಿದ್ದರಾಮೋತ್ಸವಕ್ಕೆ ಜಿಲ್ಲೆಯಿಂದ 20 ಸಾವಿರ ಜನರು ಪಾಲ್ಗೊಳ್ಳಲಿದ್ದಾರೆ ಎಂದು ಕುರುಬರ ಸಂಘದ ಜಿಲ್ಲಾಧ್ಯಕ್ಷ ಎಂ.ಎಲ್. ಸುರೇಶ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುಧವಾರ ನಡೆದ ಅಹಿಂದ ಮುಖಂಡರ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರಿಗೆ 75 ವರ್ಷ ತುಂಬಿದ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು ರಾಜ್ಯಾದ್ಯಂತ 6 ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು, ಅಹಿಂದು ಮುಖಂಡರು, ಸಿದ್ದರಾಮಯ್ಯ ಅವರ ಅಭಿಮಾನಿಗಳು ಭಾಗವಹಿಸಲಿದ್ದಾರೆ ಎಂದರು.

ಈ ಕಾರ್ಯಕ್ರಮವು ವ್ಯಕ್ತಿ ಪೂಜೆ ಅಲ್ಲ. ಎಲ್ಲಾ ವರ್ಗದ ಜನರ ಪರವಾಗಿ ಹೋರಾಟ ಮಾಡಿದ ಧೀಮಂತ ವ್ಯಕ್ತಿಗೆ ಸಲ್ಲಿಸುತ್ತಿರುವ ಗೌರವವಾಗಿದೆ. ಕಾಂಗ್ರೆಸ್ ಯುವ ನಾಯಕ ರಾಹುಲ್ ಗಾಂಧಿ ಸೇರಿದಂತೆ ಅನೇಕ ಗಣ್ಯರ ಭಾಗವಹಿಸುತ್ತಿದ್ದಾರೆ ಎಂದು ತಿಳಿಸಿದರು.

ಈ ವೇಳೆ ಕುರುಬ ಸಂಘದ ತಾಲೂಕು ಅಧ್ಯಕ್ಷ ಮರಿ ಹೆಗ್ಗಡೆ, ಕಾರ್ಯದರ್ಶಿ ನಾಗರಾಜು, ಮನ್‌ಮುಲ್ ಮಾಜಿ ನಿರ್ದೇಶಕರಾದ ಕುಮಾರ್‌ಕೊಪ್ಪ, ರಾಮಕೃಷ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಕದಲೂರು ರಾಮಕೃಷ್ಣ, ಶಿವಲಿಂಗೇಗೌಡ, ಮುಖಂಡರಾದ ಅಮ್ಜದ್ ಪಾಷ, ಕುಮಾರ್ ಇದ್ದರು.

ಮಾಜಿ ಸಚಿವ ಚೆಲುವರಾಯಸ್ವಾಮಿ ವಿರುದ್ಧ ಅವಹೇಳನಕಾರಿ ಹೇಳಿಕೆ: ವ್ಯಕ್ತಿ ವಿರುದ್ಧ ದೂರು



ನಾಗಮಂಗಲ, ಜು.20– ಮಾಜಿ ಸಚಿವ ಚೆಲುವರಾಯಸ್ವಾಮಿ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆಯನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟ ವ್ಯಕ್ತಿ ವಿರುದ್ಧ ಮಂಡ್ಯ ಜಿಲ್ಲೆ ಸಹಕಾರಿ ಸಂಘದ ಒಕ್ಕೂಟದ ನಿರ್ದೇಶಕ ತಟ್ಟಹಳ್ಳಿ ನರಸಿಂಹಮೂರ್ತಿ ದೂರು ನೀಡಿದ್ದಾರೆ.

ತಟ್ಟಹಳ್ಳಿ ಗ್ರಾಮದ ಬೆಂಗಳೂರು ನಿವಾಸಿ ಸತೀಶ್ ವಿರುದ್ಧ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ದಾವೆ ಹೂಡಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಈ ಕುರಿತು ನರಸಿಂಹಮೂರ್ತಿ ಮಾತನಾಡಿ, ಸತೀಶ್ ನಮ್ಮ ಗ್ರಾಮದ ಯುವಕ. ಪ್ರಸ್ತುತ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ಆದರೆ, ರಾಜಕೀಯ ಪ್ರೇರಿತವಾಗಿ ನನ್ನ ಮತ್ತು ನನ್ನ ನಾಯಕ ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಅವರ ಮೇಲೆ ಸತೀಶ್ ಬಳಸಿರುವ ಪದ ಪ್ರಯೋಗವನ್ನು ಖಂಡಿಸುತ್ತೇನೆ. ಈತನ ವಿರುದ್ಧ ಠಾಣೆಯಲ್ಲಿ ದೂರು ದಾಖಲಿಸಿದ್ದು, ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದೇನೆ ಎಂದು ತಿಳಿಸಿದರು.

ಇಂದು, ನಾಳೆ ಯಲ್ಲಮ್ಮತಾಯಿ ಪೂಜಾ ಮಹೋತ್ಸವ



ಮದ್ದೂರು, ಜು.20– ತಾಲೂಕಿನ ಬೆಸಗರ ಹಳ್ಳಿ ಗ್ರಾಮದ ಯಲ್ಲಮ್ಮತಾಯಿ ದೇಗುಲದಲ್ಲಿ ಕೊನೆ ಆಷಾಢ ಶುಕ್ರವಾರದ ಪ್ರಯುಕ್ತ ಜು.21, 22ರಂದು 6ನೇ ವರ್ಷದ ಸಂಭ್ರಮದ ಪೂಜಾ ಮಹೋತ್ಸವ ನಡೆಯಲಿದೆ ಎಂದು ದೇಗುಲದ ಪ್ರಧಾನ ಅರ್ಚಕ ಬಿ.ಆರ್. ಸತ್ಯನಾರಾಯಣ ತಿಳಿಸಿದ್ದಾರೆ.

ಜು.21ರಂದು ಬೆಳಗ್ಗೆ 8 ಗಂಟೆಗೆ ಗಣಪತಿ ಪೂಜೆ, ಪುಣ್ಯಾಹ, ನವಗ್ರಹ ಪೂಜೆ, ದೇವರ ಕವಚ ಶುದ್ಧಿ, ಪಂಚಗವ್ಯ ಮೇಳ, ಗಣಪತಿ ಹೋಮ, ನವಗ್ರಹ ಹೋಮ, ವಿಶೇಷವಾಗಿ ಚಂಡಿಕಾ ಹೋಮ ಮತ್ತು ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿ, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ ನಡೆಯಲಿದೆ. ಸಂಜೆ 4 ಗಂಟೆಗೆ ಪುಣ್ಯಾಹ, ಕಳಶಾರಾಧನೆ, ಹೂ ಹೊಂಬಾಳೆ ತರುವುದು ಮತ್ತು ಮೀಸಲು ನೀರು ತರುವುದು ನಂತರ ಮಹಾಮಂಗಳಾರತಿ ತೀರ್ಥ ಪ್ರಸಾದ ವಿನಿಯೋಗ ಇರುತ್ತದೆ ಎಂದರು.

ರಾತ್ರಿ 7.30 ಗಂಟೆಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ದೇವಿಯವರ ಪೂಜಾ ಉತ್ಸವ ನಡೆಯಲಿದೆ. ಜು. 22 ರಂದು ಶುಕ್ರವಾರ ಮಧ್ಯಾಹ್ನ 12 ಗಂಟೆಯಿಂದ ಅನ್ನಸಂತರ್ಪಣೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ದೇವರಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗುವುದು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ದೇವರ ಉತ್ಸವದಲ್ಲಿ ಭಾಗವಹಿಸಿ ದೇವರ ಕಾರ್ಯವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಮಂಡ್ಯ ವಿವಿಯಲ್ಲಿ ವಿವಿಧ ಕೋರ್ಸ್ ಆರಂಭ: ಡಾ.ಪುಟ್ಟರಾಜು

ಮಂಡ್ಯ,ಜು.20– ಮಂಡ್ಯ ವಿಶ್ವ ವಿದ್ಯಾಲಯದಲ್ಲಿ ನೂತನವಾಗಿ ವಿವಿಧ ಕೋರ್ಸ್‌ಗಳು ಆರಂಭವಾಗಿದ್ದು, ವಿದ್ಯಾರ್ಥಿಗಳು ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಮಂಡ್ಯ ವಿಶ್ವವಿದ್ಯಾಲಯದ ಕುಲಪತಿ ಡಾ.ಪುಟ್ಟರಾಜು ತಿಳಿಸಿದರು.

ಮಂಡ್ಯ ವಿಶ್ವವಿದ್ಯಾಲಯದ ಕಚೇರಿ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬಿ.ಕಾಂ ಲಾಜಿಸ್ಟಿಕ್ಸ್, ಬಿ.ಸಿ.ಎ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮತ್ತು ಮೆಷಿನ್ ಲರ್ನಿಂಗ್, ಇಂಡಸ್ಟ್ರಿ ಅಪ್ರೆಂಟಿಸ್‌ಶಿಪ್ ರೂಪದಲ್ಲಿ ಉದ್ಯೋಗದ ತರಬೇತಿ, ಫೈನಾನ್ಸಿಯಲ್ ಅವೈರ್ನೆಸ್ ಅಂಡ್ ಇನ್ವೆಸ್ಟ್‌ಮೆಂಟ್ ನೂತನ ಕೋರ್ಸ್‌ಗಳಾಗಿವೆ. ಇದರ ಸದುಪಯೋಗವನ್ನು ಪಡೆದುಕೊಳ್ಳಿ ಎಂದರು.

ಸರ್ಕಾರ ಮಂಡ್ಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣದ ವ್ಯವಸ್ಥೆ ನೀಡುವಲ್ಲಿ ಸಹಕಾರಿಯಾಗಿದೆ. 10 ಸಾವಿರ ವಿದ್ಯಾರ್ಥಿಗಳು ಶಿಕ್ಷಣ ಪಡೆಯುವಂತಹ ಬಿಲ್ಡಿಂಗ್ ವ್ಯವಸ್ಥೆ ಇದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಪರೀಕ್ಷಾಂಗ ಕುಲಸಚಿವ ಡಾ.ಟಿ.ಶಿವಲಿಂಗಸ್ವಾಮಿ, ಹಣಕಾಸು ಅಧಿಕಾರಿ ಎಂ.ಎನ್.ಮಲ್ಲಿಕಾರ್ಜುನಯ್ಯ, ಡಾ.ನಾಗರಾಜು ಜಿ.ಚೊಳ್ಳಿ ಇದ್ದರು.

ವಿವಿಧೆಡೆ ಚಾಮುಂಡೇಶ್ವರಿ ವರ್ಧಂತಿ ಮಹೋತ್ಸವ



ಚಾಮರಾಜನಗರ, ಜು.20–ನಗರದ ಹಾಗೂ ಜಿಲ್ಲೆಯಲ್ಲಿ ವಿವಿಧೆಡೆ ಚಾಮುಂಡೇಶ್ವರಿ ವರ್ಧಂತಿ ಮಹೋತ್ಸವನ್ನು ಬುಧವಾರ ವಿಜೃಂಭಣೆಯಿಂದ ಆಚರಿಸಲಾಯಿತು. ನಗರದ ಉಪ್ಪಾರ ಬೀದಿ ಚಾಮುಂಡೇಶ್ವರಿ ಸೇವಾ ಸಮಿತಿಯಿಂದ ಚಾಮರಾಜೇಶ್ವರ ದೇಗುಲದ ಒಳಾವರಣದ ಚಾಮುಂಡೇಶ್ವರಿ ಸನ್ನಿಧಿಯಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ವರ್ಧಂತಿ ಅಂಗವಾಗಿ ಚಾಮುಂಡೇಶ್ವರಿ ಅಮ್ಮನವರಿಗೆ ವಿವಿಧ ಹೂಗಳಿಂದ ಅಲಂಕರಿಸಲಾಗಿತ್ತು. ಭಕ್ತಾದಿಗಳು ಚಾಮುಂಡೇಶ್ವರಿಗೆ ನಿಂಬೆಹಣ್ಣು ದೀಪ ಹಚ್ಚಿ ಪೂಜೆ ಸಲ್ಲಿಸಿದರು. ಸಮಿತಿಯವರು ನೆರೆದಿದ್ದ ಭಕ್ತರಿಗೆ ಅನ್ನಸಂತರ್ಪಣೆ ನೆರವೇರಿಸಲಾಯಿತು. ನಗರಸಭೆ ಮಾಜಿ ಉಪಾಧ್ಯಕ್ಷ ಶಿವನಂಜಯ್ಯ, ರಂಗಸ್ವಾಮಿ, ನಂಜುಂಡಸ್ವಾಮಿ, ಶಿವಕುಮಾರ್, ಜಿಲ್ಲಾ ಉಪ್ಪಾರ ಯುವಕರ ಸಂಘದ ಅಧ್ಯಕ್ಷ ಜಯಕುಮಾರ್, ಪ್ರಧಾನ ಕಾರ್ಯದರ್ಶಿ ಸಿ.ಎಸ್.ನಾಗರಾಜು ಹಾಜರಿದ್ದರು.

ಗೊಂಧಳಿ ಸಮಾಜ: ನಗರದಲ್ಲಿ ಗೊಂಧಳಿ ಸಮಾಜದಿಂದ ಶ್ರೀಚಾಮುಂಡೇಶ್ವರಿ ದೇವಿಯ ವರ್ಧಂತಿ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು. ಶ್ರೀಚಾಮುಂಡೇಶ್ವರಿ ವರ್ಧಂತಿ ಪ್ರಯುಕ್ತ ನಗರದ 16ನೇ ವಾರ್ಡ್ ಗೊಂಧಳಿ ಸಮಾಜದಿಂದ ಚಾಮುಂಡೇಶ್ವರಿ ದೇವಿಯ ಮೂರ್ತಿ ಪ್ರತಿಷ್ಠಾಪಿಸಿ ನಗರದ ಪ್ರಮುಖ ಬೀದಿಗಳಲ್ಲಿ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಸಿಸುವರ್ಣಾವತಿ ಜಲಾಶಯದಲ್ಲಿ ವಿಸರ್ಜಿಸಲಾಯಿತು. ಮೆರವಣಿಗೆಯಲ್ಲಿ ಸಮಾಜದ ಶಿವಕುಮಾರ್, ಭವಾನಿಶಂಕರ್, ಶಂಕರ್ ರಾವ್, ಆನಂದರಾವ್, ಬಾಬು, ನಾಗೇಶ್ ರಾವ್, ಕಾಳುರಾವ್, ದೇವು, ಪ್ರಮುಖರಿದ್ದರು.

ಗುಂಡ್ಲುಪೇಟೆ ವರದಿ: ಪಟ್ಟಣದ ಕೆಆರ್‌ಸಿ ರಸ್ತೆಯಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ಚಾಮುಂಡಿ ವರ್ಧಂತಿ ಹಿನ್ನೆಲೆಯಲ್ಲಿ ವಿಶೇಷ ಪೂಜೆ ಕೈಂಕರ್ಯ ನೆರವೇರಿಸಿಲಾಯಿತು. ಪಟ್ಟಣದ ಪ್ರಮುಖ ರಸ್ತೆಯಲ್ಲಿ ವಿದ್ಯುತ್ ದೀಪಾಲಂಕಾರ ಮತ್ತು ದೇವಾಲಯಕ್ಕೆ ತಳಿರು–ತೋರಣಗಳ ಅಲಂಕಾರ ಮಾಡಿ ದೇವಿಯ ವಿಗ್ರಹಕ್ಕೆ ಪೂಜೆ ಪ್ರಾರ್ಥನೆ ಹಾಗೂ ನೈವೇದ್ಯ ಅರ್ಪಿಸಲಾಯಿತು. ಪಟ್ಟಣದ ವಿವಿಧ ಬಡಾವಣೆಯ ಭಕ್ತರು ದೇವಿಯ ದರ್ಶನ ಪಡೆದು ಪುನೀತರಾದರು.

ಶ್ರೀ ಪುರದ ಮಾರಮ್ಮನವರ ಪೂಜಾ ಮಹೋತ್ಸವ





ಗುಂಡ್ಲುಪೇಟೆ ತಾಲೂಕು ಬೇಗೂರು ಹೋಬಳಿಯ ತೊಂಡವಾಡಿ ಗ್ರಾಮದ ಶ್ರೀ ಪುರದ ಮಾರಮ್ಮನಗರ 9ನೇ ವರ್ಷದ ಪೂಜಾ ಮಹೋತ್ಸವ ಹಾಗೂ ಆರಾಧನೆ ಕಳೆದ ಮಂಗಳವಾರ ಅದ್ದೂರಿಯಾಗಿ ನೆರವೇರಿತು. ಈ ವೇಳೆ ಏರ್ಪಡಿಸಲಾಗಿದ್ದ ಮಹಾ ಅನ್ನಸಂತರ್ಪಣೆಯಲ್ಲಿ ಸಾವಿರಾರು ಮಂದಿ ಪಾಲ್ಗೊಂಡಿದ್ದರು.

ಸೋನಿಯಾಗಾಂಧಿ ಇಡಿ ವಿಚಾರಣೆ ಖಂಡಿಸಿ ನಾಳೆ ಕಾಂಗ್ರೆಸ್‌ನಿಂದ ಬೃಹತ್ ಪ್ರತಿಭಟನೆ



ಚಾಮರಾಜನಗರ, ಜು.20– ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಇಡಿ ತನಿಖೆಯ ಒಳಪಡಿಸಿರುವುದನ್ನು ವಿರೋಧಿಸಿ ಕೇಂದ್ರ ಸರ್ಕಾರದ ವಿರುದ್ಧ ಜು.22ರಂದು ನಗರದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ತಿಳಿಸಿದರು.

ನಗರದ ಸತ್ತಿರಸ್ತೆಯಲ್ಲಿರುವ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಆಡಳಿತ ಪಕ್ಷದ ಆದೇಶದಂತೆ ಇಡಿ ದುರುದ್ದೇಶಪೂರ್ವಕವಾಗಿ ತನಿಖೆ ಮೂಲಕ ಅವರಿಗೆ ಕಿರುಕುಳ ನೀಡಲಾಗುತ್ತಿದೆ ಎಂದು ಆರೋಪಿಸಿದರು. ದಾವಣಗೆರೆಯಲ್ಲಿ ಆ.3ರಂದು ನಡೆಯುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 75ನೇ ವರ್ಷದ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷದ ಕಾರ್ಯಕರ್ತರು, ಮುಖಂಡರು ಭಾಗವಹಿಸಿ ಯಶಸ್ವಿಗೊಳಿಸುವಂತೆ ಧ್ರುವನಾರಾಯಣ್ ಮನವಿ ಮಾಡಿದರು. ಶಾಸಕ ಸಿ.ಪುಟ್ಟರಂಗಶೆಟ್ಟಿ , ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿದರು. ಸಭೆಯಲ್ಲಿ ಶಾಸಕ ಆರ್.ನರೇಂದ್ರ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಸಿ.ಬಸವರಾಜು, ಮಾಜಿ ಶಾಸಕ ಎಸ್.ಜಯಣ್ಣ, ಮುಖಂಡ ಗಣೇಶ್‌ಪ್ರಸಾದ್, ಜಿಲ್ಲಾ ಕಾಂಗ್ರೆಸ್ ವಕ್ತಾರ ಕೆರೆಹಳ್ಳಿ ನವೀನ್, ಪ್ರಧಾನ ಕಾರ್ಯದರ್ಶಿಗಳಾದ ಆರ್.ಮಹದೇವು, ಚಿಕ್ಕಮಹದೇವು, ಉಪಾಧ್ಯಕ್ಷ ಕೊಪ್ಪಾಳಿನಾಯಕ, ಎಸ್‌ಟಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಪು.ಶ್ರೀನಿವಾಸನಾಯಕ, ಜಿಪಂ ಮಾಜಿ ಅಧ್ಯಕ್ಷ ಸಿ.ಎ.ಮಹದೇವಶೆಟ್ಟಿ, ಸದಸ್ಯ ಎಸ್.ಸೋಮನಾಯಕ, ಕೆ.ಪಿ.ಸದಾಶಿವಮೂರ್ತಿ ಇತರರು ಭಾಗವಹಿಸಿದ್ದರು.

ಉತ್ಪಾದಕರಿಗೆ ಚಾಮುಲ್‌ನಿಂದ ಲೀ. ಹಾಲಿಗೆ 1 ರೂ. ಹೆಚ್ಚಳ



ಯಳಂದೂರು,ಜು.20–ಚಾಮರಾಜನಗರ ಜಿಲ್ಲಾ ಹಾಲು ಒಕ್ಕೂಟದ ನೂತನ ಸಮಿತಿಯು ಜಿಲ್ಲೆಯ ಹಾಲು ಉತ್ಪಾದಕರಿಗೆ ಹೆಚ್ಚುವರಿಯಾಗಿ ಲೀ.ಗೆ 1 ರೂ. ನೀಡಲು ತೀರ್ಮಾನಿಸಿದ್ದು, ಇದು ಜು.21ರಿಂದ ಜಾರಿಗೆ ಬರಲಿದೆ ಎಂದು ಚಾಮುಲ್ ಅಧ್ಯಕ್ಷ ವೈ.ಸಿ.ನಾಗೇಂದ್ರ ತಿಳಿಸಿದರು.

ತಾಲೂಕಿನ ಬಿಳಿಗಿರಿರಂಗನಬೆಟ್ಟದ ವಿಜಿಕೆಕೆಯಲ್ಲಿ ಮಂಗಳವಾರ ಯಳಂದೂರು ತಾಲೂಕು ಹಾಲು ಉತ್ಪಾದಕರ ಸಹಕಾರ ಸಂಘದ ನೌಕರರ ಸಂಘದಿಂದ ನೂತನ ಅಧ್ಯಕ್ಷ ಹಾಗೂ ನಿರ್ದೇಶಕರಿಗೆ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು. ಜಿಲ್ಲೆಯಲ್ಲಿ ಒಟ್ಟು 35 ಸಾವಿರ ಚಾಮುಲ್‌ನ ಶೇರುದಾರರು ಇದ್ದಾರೆ. ಇವರಲ್ಲಿ 25 ಸಾವಿರ ಸದಸ್ಯರು ಪ್ರತಿನಿತ್ಯ ಹಾಲನ್ನು ಪೂರೈಸುತ್ತಾರೆ. ಚಾಮುಲ್‌ಗೆ ನಿತ್ಯ 2.76 ಲಕ್ಷ ಲೀ. ಹಾಲು ಸರಬರಾಜಾಗುತ್ತಿದೆ. ಈಗ ಅಸ್ತಿತ್ವಕ್ಕೆ ಬಂದಿರುವ ನೂತನ ಸಮಿತಿ ಸದಸ್ಯರು ಹಾಲು ಉತ್ಪಾದಕರಿಗೆ ನೇರವಾಗಿ ಲೀ.ಗೆ 1 ರೂ. ಹೆಚ್ಚಳ ಮಾಡಲು ತೀರ್ಮಾನಿಸಿದ್ದು, ಜು.21ರಂದು ಜಾರಿಗೆ ಬರಲಿದೆ ಎಂದರು.

ಚಾಮುಲ್‌ನ ವ್ಯವಸ್ಥಾಪಕ ನಿರ್ದೇಶಕ ರಾಜಶೇಖರಮೂರ್ತಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ನೂತನ ಅಧ್ಯಕ್ಷ ಹಾಗೂ ನಿರ್ದೇಶಕರಿಗೆ ಯಳಂದೂರು ತಾಲೂಕು ಹಾಲು ಉತ್ಪಾದಕರ ಸಹಕಾರ ಸಂಘದಿಂದ ಸನ್ಮಾನಿಸಲಾಯಿತು.

ಕೆಎಂಎಫ್ ಹಾಗೂ ಚಾಮುಲ್ ನಿರ್ದೇಶಕ ನಂಜುಂಡಸ್ವಾಮಿ ನಿರ್ದೇಶಕರಾದ ಬಸವರಾಜಪ್ಪ, ಸದಾಶಿವಮೂರ್ತಿ, ಸಾಹುಲ್ ಅಹಮ್ಮದ್ ತಾರೀಖ್, ಮಹದೇವಸ್ವಾಮಿ, ಶೀಲಾ ಸಹಾಯಕ ವ್ಯವಸ್ಥಾಪಕ ಜಿ.ಪ್ರಭು, ವಿಸ್ತರಣಾಧಿಕಾರಿ ರಘು, ಲಕ್ಷ್ಮಿ, ಯರಗಂಬಳ್ಳಿ ಮಾದಪ್ಪ ಗೌಡಹಳ್ಳಿ ಮಹದೇವಸ್ವಾಮಿ, ಪುಟ್ಟಬುದ್ದಿ, ರವಿ, ರಾಜಶೇಖರ್, ಮಲ್ಲಿಗೆಹಳ್ಳಿ ಪ್ರಭುಸ್ವಾಮಿ ತಾಲೂಕಿನ ವಿವಿಧ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಇದ್ದರು.

ಗಿಡಗಳನ್ನು ಬೆಳೆಸುವ ಕೆಲಸ ಬಹಳ ಪವಿತ್ರವಾದದ್ದು



ಚಾಮರಾಜನಗರ. ಜು.20– ಗಿಡಗಳನ್ನು ಬೆಳೆಸಿ ಪಕ್ಷಿಗಳಿಗೆ ಆಶ್ರಯ ಸೃಷ್ಟಿಸುವ ಕೆಲಸ ಪವಿತ್ರವಾದದ್ದು. ಪಶು ಪಕ್ಷಿಗಲ್ಲದೆ, ಮನುಷ್ಯರಿಗೂ ಪರಿಸರ ಮುಖ್ಯವಾಗಿದೆ ಎಂದು ಕೃಷಿಕ ಹಾಗೂ ಹವ್ಯಾಸಿ ಪತ್ರಕರ್ತ ಚಿನ್ನಸ್ವಾಮಿ ವಡ್ಡಗೆರೆ ಅಭಿಪ್ರಾಯಪಟ್ಟರು.

ಉಸ್ತುವಾರಿ ಸಚಿವ ವಿ.ಸೋಮಣ್ಣನವರ 72ನೇ ವರ್ಷದ ಹುಟುಹಬ್ಬದ ಆಚರಣೆಯ ಅಂಗವಾಗಿ ತಾಲೂಕಿನ ಸಂತೇಮರಳ್ಳಿ ಗ್ರಾಪಂ ಆವರಣದಲ್ಲಿ ಚಾಮರಾಜನಗರದ ಈಶ್ವರಿ ಟ್ರಸ್ಟ್ ಆಯೋಜಿಸಿದ್ದ ಸಂತೇಮರಳ್ಳಿಯ ವೃತ್ತದಿಂದ ನಾಲ್ಕು ದಿಕ್ಕಿನ ರಸ್ತೆ ಗ್ರಾಪಂ ವ್ಯಾಪ್ತಿಗೆ ಸಾಲು ಗಿಡಗಳನ್ನು ನೆಡುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗಿಡಮರಗಳನ್ನು ಪಟ್ಟಣ ಪ್ರದೇಶದಲ್ಲಿ ಬೆಳಸುವುದರಿಂದ ಪಟ್ಟಣವು ಸುಂದರವಾಗಿ ಕಾಣುವುದಲ್ಲದೆ, ಉತ್ತಮ ಗಾಳಿಯು ದೊರೆಯುತ್ತದೆ ಎಂದರು.

ಈಶ್ವರಿ ಟ್ರಸ್ಟ್ ಅಧ್ಯಕ್ಷ ಸಿ.ಎಂ.ವೆಂಕಟೇಶ್ ಮಾತನಾಡಿದರು. ಮುಖ್ಯಅತಿಥಿ ಸಂತೇಮರಳ್ಳಿ ಹೆಗ್ಗವಾಡಿಪುರದ ಹನುಮ ಸಂಜೀವಿನಿ ಪಾರಂಪರಿಕ ವೈದ್ಯರಾದ ಮಹೇಶ್ ಕುಮಾರ್.ಹೆಚ್.ಸಿ, 10 ಸಾವಿರ ರೂ.ಗಳನ್ನು ಗಿಡಗಳ ಪೋಷಣೆಗಾಗಿ ನೀಡಿದರು. ಗಿಡ ನೆಡುವ ಕಾರ್ಯಕ್ರಮಕ್ಕೆ ಮೈಸೂರಿನ ರಾಜೀವ್ ಸ್ನೇಹ ಬಹಳ ಸಾವಿರ ಗಿಡಗಳನ್ನು ಉಚಿತವಾಗಿ ನೀಡುತ್ತಿದೆ.

ಗ್ರಾಪಂ ಅಧ್ಯಕ್ಷ ಎಂ.ಪಿ.ಶಂಕರ್ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ವಿಶೇಷ ಕರ್ತವ್ಯ ಅಧಿಕಾರಿ ಎಂ.ಕೆ.ಸ್ವಾಮಿ, ಗ್ರಾಪಂ ಉಪಾಧ್ಯಕ್ಷೆ ಪಿ.ಜ್ಯೋತಿ, ಆರ್.ಮಹೇಶ್, ಪಿಡಿಒ ಎಸ್.ಮಮತಾ ಉಪಸ್ಥಿತರಿದ್ದರು.

ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಶ್ರೀಗಳ ಜಯಂತಿ



ಮೈಸೂರಿನ ಗಾಂಧಿ ಚೌಕದ ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ಎದುರು ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಜನ್ಮದಿನ ಆಚರಿಸಲಾಯಿತು. ಟ್ರಸ್ಟ್ ಉಪಾಧ್ಯಕ್ಷ ಕುಮಾರ್‌ಗೌಡ, ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎಸ್.ಆರ್.ರವಿ, ಮುಖಂಡರಾದ ರಾಘವೇಂದ್ರ, ಆನಂದ ಚಿತ್ರದಲ್ಲಿದ್ದಾರೆ.



ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾದ ವತಿಯಿಂದ ಬುಧವಾರ ಆದಿಚುಂಚನಗಿರಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹುಟ್ಟುಹಬ್ಬವನ್ನು ಆಚರಿಸಿ, ಸಿಹಿ ವಿತರಿಸಲಾಯಿತು. ಈ ವೇಳೆ ಎನ್.ಬೆಟ್ಟೇಗೌಡ, ಎಂ.ಜೆ.ಸುರೇಶಗೌಡ, ಡಾ.ಶಶಿಕುಮಾರ್, ಚೇತನ್, ವೆಂಕಟೇಶ್, ಮೋಹಿತ್ ಇತರರಿದ್ದರು.

ಮೈಸೂರು,ಜು.20(ಪಿಎಂ)– ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ವತಿಯಿಂದ ಶ್ರೀ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಯವರ ಜನ್ಮದಿನ ಆಚರಿಸಲಾಯಿತು.

ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ಎದುರು ಶ್ರೀಗಳ ಫೋಟೋಗೆ ಮಾಲಾರ್ಪಣೆ ಮಾಡಿ, ಅವರ ಜನ್ಮದಿನ ಆಚರಿಸಲಾಯಿತು. ಈ ವೇಳೆ ಮಾತನಾಡಿದ ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕ ರವಿ ರಾಜಕೀಯ, ಆದಿ ಚುಂಚನಗಿರಿ ಮಠವು ಅನ್ನ ಮತ್ತು ಶಿಕ್ಷಣ ದಾಸೋಹಕ್ಕೆ ಹೆಸರುವಾಸಿಯಾಗಿದೆ ಎಂದು ಮಠದ ಕಾರ್ಯವನ್ನು ಸ್ಮರಿಸಿದರು.

ಅಂಕಿ-ಅಂಶಗಳ ಪ್ರಕಾರ 8 ಸಾವಿರ ಮಕ್ಕಳಿಗೆ ಉಚಿತ ವಸತಿ ಶಿಕ್ಷಣವನ್ನು ಮಠ ನೀಡುತ್ತಿದೆ. ಅಂಥ ಮಕ್ಕಳ ವಸತಿ ಶಾಲೆಗಳ ಮೂಲಕ ಅವರ ಬಾಳಿಗೆ ಬೆಳಕು ನೀಡುತ್ತಿದೆ. ಗೋ ಶಾಲೆಗಳನ್ನು ತೆರೆದು ಗೋವುಗಳ ಆರೈಕೆಯನ್ನು ಮಠ ಮಾಡುತ್ತಿದೆ. ಹತ್ತು ಹಲವು ಸೇವೆಗಳ ಮೂಲಕ ಸಮಾಜದ ಶ್ರೇಯೋಭಿವೃದ್ಧಿಗೆ ಮಠ ಉನ್ನತ ಮಟ್ಟದ ಕೊಡುಗೆ ನೀಡುತ್ತಿದೆ ಎಂದರು.

ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಆಶಯದಂತೆ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಮಠವನ್ನು ಸಮಾಜಮುಖಿಯಾಗಿ ಮುನ್ನಡೆಸುತ್ತಿದ್ದಾರೆ ಎಂದರು. ಟ್ರಸ್ಟ್ ಉಪಾಧ್ಯಕ್ಷ ಕುಮಾರ್‌ಗೌಡ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎಸ್.ಆರ್. ರವಿ, ರಾಘವೇಂದ್ರ ಆನಂದ ಇನ್ನಿತರರಿದ್ದರು.



ಪಡುವಾರಹಳ್ಳಿಯ ಆದಿಚುಂಚನಗಿರಿ ಹಾಸ್ಟೆಲ್ ಬಳಿ ಸಿಹಿ ವಿತರಿಸುವ ಮೂಲಕ ಶ್ರೀ ನಿರ್ಮಲಾನಂದನಾಥ ಶ್ರೀಗಳ ಹುಟ್ಟುಹಬ್ಬ ಆಚರಿಸಲಾಯಿತು. ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ, ಪಾಲಿಕೆ ಮಾಜಿ ಸದಸ್ಯರಾದ ಸಿ.ಶ್ರೀರಾಮ್, ಪಿ.ಎಸ್.ಭರತೇಶ, ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಸ್.ಬಿ.ಶಿವು, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರಾದ ಕೃಷ್ಣಕುಮಾರ್, ಬಿ.ಕುಮಾರ್, ರಾಘವ್‌ಗೌಡ, ಮುಖಂಡರಾದ ಎನ್.ಬೆಟ್ಟೇಗೌಡ, ಭೈರವ, ಭಟೇರಿಸ್ವಾಮಿ, ಕಿಟ್ಟಿ, ಸುರೇಂದ್ರ, ಗುರುರಾಜ್, ಕುಮಾರ್, ಕಾಳೇಗೌಡ, ಭೀಮ ಇದ್ದರು.

ಉದ್ಯಮಿ ಖಾತೆಗೆ ಕನ್ನ: 1.77 ಲಕ್ಷ ವರ್ಗಾವಣೆ

ಮೈಸೂರು, ಜು.20–ಹೊಸ ಎಟಿಎಂ ಕಾರ್ಡ್ ಡೆಲಿವರಿ ಮಾಡುವುದಾಗಿ ಕರೆ ಮಾಡಿ ಉದ್ಯಮಿಯೊಬ್ಬರ ಬ್ಯಾಂಕ್ ಖಾತೆಯಿಂದ 1.77 ಲಕ್ಷ ರೂ. ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಸುಭಾಷ್‌ನಗರ ನಿವಾಸಿ, ಉದ್ಯಮಿ ಸಯ್ಯದ್ ದಿಲ್ದಾರ್ ರಿಜ್ವಾನ್ ಅಹಮ್ಮದ್(72) ಅವರ ಮೊಬೈಲ್‌ಗೆ ಕರೆ ಮಾಡಿದ ವ್ಯಕ್ತಿಯು ಹೊಸ ಎಟಿಎಂ ಕಾರ್ಡ್ ಡೆಲಿವರಿ ಮಾಡುವುದಾಗಿ ತಿಳಿಸಿ ಲಿಂಕ್‌ವೊಂದನ್ನು ಕಳುಹಿಸಿದ್ದಾನೆ. ಅವರು ಲಿಂಕ್ ಮೇಲೆ ಕ್ಲಿಕ್ ಮಾಡಿದಾಗ ಅವರ ಎರಡೂ ಬ್ಯಾಂಕ್ ಖಾತೆಗಳಿಂದ ಒಟ್ಟು 1,77,488 ರೂ. ಅಕ್ರಮವಾಗಿ ವರ್ಗಾವಣೆಯಾಗಿದೆ. ಮತ್ತೊಂದು ಪ್ರಕರಣದಲ್ಲಿ ಬ್ಯಾಂಕ್ ಮ್ಯಾನೇಜರ್ ಹೆಸರಿನಲ್ಲಿ ಕರೆ ಮಾಡಿದ ವ್ಯಕ್ತಿ, ದಂಪತಿಯ ಎಟಿಎಂ ಕಾರ್ಡ್ ವಿವರಗಳನ್ನು ಪಡೆದು ಒಟ್ಟು 42,502 ರೂ. ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿದ್ದಾರೆ. ಹೆಚ್.ಡಿ.ಕೋಟೆ ತಾಲೂಕು ವಡ್ಡರಗುಡಿ ಗ್ರಾಮದ ವಿಶ್ವಾರಾಧ್ಯ(52) ಎಂಬುವರ ಮೊಬೈಲ್‌ಗೆ ಕೆನರಾ ಬ್ಯಾಂಕ್ ಮ್ಯಾನೇಜರ್ ಎಂದು ಹೇಳಿಕೊಂಡು ಕರೆ ಮಾಡಿದ ವ್ಯಕ್ತಿ ವಿಶ್ವಾ ರಾಧ್ಯರ ಸಿಂಡಿಕೇಟ್ ಬ್ಯಾಂಕ್ ಎಟಿಎಂ ಕಾರ್ಡನ್ನು ಕೆನರಾ ಬ್ಯಾಂಕ್ ಕಾರ್ಡನ್ನಾಗಿ ಬದಲಾಯಿಸಿ ಕೊಡುವುದಾಗಿ ಹೇಳಿ ಅವರ ಕಾರ್ಡ್ ವಿವರ ಮತ್ತು ಓಟಿಪಿ ಸಂಖ್ಯೆ ಪಡೆದಿದ್ದಾನೆ. ಈ ವೇಳೆ ವಿಶ್ವಾರಾಧ್ಯರು ತಮ್ಮ ಪತ್ನಿ ವಿಜಯಾಂಬಿಕೆ ಅವರ ಬಳಿ ಕೂಡ ಸಿಂಡಿಕೇಟ್ ಬ್ಯಾಂಕ್ ಕಾರ್ಡ್ ಇದ್ದು, ಅದನ್ನೂ ಬದಲಾಯಿಸಿಕೊಡುವಂತೆ ಪತ್ನಿಯ ಕಾರ್ಡ್ ವಿವರಗಳನ್ನು ನೀಡಿದ್ದಾರೆ. ದಂಪತಿಯ ಖಾತೆಗಳಿಂದ ಒಟ್ಟು 42,502 ರೂ.ಗಳು ಅಕ್ರಮವಾಗಿ ವರ್ಗಾ ವಣೆಯಾಗಿದೆ. ಈ ಸಂಬಂಧ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಕ್ರಮ ಗ್ಯಾಸ್ ರೀ–ಫಿಲ್ಲಿಂಗ್: ಒರ್ವನ ಬಂಧನ

ಮೈಸೂರು,ಜು.20–ಅಕ್ರಮ ಗ್ಯಾಸ್ ರೀ–ಫಿಲ್ಲಿಂಗ್ ಮಾಡುತ್ತಿದ್ದ ಮಳಿಗೆ ಮೇಲೆ ಪೊಲೀಸರ ಸಹಕಾರದೊಂದಿಗೆ ದಾಳಿ ನಡೆಸಿದ ಆಹಾರ ನಿರೀಕ್ಷಕರು ಗ್ಯಾಸ್ ಸಿಲಿಂಡರ್‌ಗಳು ಮತ್ತು ರೀ–ಫಿಲ್ಲಿಂಗ್ ಪರಿಕರಗಳನ್ನು ವಶಪಡಿಸಿಕೊಂಡಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಉದಯಗಿರಿ ಠಾಣೆ ಪೊಲೀಸರೊಡಗೂಡಿ ಗೌಸಿಯಾ ನಗರದ ಉಸ್ಮಾನಿಯಾ ಮುಖ್ಯ ರಸ್ತೆಯಲ್ಲಿರುವ ಮಳಿಗೆಯೊಂದರ ಮೇಲೆ ದಾಳಿ ನಡೆಸಿದ ನಜರ್‌ಬಾದ್ ಮೊಹಲ್ಲಾದ ಆಹಾರ ನಿರೀಕ್ಷಕ ಬಿ.ಸಿ.ಮೋಹನ್ ಅವರು 16.7 ಕೆ.ಜಿ. ತೂಕದ ಭಾರತ್ ಗ್ಯಾಸ್ ಕಂಪನಿಗೆ ಸೇರಿದ ಅರ್ಧದಷ್ಟು ಗ್ಯಾಸ್ ತುಂಬಿದ ಸಿಲಿಂಡರ್, 15.4 ಕೆ.ಜಿ. ತೂಕದ ಭಾರತ್ ಗ್ಯಾಸ್ ಕಂಪನಿಯ ಮತ್ತು 16.1 ಕೆ.ಜಿ. ತೂಕದ ಇಂಡೇನ್ ಕಂಪನಿಯ 2 ಸಿಲಿಂಡರ್‌ಗಳು, ಅರ್ಧ ಹೆಚ್‌ಪಿ ಸಾಮರ್ಥ್ಯದ ಮೋಟಾರ್, ಎಲೆಕ್ಟ್ರಿಕಲ್ ತೂಕದ ಯಂತ್ರ ಮತ್ತು 2 ರೀ–ಫಿಲ್ಲಿಂಗ್ ರಾಡ್‌ಗಳನ್ನು ವಶಪಡಿಸಿಕೊಂಡು ಉದಯಗಿರಿ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಈ ಸಂಬಂಧ ಸಯ್ಯದ್ ಖಲೀಂ(39) ಎಂಬಾತನನ್ನು ಬಂಧಿಸಿದ ಪೊಲೀಸರು, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಅಪ್ರಾಪ್ತ ಬಾಲಕಿ ಅಪಹರಿಸಿ, ವಿವಾಹ ನಂತರ ವಂಚನೆ

ಪಿರಿಯಾಪಟ್ಟಣ,ಜು.20–ಅಪ್ರಾಪ್ತ ಬಾಲಕಿಯನ್ನು ಅಪಹರಿಸಿ ಮದುವೆಯಾಗಿದ್ದಲ್ಲದೇ, ಆಕೆಯೊಂದಿಗೆ 9 ತಿಂಗಳು ಸಂಸಾರ ನಡೆಸಿದ ಯುವಕ, ನಂತರ ಆಕೆಯನ್ನು ವಂಚಿಸಿರುವ ಬಗ್ಗೆ ವರದಿಯಾಗಿದೆ. ಪಿರಿಯಾಪಟ್ಟಣ ತಾಲೂಕಿನ ಗ್ರಾಮವೊಂದರ ಯುವಕ ಸುನೀಲ್‌ಕುಮಾರ್, ಅಪ್ರಾಪ್ತ ಬಾಲಕಿಯನ್ನು ವಂಚಿಸಿದ ಆರೋಪ ಎದುರಿಸುತ್ತಿರುವವನಾಗಿದ್ದು, ಬೆಟ್ಟದಪುರ ಠಾಣೆ ಪೊಲೀಸರು ಈತನ ವಿರುದ್ಧ ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ವಿವರ: ಗ್ರಾಮದ 16 ವರ್ಷದ ಬಾಲಕಿಯನ್ನು 2021ರ ಜು.9ರಂದು ಅಪಹರಿಸಿದ ಸುನೀಲ್‌ಕುಮಾರ್, ಜು.11ರಂದು ಹಾಸನ ಮತ್ತು ಬೇಲೂರು ನಡುವೆ ಇರುವ ಶನೇಶ್ವರ ದೇವಸ್ಥಾನದಲ್ಲಿ ವಿವಾಹವಾದ ನಂತರ ಬಾಲಕಿ ಮನೆಯಲ್ಲೇ ವಾಸ್ತವ್ಯ ಹೂಡಿ, ಆಕೆಯೊಂದಿಗೆ ಸಂಸಾರ ನಡೆಸಿದ್ದಾನೆ. 9 ತಿಂಗಳ ಬಳಿಕ ಬಾಲಕಿ ಮನೆ ಬಿಟ್ಟು ಹೋದ ಸುನೀಲ್‌ಕುಮಾರ್ ಮತ್ತೆ ವಾಪಸ್ಸಾಗಲಿಲ್ಲ. ಬಾಲಕಿಯ ತಾಯಿ ಮತ್ತು ಸಂಬಂಧಿಕರು ಆತನನ್ನು ಭೇಟಿ ಮಾಡಿ ಮಗಳೊಂದಿಗೆ ಸಂಸಾರ ನಡೆಸುವಂತೆ ಕೇಳಿಕೊಂಡಾಗ ಆತ ನಿರಾಕರಿಸಿದ್ದಾನೆ. ಈ ಸಂಬಂಧ ಬಾಲಕಿ ತಾಯಿ ನೀಡಿದ ದೂರನ್ನು ಬೆಟ್ಟದಪುರ ಠಾಣೆ ಪೊಲೀಸರು ದಾಖಲಿಸಿಕೊಂಡಿದ್ದಾರೆ.

ಪದವೀಧರೆಗೆ 2.08 ಲಕ್ಷ ರೂ. ವಂಚನೆ

ಮೈಸೂರು,ಜು.20–ವರ್ಕ್ ಫ್ರಂ ಹೋಂ ಕೆಲಸ ನೀಡುವುದಾಗಿ ಹೇಳಿ ಬಿ.ಎ. ಪದವೀಧರೆಗೆ ಆನ್‌ಲೈನ್ ಮೂಲಕ 2.08 ಲಕ್ಷ ರೂ. ಪಡೆದು ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರು ತಾಲೂಕು ಕೊಪ್ಪಲೂರು ಗ್ರಾಮದ ಪದವೀಧರೆ ಶ್ರೀಮತಿ ಸುಕನ್ಯಾ(29) ವಂಚನೆಗೊಳಗಾದವರಾಗಿದ್ದು, ಈ ಹಿಂದೆ ಇವರು ಬೆಂಗಳೂರಿನ ಐಸಿಐಸಿಐ ಬ್ಯಾಂಕ್‌ನಲ್ಲಿ ವ್ಯಾಲ್ಯೂ ಬ್ಯಾಂಕರ್ ಆಗಿ ಕೆಲಸ ಮಾಡಿಕೊಂಡಿದ್ದರು. ನಂತರ ಆ ಕೆಲಸ ತೊರೆದು ಕಳೆದ ಮಾರ್ಚ್‌ನಲ್ಲಿ ಗ್ರಾಮಕ್ಕೆ ಬಂದು ನೆಲೆಸಿದ್ದಾರೆ.

ಸುಕನ್ಯಾ ಅವರು ಇನ್‌ಸ್ಟಾಗ್ರಾಂ ಖಾತೆ ಹೊಂದಿದ್ದು, ಜು.16ರಂದು ಇನ್‌ಸ್ಟಾಗ್ರಾಂ ಸ್ಕ್ರೀನ್ ಮೇಲೆ ವರ್ಕ್ ಫ್ರಂ ಹೋಂ ಕೆಲಸದ ಬಗ್ಗೆ ಜಾಹೀರಾತು ಕಾಣಿಸಿಕೊಂಡಿದೆ. ಅದರಲ್ಲಿದ್ದ ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸಿದಾಗ ಮಾತನಾಡಿದ ಯುವತಿ ತನ್ನ ಹೆಸರು ಲೂಯಿಸ್ ಎಂದು ಪರಿಚಯಿಸಿಕೊಂಡು ತನ್ನನ್ನು ಅಮೆಜಾನ್ ಮರ್ಚೆಂಟ್‌ನ ಸೇಲ್ಸ್ ಎಕ್ಸಿಕ್ಯೂಟಿವ್ ಎಂದು ತಿಳಿಸಿದ್ದಾಳೆ. ತಮ್ಮ ಪ್ರಾಡಕ್ಟ್‌ಗಳ ಖರೀದಿ ಮೇಲೆ ನಿಮ್ಮ ಬ್ಯಾಂಕ್ ಖಾತೆಗೆ ಬೋನಸ್ ಬರುತ್ತದೆ ಎಂದು ಆಕೆ ಹೇಳಿದ್ದನ್ನು ನಂಬಿದ ಸುಕನ್ಯಾ, ಯುವತಿ ರವಾನಿಸಿದ ಲಿಂಕ್ ಅನ್ನು ಓಪನ್ ಮಾಡಿ ರಿಜಿಸ್ಟರ್ ಮಾಡಿಕೊಂಡು 212 ರೂ.ಗಳನ್ನು ವರ್ಗಾವಣೆ ಮಾಡಿದ್ದಾರೆ. ಆಗ ಅವರ ಖಾತೆಗೆ 30 ರೂ. ಬೋನಸ್ ಜಮಾವಣೆ ಆಗಿದೆ. ಇದನ್ನು ಕಂಡು ಹೆಚ್ಚು ಹಣ ವರ್ಗಾವಣೆ ಮಾಡಿದರೆ ಹೆಚ್ಚಿನ ಪ್ರಮಾಣದಲ್ಲಿ ಬೋನಸ್ ಬರುತ್ತದೆ ಎಂದು ನಂಬಿ ಯುವತಿ ಹೇಳಿದ ಖಾತೆಗಳಿಗೆ ಆನ್‌ಲೈನ್ ಮೂಲಕ ಒಟ್ಟು 2,08,186 ರೂ.ಗಳನ್ನು ವರ್ಗಾವಣೆ ಮಾಡಿದ್ದಾರೆ. ಆದರೆ ಅವರಿಗೆ ಬೋನಸ್ ಆಗಲೀ, ಅಥವಾ ತಾನು ವರ್ಗಾವಣೆ ಮಾಡಿದ ಹಣವಾಗಲೀ ಬಂದಿಲ್ಲ. ಈ ಸಂಬಂಧ ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಿರಿಯ ನಾಗರಿಕರಿಗೆ ರೈಲ್ವೆ ರಿಯಾಯಿತಿ ಮುಂದುವರೆಸಲು ಆಗ್ರಹಿಸಿ ಪ್ರತಿಭಟನೆ



ಮೈಸೂರು ರೈಲ್ವೆ ನಿಲ್ದಾಣದ ಮುಖ್ಯ ದ್ವಾರದ ಎದುರು ಹಿರಿಯ ನಾಗರಿಕರು ಬುಧವಾರ ಪ್ರತಿಭಟನೆ ನಡೆಸಿದರು.

ಮೈಸೂರು,ಜು.20(ಪಿಎಂ)– ರೈಲ್ವೆ ಪ್ರಯಾಣ ದರದಲ್ಲಿ ಹಿರಿಯ ನಾಗರಿಕರಿಗೆ ಈ ಹಿಂದೆ ಇದ್ದ ರಿಯಾಯಿತಿ ಸೌಲಭ್ಯ ಮುಂದುವರೆಸಲು ಆಗ್ರಹಿಸಿ ಹಿರಿಯ ನಾಗರಿಕರ ವೇದಿಕೆ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಬಾಬೂ ಜಗಜೀವನರಾಮ್ ವೃತ್ತದ (ರೈಲ್ವೆ ನಿಲ್ದಾಣ ವೃತ್ತ) ರೈಲ್ವೆ ನಿಲ್ದಾಣದ ಮುಖ್ಯ ದ್ವಾರದ ಎದುರು ಜಮಾಯಿಸಿದ ಪ್ರತಿಭಟನಾಕಾರರು, ದೇಶದಲ್ಲಿ ಕೋಟ್ಯಾಂತರ ಹಿರಿಯ ನಾಗರಿಕರು ತುರ್ತು ಅಗತ್ಯಗಳಿಗಾಗಿ ಕೈಗೊಳ್ಳುವ ಪ್ರಯಾಣಕ್ಕೆ ರೈಲ್ವೆ ಸೇವೆಯನ್ನೇ ಅವಲಂಬಿಸಿದ್ದಾರೆ. ಅಗ್ಗ ಮತ್ತು ಅನುಕೂಲಕರ ಸಾರಿಗೆ ಎಂಬ ಕಾರಣಕ್ಕೆ ಹಿರಿಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ರೈಲಿನಲ್ಲಿ ಪ್ರಯಾಣ ಮಾಡುತ್ತಾರೆ. ಆದರೆ ಈ ಹಿಂದಿದ್ದ ಪ್ರಯಾಣ ದರದ ರಿಯಾಯಿತಿ ರದ್ದುಪಡಿಸಿರುವುದು ಹಿರಿಯ ನಾಗರಿಕರಿಗೆ ಅನಾನುಕೂಲ ಉಂಟು ಮಾಡಿದೆ ಎಂದು ಕಿಡಿಕಾರಿದರು.

ರೈಲು ಪ್ರಯಾಣ ದರಗಳಿಗೆ ನೀಡುತ್ತಿದ್ದ ವಿನಾಯಿತಿಗಳು ಹಿರಿಯ ನಾಗಕರಿಗೆ ಅನುಕೂಲಕರವಾಗಿತ್ತು. ಆದರೆ 2020ರ ಮಾರ್ಚ್‌ನಲ್ಲಿ ಈ ಸೌಲಭ್ಯ ರದ್ದುಗೊಳಿಸಲಾಗಿದೆ. ಕೋವಿಡ್ ಕಾರಣಕ್ಕೆ ಸ್ಥಗಿತಗೊಳಿಸಲಾಗಿದ್ದ ರೈಲು ಸಂಚಾರ ಈಗಾಗಲೇ ಪುನರಾರಂಭಗೊಂಡಿದೆ. ಆದರೆ ಹಿರಿಯ ನಾಗರಿಕರಿಗೆ ಸಿಗುತ್ತಿದ್ದ ಯಾವುದೇ ರಿಯಾಯಿತಿ ಸೌಲಭ್ಯ ಈಗ ಇಲ್ಲದ ಕಾರಣ ಹಿರಿಯ ನಾಗರಿಕರಿಗೆ ರೈಲು ಪ್ರಯಾಣ ಕೈಗೆಟುಕದಂತೆ ಆಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬೆಲೆ ಏರಿಕೆ, ದುಬಾರಿಯಾದ ವೈದ್ಯಕೀಯ ಸೇವೆ ನಡುವೆ ಹಿರಿಯ ನಾಗರಿಕರು ಹೈರಾಣಾಗಿದ್ದೇವೆ. ಹಾಗಾಗಿ ಹಿರಿಯ ನಾಗರಿಕರಿಗೆ ನೀಡುತ್ತಿದ್ದ ರೈಲ್ವೆ ಪ್ರಯಾಣ ದರದಲ್ಲಿನ ರಿಯಾಯಿತಿಯನ್ನು ಪುನರಾರಂಭ ಮಾಡಬೇಕು. ಇದರಿಂದ ದೇಶದ ಕೋಟ್ಯಾಂತರ ಹಿರಿಯ ನಾಗರಿಕರಿಗೆ ಅನು ಕೂಲವಾಗಲಿದೆ ಎಂದು ಒತ್ತಾಯಿಸಿದರು. ವೇದಿಕೆ ಸಂಚಾಲಕ ಡಿ.ರಾಜೇಂದ್ರ, ಜನರಲ್ ಇನ್ಶೂರೆನ್ಸ್ ಪಿಂಚಣಿದಾರರ ಸಂಘದ ಪದಾಧಿಕಾರಿ ಉಮಾಪತಿ, ಬಿಎಸ್‌ಎನ್‌ಎಲ್ ಉದ್ಯೋಗಿಗಳ ಪಿಂಚಣಿದಾರರ ಸಂಘದ ಪದಾಧಿಕಾರಿ ರಾಮದಾಸ್ ಭಂಡಾರಿ ಮತ್ತಿತರ ಹಿರಿಯ ನಾಗರಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಜಿಎಸ್‌ಟಿ ರದ್ದುಗೊಳಿಸಲು ಆಗ್ರಹ

ಮೈಸೂರು, ಜು.20(ಆರ್‌ಕೆಬಿ)– ಜನಸಾಮಾನ್ಯರ ಜೀವನಕ್ಕೆ ಹೊರೆಯಾಗಿರುವ ಜಿಎಸ್‌ಟಿಯನ್ನು ಕೇಂದ್ರ ಸರ್ಕಾರ ರದ್ದುಗೊಳಿಸಬೇಕೆಂದು ಕರ್ನಾಟಕ ಮತದಾರರ ಜಾಗೃತಿ ವೇದಿಕೆ ಆಗ್ರಹಿಸಿದೆ. ಮೈಸೂರು ಪತ್ರಕರ್ತರ ಭವನದಲ್ಲಿ ವೇದಿಕೆ ಗೌರವಾಧ್ಯಕ್ಷ ಕೆ.ಟಿ.ಲಿಂಗರಾಜು ಮಾತನಾಡಿ, ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಜಿಎಸ್‌ಟಿಯು ಜನರ ಬದುಕಿಗೆ ಮಾರಕವಾಗಿದೆ. ಜನಸಾಮಾನ್ಯರು ನಿತ್ಯ ಬಳಸುವ ಅಕ್ಕಿ, ಗೋಧಿ, ಮೀನು, ಮಾಂಸ, ಮೊಸರು, ತುಪ್ಪ ಇನ್ನಿತರೆ ಅಗತ್ಯ ವಸ್ತುಗಳಿಗೆ ಶೇ.5 ರಷ್ಟು ಜಿಎಸ್‌ಟಿ ವಿಧಿಸುವುದು ಬಡವರು ಹಾಗೂ ಮಧ್ಯಮ ವರ್ಗದವರ ಜೀವನ ನಿರ್ವಹಣೆಗೆ ತುಂಬಾ ಹೊರೆಯಾಗಿದೆ ಎಂದು ದೂರಿದರು.

ಬಹುತೇಕ ಪದಾರ್ಥಗಳನ್ನು ಚೀಲ ಮತ್ತು ಪ್ಯಾಕೆಟ್‌ನಲ್ಲಿ ಮಾರಾಟ ಮಾಡುತ್ತಿರುವುದರಿಂದ ಎಲ್ಲ ವರ್ಗದ ಗ್ರಾಹಕರೂ ಜಿಎಸ್‌ಟಿಯನ್ನು ಭರಿಸಲೇಬೇಕಿದೆ. ಪ್ರತಿದಿನ ಕೂಲಿ ಮಾಡುವ ಜನರು ಬದುಕಿನ ನಿರ್ವಹಣೆಗೆ ಪರದಾಡುವಂತಾಗಿದೆ. ದುಡಿದ ಹಣದಲ್ಲಿ ದಿನಸಿ ಕೊಂಡು ಮನೆಯಲ್ಲಿ ಊಟ, ತಿಂಡಿ ಮಾಡಲೂ ಜಿಎಸ್‌ಟಿ ತೆರಬೇಕಾಗಿರುವುದು ದುರಂತದ ಸಂಗತಿ. ಜಿಎಸ್‌ಟಿ ತೆರಿಗೆ ಹೊರೆಯನ್ನು ರಾಜ್ಯಗಳ ಮೇಲೆ ಹೇರಿರುವುದು ದೇಶದ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಉಂಟು ಮಾಡಲಿದೆ ಎಂದು ಈಗಾಗಲೇ ಸುಪ್ರೀಂಕೋರ್ಟ್ ಆಕ್ಷೇಪಿಸಿದೆ. ಹಾಗಾಗಿ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಜಿಎಸ್‌ಟಿ ಪದ್ಧತಿಯನ್ನು ರಾಜ್ಯ ಸರ್ಕಾರ ಕೂಡಲೇ ಕೈಬಿಟ್ಟು, ಜನರ ಹಿತ ಕಾಯಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ವೇದಿಕೆ ಪ್ರಧಾನ ಕಾರ್ಯದರ್ಶಿ ಮಾ.ವೆಂಕಟೇಶ್, ಕಾನೂನು ಸಲಹೆಗಾರ ಎಂ.ಎನ್. ಚಂದ್ರಶೇಖರ್, ನಗರಾಧ್ಯಕ್ಷ ಮೊಹಮ್ಮದ್ ತಾಸೀಮ್ ಉಪಸ್ಥಿತರಿದ್ದರು.



ಮೈಸೂರು ರೇಸ್ ಕ್ಲಬ್‌ನಲ್ಲಿ ಬುಧವಾರ ನಡೆದ ರೇಸ್‌ನಲ್ಲಿ ವಿಜೇತ ಕುದುರೆ 'ಅಕ್ವಿಲಾ ಡಿ ಒರೋ' ತರಬೇತುದಾರ ವಿಶಾಲ್ ಯಾದವ್ ಅವರಿಗೆ 'ದಿ ಮಾಹಿ ಟ್ರೋಫಿ'ಯನ್ನು ಎಂಆರ್‌ಸಿ ಮ್ಯಾನೇಜಿಂಗ್ ಕಮಿಟಿ ಸದಸ್ಯ ಜಯರಾಜ್ ಅರಸ್ ಪ್ರದಾನ ಮಾಡಿದರು. ಈ ವೇಳೆ ಹೆಚ್.ಕೆ.ರಮೇಶ್, ಕೆ.ಎಂ.ಚಂದ್ರೇಗೌಡ, ವೈ.ಪಿ.ಉದಯಶಂಕರ್, ವೈ.ಬಿ. ಗಣೇಶ್ (ಛೇರ್ಮನ್), ಟಿ.ಡಿ.ಮಹೇಶ್, ಬಿ.ಯು.ಚೆಂಗಪ್ಪ, ಅಲ್.ರಂ.ನಾಗಪ್ಪನ್ ಇದ್ದರು.

ಕ್ಯಾಂಟೀನ್ ತೆರವಿಗೆ ಆಗ್ರಹಿಸಿ ಮಹಾರಾಣಿ ವಿದ್ಯಾರ್ಥಿನಿಯರ ಪ್ರತಿಭಟನೆ



ಮೈಸೂರು,ಜು.20(ಪಿಎಂ)– ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಆವರಣದಲ್ಲಿರುವ ಕಾಲೇಜಿನ ಕ್ಯಾಂಟೀನ್‌ನಲ್ಲಿ ಸ್ವಚ್ಛತೆ ಇಲ್ಲ ಹಾಗೂ ಗುಣಮಟ್ಟದ ಆಹಾರ ನೀಡುತ್ತಿಲ್ಲ. ಸದರಿ ಕ್ಯಾಂಟೀನ್ ತೆರವುಗೊಳಿಸುವಂತೆ ಆಗ್ರಹಿಸಿ ಕಾಲೇಜಿನ ವಿದ್ಯಾರ್ಥಿನಿಯರು ಬುಧವಾರ ದಿಢೀರ್ ಪ್ರತಿಭಟನೆ ನಡೆಸಿದರು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ವಿದ್ಯಾರ್ಥಿನಿಯರು, ನಮ್ಮ ಕಾಲೇಜು ಆವರಣದಲ್ಲಿರುವ ಕ್ಯಾಂಟೀನ್ ಅವ್ಯವಸ್ಥೆಯಿಂದ ಕೂಡಿದ್ದು, ಅನೈರ್ಮಲ್ಯವಿರುವ ಕಾರಣ ಇಲ್ಲಿನ ಆಹಾರ ಸೇವಿಸಿದ ವಿದ್ಯಾರ್ಥಿನಿಯರಲ್ಲಿ ಅನಾರೋಗ್ಯ ಸಮಸ್ಯೆ ಉಂಟಾಗಿದೆ. ಈ ಕ್ಯಾಂಟೀನ್ ನಮಗೆ ಅವಶ್ಯಕತೆ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದೇ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ವಿದ್ಯಾರ್ಥಿನಿಯರು, ಹೊರಗಿನಿಂದ ಕ್ಯಾಂಟೀನ್‌ಗೆ ಬರುವ ಯುವಕರು ಮತ್ತು ಕ್ಯಾಂಟೀನ್ ನೌಕರರು ಕಾಲೇಜು ವಿದ್ಯಾರ್ಥಿನಿಯರೊಂದಿಗೆ ಅಸಭ್ಯವಾಗಿ ವರ್ತಿಸುತ್ತಾರೆ. ಆಹಾರ ಪದಾರ್ಥಗಳ ಬೆಲೆಯೂ ಇಲ್ಲಿ ದುಬಾರಿ ಇದೆ. ಇಂತಹ ಕ್ಯಾಂಟೀನ್ ನಮಗೆ ಅಗತ್ಯವಿಲ್ಲ. ಒಂದು ವೇಳೆ ಕ್ಯಾಂಟೀನ್ ಮುಂದುವರೆಸಿದರೆ, ಈಗಿರುವ ಗುತ್ತಿಗೆ ರದ್ದುಪಡಿಸಿ, ಉತ್ತಮವಾಗಿ ನಿರ್ವಹಣೆ ಮಾಡುವವರಿಗೆ ಗುತ್ತಿಗೆ ನೀಡಲಿ ಎಂದು ತಿಳಿಸಿದರು. ಕಾಲೇಜಿನ ವಿದ್ಯಾರ್ಥಿನಿ ಮುಖಂಡರಾದ ಭೂಮಿಕಾ, ಅಂಬಿಕಾ, ಎಂ.ಪೂರ್ಣಿಕಾ, ಅನುಷಾ, ಮೇಘನಾ ಸೇರಿದಂತೆ ಇನ್ನಿತರ ವಿದ್ಯಾರ್ಥಿನಿಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಿಮ್ಸ್ ಆಸ್ಪತ್ರೆ 'ಡಿ' ಗ್ರೂಪ್ ನೌಕರ ಆತ್ಮಹತ್ಯೆ

ಕೆಆರ್‌ಎಸ್ ಪಕ್ಷದ ಇಬ್ಬರು ಕಾರ್ಯಕರ್ತರ ವಿರುದ್ಧ ದೂರು ದಾಖಲು

ಚಾಮರಾಜನಗರ, ಜು.20–ಕುಡಿದು ಕೆಲಸ ಮಾಡುತ್ತಿದ್ದಾನೆಂದು ಆರೋಪಿಸಿ, ಆ ಬಗ್ಗೆ ವಿಡಿಯೋವೊಂದನ್ನು ಫೇಸ್‌ಬುಕ್‌ನಲ್ಲಿ ಹಾಕಿ ಅಪಮಾನ ಮಾಡಿದ್ದಾರೆ ಎಂದು ಮನನೊಂದು ನಗರದ ಸಿಮ್ಸ್ ಆಸ್ಪತ್ರೆಯ 'ಡಿ' ಗ್ರೂಪ್ ನೌಕರರನೋರ್ವ ನೇಣು ಬಿಗಿದು ಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದಲ್ಲಿ ಬುಧವಾರ ನಡೆದಿದೆ.



ನಗರದ ಗಾಳಿಪುರ ಬಡಾವಣೆಯ ನಿವಾಸಿ ಮಹೇಶ್(32) ಆತ್ಮಹತ್ಯೆ ಮಾಡಿಕೊಂಡ ನೌಕರ. ಮೃತರ ಕುಟುಂಬಸ್ಥರ ದೂರಿನ ಮೇರೆಗೆ ಕೆಆರ್‌ಎಸ್ ಪಕ್ಷದ ಇಬ್ಬರು ಕಾರ್ಯಕರ್ತರ ವಿರುದ್ಧ ದೂರು ದಾಖಲಾಗಿದೆ. ಮಹೇಶ್ ಸಿಮ್ಸ್ ಬೋಧನಾ ಆಸ್ಪತ್ರೆಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ 'ಡಿ' ಗ್ರೂಪ್ ನೌಕರರನಾಗಿ ಕೆಲಸ ಮಾಡುತ್ತಿದ್ದರು. ಜು.15ರಂದು ಆಸ್ಪತ್ರೆಗೆ ಆಂಬುಲೆನ್ಸ್‌ನಲ್ಲಿ ಬಂದಿದ್ದ ರೋಗಿಯೊಬ್ಬರನ್ನು ಸ್ಟ್ರೆಚರ್‌ನಲ್ಲಿ ಮಹೇಶ್ ಕರೆದುಕೊಂಡು ಹೋಗುತ್ತಿದ್ದರು ಎನ್ನಲಾಗಿದೆ. ಈ ವೇಳೆ ಅಲ್ಲಿಗೆ ಆಗಮಿಸಿದ ಕೆಆರ್‌ಎಸ್ ಪಕ್ಷದ ಇಬ್ಬರು ಕಾರ್ಯಕರ್ತರು, ಮಹೇಶ್ ಅವರನ್ನು ಕುಡಿದು ಕೆಲಸ ಮಾಡುತ್ತಿರುವುದಾಗಿ ಆರೋಪಿಸಿ ಅಪಮಾನಿಸಿದ್ದಲ್ಲದೆ, ಈ ಬಗ್ಗೆ ಡಿಹೆಚ್‌ಓಗೆ ಹೇಳುವುದಾಗಿ ಹೆದರಿಸಿ ವಿಡಿಯೋ ಮಾಡಿದ್ದರು. ಅಲ್ಲದೆ ಆ ವಿಡಿಯೋವನ್ನು ಕೆಆರ್‌ಎಸ್ ಪಕ್ಷದ ಫೇಸ್‌ಬುಕ್‌ನಲ್ಲಿ ಪೇಜ್‌ನಲ್ಲೂ ಪ್ರಕಟಿಸಿದ್ದರು. ಇದರಿಂದ ಮನನೊಂದ ಮಹೇಶ್ ಮನೆಯ ಕೋಣೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತರ ಕುಟುಂಬಸ್ಥರು ನಗರದ ಪೊಲೀಸ್ ಠಾಣೆಯಲ್ಲಿ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ದೂರಿನ ಆಧಾರದ ಮೇಲೆ ಕೆಆರ್‌ಸ್ ಪಕ್ಷದ ಕಾರ್ಯಕರ್ತರಾದ ಶ್ರೀನಿವಾಸ ಶಾಸ್ತ್ರಿ ಹಾಗೂ ಗಣೇಶ್ ವಿರುದ್ಧ ಪ್ರಕಣ ದಾಖಲಿಸಿಕೊಂಡಿರುವ ಪೊಲೀಸ್‌ರು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹಾಸ್ಟೆಲ್ ಕಾರ್ಮಿಕರ ವೇತನ ಹೆಚ್ಚಳಕ್ಕೆ ಆಗ್ರಹಿಸಿ ಜು.29ರಂದು ಬೆಂಗಳೂರಲ್ಲಿ ಪ್ರತಿಭಟನೆ

ಮೈಸೂರು, ಜು.20(ಆರ್‌ಕೆಬಿ)– ವಸತಿ ನಿಲಯ, ವಸತಿ ಶಾಲಾ, ಕಾಲೇಜು, ಆಶ್ರಮ ಶಾಲೆಗಳಲ್ಲಿ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಡಿ ಗ್ರೂಪ್ ಕಾರ್ಮಿಕರಾದ ಅಡುಗೆಯವರು, ಅಡುಗೆ ಸಹಾಯಕರು, ಕಾವಲುಗಾರರನ್ನು ಖಾಯಂಗೊಳಿಸುವುದು ಸೇರಿದಂತೆ ಇತರೆ ಶಾಸನ ಬದ್ಧ ಸೌಕರ್ಯಗಳ ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕೆಂದು ಆಗ್ರಹಿಸಿ ಜು.29 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯದ ಎಲ್ಲಾ ಹಾಸ್ಟೆಲ್ ಕಾರ್ಮಿಕರು ರಾಜ್ಯಮಟ್ಟದ ಪ್ರತಿಭಟನಾ ಧರಣಿ ನಡೆಸಲಿದ್ದಾರೆ ಎಂದು ಕರ್ನಾಟಕ ರಾಜ್ಯ ಸಂಯುಕ್ತ ವಸತಿ ನಿಲಯ ಕಾರ್ಮಿಕರ ಸಂಘ ತಿಳಿಸಿದೆ.

ವಸತಿ ನಿಲಯ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಕೆ.ಸೋಮಶೇಖರ್, ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಇಲಾಖೆ, ವಿವಿಗಳು ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಗಳಿಂದ ರಾಜ್ಯಾದ್ಯಂತ ವಿವಿಧ ವಸತಿ ನಿಲಯಗಳು, ವಸತಿ ಶಾಲೆ, ವಸತಿ ಕಾಲೇಜು ಮತ್ತು ಆಶ್ರಮ ಶಾಲೆಗಳನ್ನು ನಡೆಸಲಾಗುತ್ತಿದೆ. ಇವುಗಳಲ್ಲಿ ವಿವಿಧ ವಯೋಮಾನದ ಲಕ್ಷಾಂತರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮಕ್ಕಳಿಗೆ ಊಟ, ವಸತಿ, ಸುರಕ್ಷತೆ ಮುಂತಾದ ಸೇವೆ ಒದಗಿಸಲು ಅಡುಗೆಯವರು, ಅಡುಗೆ ಸಹಾಯಕರು, ಕಾವಲುಗಾರರ 'ಡಿ' ಗ್ರೂಪ್ ಹುದ್ದೆಗಳಲ್ಲಿ ಸುಮಾರು 35,000 ಮಂದಿ ಹೊರಗುತ್ತಿಗೆ ಆಧಾರದಲ್ಲಿ ಹಲವಾರು ವರ್ಷಗಳಿಂದ ಅತ್ಯಂತ ಕಡಿಮೆ ವೇತನಕ್ಕೆ (ಅಂದರೆ ಕೇವಲ 10,000 ರೂ.) ಸೇವೆ ಸಲ್ಲಿಸುತ್ತಿದ್ದಾರೆ. ಇವರಲ್ಲಿ ಬಹಳಷ್ಟು ಮಂದಿ ಮಹಿಳೆಯರೇ ಇದ್ದಾರೆ. ಈ ಕಾರ್ಮಿಕರಿಗೆ ಇನ್ನೂ ಹಲವಾರು ಸೌಕರ್ಯಗಳು ಮರೀಚಿಕೆಯಾಗಿದೆ ಎಂದು ದೂರಿದರು.

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ 'ಡಿ' ಗ್ರೂಪ್ ಹುದ್ದೆ ಖಾಯಂ ನೌಕರರಿಗೆ ಕೊಡುವಷ್ಟು ವೇತನ ಸಹಿತ ಇತರೆ ಸೌಲಭ್ಯಗಳಾವುದನ್ನೂ ಈ ಹೊರಗುತ್ತಿಗೆ ಕಾರ್ಮಿಕರಿಗೆ ಕೊಡುತ್ತಿಲ್ಲ. ಇವರಿಗೆ ಕಾನೂನು ಬದ್ಧವಾದ ವಾರದ ರಜೆ, ರಾಷ್ಟ್ರೀಯ ಹಬ್ಬಗಳ ರಜೆಯನ್ನೂ ನೀಡುತ್ತಿಲ್ಲ. ಪಿಎಫ್, ಇಎಸ್‌ಐ ವಂತಿಗೆಯ ಸಂಪೂರ್ಣ ಹಣ ಕಾರ್ಮಿಕರ ಖಾತೆಗಳಿಗೆ ಪಾವತಿಸುತ್ತಿಲ್ಲ. ಕೆಲವು ಕಡೆ ನಿಗದಿ ಪಡಿಸಿದಷ್ಟು ವೇತನಗಳು ಸಿಗುತ್ತಿಲ್ಲ. ದಿನಕ್ಕೆ 8 ಗಂಟೆಗಿಂತ ಹೆಚ್ಚಿನ ಅವಧಿಯ ಕೆಲಸ ಮಾಡಿಸಿಕೊಂಡರೂ ಅದನ್ನು ಓಟಿ ಎಂದು ಪರಿಗಣಿಸಿ ಹೆಚ್ಚುವರಿ ವೇತನ ನೀಡುತ್ತಿಲ್ಲ. ವೇತನ ಪಾವತಿ ಚೀಟಿ ನೀಡುತ್ತಿಲ್ಲ. ಪ್ರತಿ ತಿಂಗಳು ನಿಗದಿತ ದಿನದಲ್ಲಿ ವೇತನ ಪಾವತಿ ಆಗುತ್ತಿಲ್ಲ. ಈಗಲೂ ರಾಜ್ಯದ ಹಲವು ಜಿಲ್ಲೆ, ತಾಲೂಕುಗಳಲ್ಲಿ ಆರರಿಂದ ಎಂಟು ತಿಂಗಳ ವೇತನ ನೀಡಿಲ್ಲ. ಈ ಬಡಪಾಯಿ ಹೊರಗುತ್ತಿಗೆ ಕಾರ್ಮಿಕರು ಎದುರಿಸುತ್ತಿರುವ ಹತ್ತು ಹಲವು ಸಮಸ್ಯೆಗಳಿಗೆ ಪರಿಹಾರ ದೊರಕಬೇಕಿದೆ ಎಂದು ಆಗ್ರಹಿಸಿದರು.

ವಸತಿ ನಿಲಯಗಳ ಹೊರಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಮಾಸಿಕ 35,950 ರೂ.ಗೆ ಹೆಚ್ಚಿಸಬೇಕು. ಬೆಲೆ ಏರಿಕೆ ಮತ್ತು ಹಣದುಬ್ಬರವನ್ನು ಪರಿಗಣಿಸಿ ವೈಜ್ಞಾನಿಕವಾಗಿ ತುಟ್ಟಿಭತ್ಯೆಯನ್ನು ನಿಗದಿಪಡಿಸಬೇಕು. ಮಾಸಿಕ ವೇತನ, ಪಿಎಫ್ ಮತ್ತು ಇಎಸ್‌ಐ ವಂತಿಗೆಯನ್ನು ಪ್ರತಿ ತಿಂಗಳು ಗುತ್ತಿಗೆ ಏಜೆನ್ಸಿಗಳು ಪಾವತಿಸುವ ಕುರಿತು ಆಯಾ ಜಿಲ್ಲೆ, ತಾಲೂಕು ಅಧಿಕಾರಿಗಳನ್ನು ಹೊಣೆ ಮಾಡಬೇಕು. ಪಾವತಿಸದ ಗುತ್ತಿಗೆ ಏಜೆನ್ಸಿಗಳ ಮೇಲೆ ಶಿಸ್ತು ಕ್ರಮ ಜರುಗಿಸಬೇಕು. ವಸತಿ ಶಾಲೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಅವರ ಕುಟುಂಬದೊಂದಿಗೆ ವಸತಿ ಶಾಲೆಯಲ್ಲಿ ಉಳಿದುಕೊಳ್ಳಲು ವಸತಿ ಸೌಲಭ್ಯ ನೀಡಬೇಕು ಎಂಬ ಬೇಡಿಕೆಯನ್ನು ಈಡೇರಿಸಲು ಆಗ್ರಹಿಸಿ ರಾಜ್ಯ ಮಟ್ಟದ ಪ್ರತಿಭಟನಾ ಧರಣಿ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಎಐಟಿಯುಸಿಯ ಚಂದ್ರಶೇಖರ ಮೇಟಿ, ಜಿಲ್ಲಾ ಕಾರ್ಮಿಕ ಸಂಘದ ಮುದ್ದುಕೃಷ್ಣ, ಹರೀಶ್, ರಾಜೇಶ್ ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಸಿಎಂ ಬೊಮ್ಮಾಯಿ ಬಾಗಿನ ಸಮರ್ಪಣೆ

ಪೂಜೆ ಸಲ್ಲಿಸಿದರು. ಈ ವೇಳೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ರಾಜ್ಯ ಮತ್ತು ಜನರ ಯೋಗಕ್ಷೇಮಕ್ಕಾಗಿ ಪ್ರಾರ್ಥಿಸಿ, ಸಾಂಪ್ರದಾಯಿಕವಾಗಿ ಸೀರೆ, ಕುಪ್ಪಸ, ಹೂವು, ಹಣ್ಣು, ಬಳೆ, ಅರಶಿನ–ಕುಂಕುಮ ಮತ್ತು ಅಕ್ಕಿಯನ್ನು ಒಳಗೊಂಡಿದ್ದ ಬಾಗಿನವನ್ನು ಎರಡೂ ಜಲಾಶಯಗಳಿಗೆ ಸಮರ್ಪಿಸಿದರು.

ಈ ಸಂದರ್ಭದಲ್ಲಿ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಸಹಕಾರ ಸಚಿವ ಎಸ್.ಟಿ ಸೋಮಶೇಖರ್, ರೇಷ್ಮೆ, ಯುವಜನ ಸಬಲೀಕರಣ ಕ್ರೀಡಾ ಸಚಿವ ಡಾ.ಕೆ.ಸಿ.ನಾರಾಯಣ ಗೌಡ, ಶಾಸಕರಾದ ಅನಿಲ್ ಚಿಕ್ಕಮಾದು, ಹರ್ಷವರ್ದನ, ಎಂ.ಶ್ರೀನಿವಾಸ್, ಡಿ.ಸಿ.ತಮ್ಮಣ್ಣ, ಸಿ.ಎಸ್.ಪುಟ್ಟರಾಜು, ಕೆ.ಅನ್ನದಾನಿ, ರವೀಂದ್ರ ಶ್ರೀಕಂಠಯ್ಯ, ಎಲ್.ನಾಗೇಂದ್ರ, ವಿಧಾನಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಮೈಸೂರಿನ ಹಂಗಾಮಿ ಮೇಯರ್ ಸುನಂದ ಪಾಲನೇತ್ರ, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಕಾ.ಪು ಸಿದ್ದಲಿಂಗಸ್ವಾಮಿ, ವಸತಿವಿಹಾರ ಧಾಮಗಳ ಮಾಜಿ ಅಧ್ಯಕ್ಷ ಎಂ.ಅಪ್ಪಣ್ಣ, ಕರ್ನಾಟಕ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ, ಕೃಷ್ಣರಾಜಸಾಗರ ಗ್ರಾಪಂ ಅಧ್ಯಕ್ಷ ಕೆ.ನರಸಿಂಹ, ಮೈಸೂರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಮಂಡ್ಯ ಜಿಲ್ಲಾಧಿಕಾರಿ ಎಸ್.ಅಶ್ವತಿ ಇನ್ನಿತರರು ಉಪಸ್ಥಿತರಿದ್ದರು. ಸಾಮಾನ್ಯವಾಗಿ ಜುಲೈ ಅಂತ್ಯದಲ್ಲಿ ತುಂಬುತ್ತಿದ್ದ ಕಬಿನಿ ಜಲಾಶಯ, ಈ ಬಾರಿ ಬೇಗ ಭರ್ತಿಯಾಗಿದೆ. ಅದೇ ರೀತಿ ಕೆಆರ್‌ಎಸ್ ಜಲಾಶಯವೂ ಬೇಗನೇ ಭರ್ತಿಯಾಗಿದೆ. ಈ ಜಲಾಶಯಗಳ ಕಪಿಲ, ಕಾವೇರಿ ನದಿಗಳು ತಿ.ನರಸೀಪುರದಲ್ಲಿ ಸಂಗಮಗೊಂಡು ಮುಂದೆ ಹರಿಯಲಿವೆ.

ಅಂತಿಮ ತೀರ್ಪು ಸಾಧ್ಯತೆ: ಸಿಎಂ

ನೆನಪಿನಲ್ಲಿಡುತ್ತಾರೆ ಎಂದರು. **ವಿಶ್ವೇಶ್ವರಯ್ಯ ನಾಲೆಯ ನೀರು ರೈತರಿಗೆ ಒದಗಿಸಲಾಗುವುದು:** ವಿಶ್ವೇಶ್ವರಯ್ಯ ನಾಲೆಯ ಅಭಿವೃದ್ಧಿಗೆ 560 ಕೋಟಿ ರೂ. ಒದಗಿಸಿ ಬ್ರಾಂಚ್ ನಾಲೆಗಳನ್ನು ನಿರ್ಮಿಸಲಾಗಿದೆ. ಮದ್ದೂರು ಶಾಖಾ ನಾಲಾ, ಸಾಹುಕಾರ್ ಚೆನ್ನಯ್ಯ ನಾಲೆ ಸೇರಿದಂತೆ ಉಳಿದ ಬ್ರ್ಯಾಂಚ್ ನಾಲೆಗಳಿಗೆ ನೀರು ಪೂರೈಸಲು ಸಾಧ್ಯವಾಗಿದೆ. ಈ ವರ್ಷದ ಯೋಜನೆಯಲ್ಲಿ ವಿಶ್ವೇಶ್ವರಯ್ಯ ನಾಲೆಯ ನೀರು ರೈತರಿಗೆ ಒದಗಿಸುವ ಕೆಲಸ ಕೈಗೊಳ್ಳಲಾಗುವುದು. ವಿಶ್ವೇಶ್ವರಯ್ಯ ನಾಲೆಯ ಅಂತಿಮ ಹಂತದ ಸಬ್ ಡಿಸ್ಟ್ರಿಬ್ಯೂಟರಿ ಲ್ಯಾಟರ್‌ಗಳನ್ನು ಪೂರ್ಣಗೊಳಿಸುವುದು, ಕಬಿನಿ ಹಾಗೂ ಹಾರಂಗಿ ಬ್ರ್ಯಾಂಚ್ ನಾಲೆಗಳ 300 ಕಿ.ಮೀ. ಗಳಷ್ಟು ಆಧುನೀಕರಣ ಕಾಮಗಾರಿಯನ್ನು ಈ ವರ್ಷವೇ ಕೈಗೆತ್ತಿಕೊಳ್ಳಲಾಗುವುದು. 480 ಕೋಟಿ ರೂ.ಗಳನ್ನು ಆಧುನೀಕರಣಕ್ಕಾಗಿ ಮೀಸಲಿರಿಸಿದೆ ಎಂದರು.

ಕಾವೇರಿ–ಸಂಸ್ಕೃತಿಯನ್ನು ಹುಟ್ಟುಹಾಕಿದ ಜೀವನದಿ: ಕಾವೇರಿ ಜಲಾನಯನ ಪ್ರದೇಶದ ನಾಲ್ಕು ಜಲಾಶಯಗಳು ತುಂಬಿರುವ ಅಪರೂಪದ ವರ್ಷ ಇದಾಗಿದೆ. ನಾಡಿನಾದ್ಯಂತ ಉತ್ತಮ ಮಳೆಯಾಗಿದೆ. ಕಾವೇರಿ ತಾಯಿ ರಾಜ್ಯದ ಜೀವನದಿ. ಮನುಷ್ಯನ ಬೇಕು ಬೇಡಗಳನ್ನು ಪೂರೈಸುವ ಜೊತೆಗೆ ಒಂದು ಸಂಸ್ಕೃತಿಯನ್ನು ಹುಟ್ಟು ಹಾಕುತ್ತದೆ. ಇಂತಹ ಪವಿತ್ರವಾದ ಕಾವೇರಿ ನದಿಯ ಸದುಪಯೋಗ ಮಾಡಿಕೊಳ್ಳಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯ. ಮೈಸೂರಿನ ಮಹಾರಾಜರು ಕನ್ನಂಬಾಡಿ ಕಟ್ಟೆಯನ್ನು ಕಟ್ಟುವಲ್ಲಿನ ಅವರ ಶ್ರಮ, ತ್ಯಾಗ ಎಂದಿಗೂ ಮರೆಯಲಾಗದು ಎಂದ ಅವರು, ಇದೇ ವೇಳೆ ಸರ್.ಎಂ.ವಿಶ್ವೇಶ್ವರಯ್ಯ ಅವರನ್ನು ಸ್ಮರಿಸಿದರು.

ಕೆಆರ್‌ಎಸ್‌ನ 61 ಕ್ರೆಸ್ಟ್ ಗೇಟ್‌ಗಳ ಬದಲಾವಣೆಗೆ ಕ್ರಮ: ಕೆಆರ್‌ಎಸ್ ಜಲಾಶಯವನ್ನು ಉತ್ತಮವಾಗಿ ನಿರ್ವಹಿಸಬೇಕಾಗಿದೆ. 2008 ರಲ್ಲಿ ನೀರಾವರಿ ಸಚಿವನಾಗಿದ್ದಾಗ ಕೆಆರ್‌ಎಸ್ ಕ್ರೆಸ್ಟ್ ಗೇಟ್‌ನಿಂದ ನೀರು ವ್ಯರ್ಥವಾಗಿ ಪೋಲಾಗುತ್ತಿರುವುದನ್ನು ತಡೆಗಟ್ಟಲು ಗೇಟ್‌ಗಳನ್ನು ಬದಲಿಸಲಾಯಿತು. ಜಲಾಶಯದ ಒಟ್ಟು 136 ಗೇಟ್‌ಗಳಲ್ಲಿ ಉಳಿದ 61 ಗೇಟ್‌ಗಳನ್ನು ಒಂದು ವರ್ಷದೊಳಗೆ ಬದಲಿಸಿ, ಪುನಃ ನಿರ್ಮಿಸಲು ಈಗಾಗಲೇ ಆದೇಶ ನೀಡಲಾಗಿದ್ದು, 160 ಕೋಟಿ ರೂ.ಗಳಿಗೂ ಹೆಚ್ಚು ವೆಚ್ಚದಲ್ಲಿ ಕ್ರೆಸ್ಟ್ ಗೇಟ್‌ಗಳ ಬದಲಾವಣೆಯ ಕಾಮಗಾರಿ ಸಂಪೂರ್ಣ ಮುಗಿದ ನಂತರ ಕೆಆರ್‌ಎಸ್ ಜಲಾಶಯದ ವಿಜೃಂಭಣೆಯ ಆಚರಣೆಯನ್ನು ಮಾಡಲಾಗುವುದು. ಸರ್ಕಾರ ದೂರದೃಷ್ಟಿಯಿಂದ ಕೆಲಸ ಮಾಡುತ್ತಿದೆ. ಹಿಂದಿನಿಂದಲೂ ಮಹಾರಾಜ ಅಣೆಕಟ್ಟುಗಳು ಹಾಗೂ ನಾಲೆಗಳಿದ್ದವು. ನೆಲಸಮವಾಗಿದ್ದ ನಾಲೆಗಳ ಸಂಪೂರ್ಣ ಆಧುನೀಕರಣ ಕೆಲಸ ಮಾಡಲಾಗಿತ್ತು. ಈ ಅಣೆಕಟ್ಟುಗಳಿಂದ 94 ಸಾವಿರ ಎಕರೆ ನೀರಾವರಿ ಸೌಲಭ್ಯ ಒದಗಿಸಲಾಗಿತ್ತು ಎಂದು ಮುಖ್ಯಮಂತ್ರಿ ಹೇಳಿದರು.

ಕೆಆರ್‌ಎಸ್ ಉದ್ಯಾನವನ ಆಧುನೀಕರಣ: ನೀರಿನ ಸದ್ಬಳಕೆ ಮಾಡಲು ಸೂಕ್ಷ್ಮ ನೀರಾವರಿಯನ್ನು ಪ್ರಾರಂಭಿಸಲಾಗಿದೆ. ಪುರಿಗಾಲಿ ಏತನೀರಾವರಿ ಯೋಜನೆ ಕೈಗೆತ್ತಿಕೊಳ್ಳಲು ಮರು ಅಂದಾಜು ಮಾಡಿ ಕಾಮಗಾರಿ ಪ್ರಾರಂಭಿಸಲಾಗುವುದು. ಮೊರೆಕೊಪ್ಪಲಿನ ಕೃಷಿ ಭೂಮಿಯನ್ನು ಕೆಆರ್‌ಡಿಬಿ ತೆಗೆದುಕೊಳ್ಳಬಾರದೆಂಬ ಬೇಡಿಕೆಯನ್ನು ಪರಿಶೀಲಿಸಿ ಸೂಕ್ತ ನಿರ್ಧಾರವನ್ನು ಕೈಗೊಳ್ಳಲಾಗುವುದು. ವಿಶ್ವವಿಖ್ಯಾತ ಕೆಆರ್‌ಎಸ್‌ನ ಉದ್ಯಾನವನದ ಆಧುನೀಕರಣ ಯೋಜನೆಗೆ ಅನುದಾನ ನೀಡಲಾಗುವುದು ಎಂದರು.

ಸುಂದರ ಉದ್ಯಾನವನ ನಿರ್ಮಾಣ

ಅಭಿವೃದ್ಧಿಗೆ ತಾವು ನೀರಾವರಿ ಸಚಿವರಾಗಿದ್ದಾಗ ಹಲವಾರು ಕ್ರಮಗಳನ್ನು ಕೈಗೊಂಡಿದ್ದೆ. ಕೆಆರ್‌ಎಸ್ ಜಲಾಶಯದಲ್ಲಿ ಸಾಕಷ್ಟು ಕಾಲುವೆಯನ್ನು ಈಗಾಗಲೇ ದುರಸ್ಥಿ ಮಾಡಿದ್ದೇವೆ. ಇನ್ನೂ ಅವಶ್ಯಕತೆ ಇದ್ದರೆ ದುರಸ್ಥಿಗೆ ಕ್ರಮ ಕೈಗೊಳ್ಳಲಾಗುವುದು. ಕಟ್ಟಕಡೆಯ ರೈತನಿಗೂ ಯಾವುದೇ ಸಮಸ್ಯೆ ಇಲ್ಲದಂತೆ ನೀರು ಹರಿಸುವುದು ಸರ್ಕಾರದ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು. ಕಬಿನಿ ಎಡದಂತೆ ಕಾಲುವೆಯಲ್ಲಿ ಸಮಸ್ಯೆ ಇರುವುದಾಗಿ ಗೊತ್ತಿದೆ. ನಾನಿದ್ದಾಗಲೇ 130 ಕಿ.ಮೀ.ನಷ್ಟು ದುರಸ್ಥಿ ಕಾರ್ಯ ಮಾಡಿದ್ದೇನೆ. ಉಳಿದ ಕಾಮಗಾರಿ ಶೀಘ್ರ ಕೈಗೆತ್ತಿಕೊಳ್ಳಲಾಗುವುದು ಎಂದರು. ಹೆಚ್.ಡಿ.ಕೋಟೆ ಹಿಂದುಳಿದ ಹೆಚ್.ಡಿ.ಕೋಟೆ ತಾಲೂಕು. ನಂಜುಂಡಪ್ಪ ವರದಿಯಲ್ಲೂ ಹಿಂದುಳಿದ ತಾಲೂಕಾಗಿದ್ದು, ಇದರ ಸಮಗ್ರ ಅಭಿವೃದ್ಧಿಗೆ ವಿಶೇಷ ಕಾರ್ಯಕ್ರಮಗಳನ್ನು ಈಗಾಗಲೇ ರೂಪಿಸಿದ್ದೇವೆ. ತಾಲೂಕನ್ನು ಅತೀ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಪಡಿಸುತ್ತೇವೆ. ಅತೀ ಹೆಚ್ಚು ಶಾಲಾ ಕಟ್ಟಡಗಳ ನಿರ್ಮಾಣವನ್ನು ಈ ವರ್ಷ ಕೈಗೊಳ್ಳುತ್ತೇವೆ ಎಂದು ಹೇಳಿದರು. ಒಟ್ಟಾರೆಯಾಗಿ ಹೆಚ್.ಡಿ.ಕೋಟೆ ತಾಲೂಕಿನ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದ್ದು, ಈಗಾಗಲೇ ಇಲ್ಲಿನ ಶಾಸಕರಿಗೆ ಸಾಕಷ್ಟು ಅನುದಾನ ನೀಡಿದ್ದೇವೆ. ಅದೇ ರೀತಿ ರಸ್ತೆ ಮತ್ತು ಮಳೆಯಿಂದ ಬಿದ್ದಿರುವ ಮನೆಗಳಿಗೆ ಸಂಬಂಧಿಸಿದಂತೆ ಶೀಘ್ರ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗೆ ಸೂಚಿಸುವುದಾಗಿ ತಿಳಿಸಿದರು.

ಬಾರ್ ಸಪ್ಲೆಯರ್ ಹತ್ಯೆ

ಆಗಮಿಸಿದ ಸುಧಾಕರ್ ಹಠಾತ್ತನೆ ಸಪ್ಲೆಯರ್ ನಂದನ್‌ಕುಮಾರ್ ಎದೆಗೆ ಚಾಕುವಿನಿಂದ ಚುಚ್ಚಿದ್ದಾನೆ. ಅದನ್ನು ತಡೆಯಲು ನಂದನ್‌ಕುಮಾರ್ ಕೈ ಮೇಲೆತ್ತಿದಾಗ ಕೈಗೂ ಕೂಡ ಇರಿದು ಪರಾರಿಯಾಗಿದ್ದಾನೆ. ತಕ್ಷಣವೇ ಬಾರ್‌ನಲ್ಲಿದ್ದವರು ನಂದನ್ ಕುಮಾರ್‌ನನ್ನು ಖಾಸಗಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಆತ ಅಸುನೀಗಿದ್ದಾನೆ. ಈ ಸಂಬಂಧ ವಿದ್ಯಾರಣ್ಯಪುರಂ ಠಾಣೆ ಇನ್ಸ್‌ಸ್ಪೆಕ್ಟರ್ ರಾಜು ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡು ಪರಾರಿಯಾಗಿರುವ ಸುಧಾಕರ್ ಪತ್ತೆಗಾಗಿ ಹುಡುಕಾಟ ನಡೆಸಿದ್ದಾರೆ.

ಮೀಸಲಾತಿ ವರದಿ ಸಲ್ಲಿಕೆ

ಪಿಂಗಡಣೆ ಮತ್ತು ಹಿಂದುಳಿದ ವರ್ಗಗಳ ಮೀಸಲಾತಿ ಆಯೋಗ ವರದಿ ಯನ್ನು ಜು.22ರಂದು ಸುಪ್ರೀಂಕೋರ್ಟ್‌ಗೆ ಸಲ್ಲಿಸಲಾ ಗುವುದು. ಬಳಿಕ ಸುಪ್ರೀಂಕೋರ್ಟ್ ನಿರ್ದೇಶನಕ್ಕೆ ಅನು ಗುಣವಾಗಿ ಚುನಾವಣಾ ಪ್ರಕ್ರಿಯೆ ನಡೆಯಲಿದೆ ಎಂದು ತಿಳಿಸಿದರು. ಮೈಸೂರು ಮೇಯರ್ ಚುನಾವಣೆ ಸಂಬಂಧ ಪ್ರತಿಕ್ರಿಯಿಸಿ, ಅದಕ್ಕೂ ಮೀಸಲಾತಿ ವರದಿ ಬಂದ ಕೂಡಲೇ ಕ್ರಮ ವಹಿಸಲಾಗುವುದು ಎಂದು ಹೇಳಿದರು.

ರಾಜ್ಯಕ್ಕೆ 8,800 ಕೋಟಿ ಜಿಎಸ್‌ಟಿ ಪರಿಹಾರ: ರಾಜ್ಯಕ್ಕೆ ಜಿಎಸ್‌ಟಿ ಪರಿಹಾರ ಸಂಬಂಧ ಪ್ರತಿಕ್ರಿಯೆ ನೀಡಿದ ಮುಖ್ಯ ಮಂತ್ರಿಯವರು, ಜಿಎಸ್‌ಟಿ ಸಂವಿಧಾನಾತ್ಮಕವಾದದ್ದು. ಇದು ಸಂಸತ್‌ನಲ್ಲಿ ಅನುಮೋದನೆಗೊಂಡಿರುವ ಕಾಯ್ದೆಯಾಗಿದೆ. ಕಾಯ್ದೆ ಜಾರಿ ವೇಳೆಯೇ ಐದು ವರ್ಷ ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರ ನೀಡಲಾಗುವುದು ಎಂದು ನಿರ್ಧಾರ ಕೈಗೊಳ್ಳಲಾಗಿತ್ತು. ಈ ನಡುವೆ ಕೋವಿಡ್ ಸಂದರ್ಭದಲ್ಲಿ ನಮಗೆ ಯಾವುದೇ ರೀತಿಯ ತೆರಿಗೆ ಸಂಗ್ರಹ ಸಾಧ್ಯವಾಗಿರಲಿಲ್ಲ. ಅದಾಗ್ಯೂ ಕೇಂದ್ರ ಸರ್ಕಾರ ಜಿಎಸ್‌ಟಿ ಪರಿಹಾರ ನೀಡಿದೆ. ಮೊನ್ನೆಯಷ್ಟೇ 8,800 ಕೋಟಿ ರೂ. ಜಿಎಸ್‌ಟಿ ಪರಿಹಾರ ರಾಜ್ಯಕ್ಕೆ ಬಂದಿದೆ. ಬಾಕಿ ಉಳಿದಿರುವುದನ್ನು ಕೇಂದ್ರ ನೀಡಲಿದ್ದು, ಇದರಲ್ಲಿ ಯಾವುದೇ ತೊಡಕು ಇಲ್ಲ ಎಂದು ಹೇಳಿದರು. ಇಂದು ಚಾಮುಂಡೇಶ್ವರಿ ದೇವಿಯ ವರ್ಧಂತಿ ಮಹೋತ್ಸವದಲ್ಲಿ ಪಾಲ್ಗೊಂಡು ತಾಯಿ ಚಾಮುಂಡೇಶ್ವರಿ ಆಶೀರ್ವಾದ ಪಡೆದು, ಕಬಿನಿ ಮತ್ತು ಕೆಆರ್‌ಎಸ್ ಜಲಾಶಯಕ್ಕೆ ಬಾಗಿನ ಅರ್ಪಣೆ ಮಾಡಲಿದ್ದೇನೆ. ಆಷಾಢ ಮಾಸದಲ್ಲಿ ಎರಡೂ ಜಲಾಶಯಗಳು ಭರ್ತಿಯಾಗಿರುವುದು ಅಪರೂಪ. ಉತ್ತಮ ಮಳೆಯಾಗಿದ್ದು, ರೈತರ ಕೃಷಿ ಚಟುವಟಿಕೆಗಳು ಚುರುಕುಗೊಂಡಿದೆ. ಆ ಮೂಲಕ ಕೃಷಿಗೆ ಅನುಕೂಲಕರ ವಾತಾವರಣ ಸೃಷ್ಟಿಯಾಗಿರುವುದು ಹರ್ಷ ತಂದಿದೆ ಎಂದು ಸಂತಸ ವ್ಯಕ್ತಪಡಿಸಿದರು. ಸಿಎಂ ಬಸವರಾಜ ಬೊಮ್ಮಾಯಿ ಅವರೊಂದಿಗೆ ಹೆಲಿಕಾಪ್ಟರ್‌ನಲ್ಲಿ ಅವರ ಪತ್ನಿ ಚೆನ್ನಮ್ಮ, ಸಚಿವರಾದ ಗೋವಿಂದ ಕಾರಜೋಳ, ಎಸ್.ಟಿ.ಸೋಮಶೇಖರ್ ಸಹ ಆಗಮಿಸಿದರು. ಮುಖ್ಯಮಂತ್ರಿಗಳು ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುತ್ತಿದ್ದಂತೆ ಸ್ಥಳೀಯ ಬಿಜೆಪಿ ಮುಖಂಡರು ಅವರಿಗೆ ಹೂಗುಚ್ಛ ನೀಡಿ ಆತ್ಮೀಯ ಸ್ವಾಗತ ಕೋರಿದರು. ಬಳಿಕ ಮುಖ್ಯಮಂತ್ರಿಗಳು ರಸ್ತೆ ಮೂಲಕ ಚಾಮುಂಡಿಬೆಟ್ಟಕ್ಕೆ ತೆರಳಿದರು. ಶಾಸಕ ಎಲ್.ನಾಗೇಂದ್ರ ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್ ಮತ್ತಿತರರು ಹಾಜರಿದ್ದರು.

ಕೆಲಸ ಮಾಡಲಾಗದ ಸ್ಥಿತಿಯಲ್ಲಿದ್ದಾರೆ!

ಪಾಪ ಡಿ.ಕೆ.ಶಿವಕುಮಾರ್ ಸಿಎಂ ಆಗಬೇಕೆಂದು ಬಹಳ ವರ್ಷಗಳಿಂದ ಕನಸು ಕಂಡಿದ್ದಾರೆ. ಕೆಪಿಸಿಸಿ ಅಧ್ಯಕ್ಷರಾಗಿಯೇ ಅವರು ಕೆಲಸ ಮಾಡಲು ಕಾಂಗ್ರೆಸ್‌ನವರೇ ಬಿಡುತ್ತಿಲ್ಲ. ಅಂತಹ ಪರಿಸ್ಥಿತಿಯನ್ನು ದಿನನಿತ್ಯ ನೋಡುತ್ತಿದ್ದೇವೆ. ಇನ್ನೂ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನಾನೊಂದು ತೀರ ನೀನೊಂದು ತೀರ ಎಂಬಂತೆ ಇದ್ದಾರೆ ಹೀಗಾಗಿ ಅವರು ಮೊದಲು ತಮ್ಮ ಪ್ಲೇಟ್‌ನಲ್ಲಿ ಏನಿದೆ ಎಂದು ನೋಡಿಕೊಳ್ಳಲಿ. ಆಮೇಲೆ ಮತ್ತೊಬ್ಬರ ಪ್ಲೇಟ್ ನೋಡಲಿ ಎಂದು ಕಿಡಿಕಾರಿದರು.

ಮೈಸೂರು ಜಯದೇವದಲ್ಲಿ 4ನೇ ಕ್ಯಾಥ್‌ಲ್ಯಾಬ್ ಪ್ರಾರಂಭ

ಜಯದೇವ ಹೃದ್ರೋಗ–ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಪ್ರಕಟ

ಮೈಸೂರು. ಜು.20– ಮೈಸೂರು ಜಯದೇವದಲ್ಲಿ ಹೃದಯ ರೋಗಿಗಳ ಸಂಖ್ಯೆ ಹೆಚ್ಚಾಗಿ ಒತ್ತಡ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಬರುವ ಒಂದೂವರೆ ತಿಂಗಳಲ್ಲಿ 4ನೇ ಕ್ಯಾಥ್‌ಲ್ಯಾಬ್ ಅನ್ನು ಪ್ರಾರಂಭ ಮಾಡಲಾಗುವುದು ಎಂದು ಜಯದೇವ ಹೃದ್ರೋಗ ಮತ್ತು ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ॥ ಸಿ.ಎನ್. ಮಂಜುನಾಥ್ ತಿಳಿಸಿದರು.

ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕರಾಗಿ ಸರ್ಕಾರ ಒಂದು ವರ್ಷ ಮುಂದುವರೆಸಿದ ಹಿನ್ನೆಲೆಯಲ್ಲಿ ಮೈಸೂರು ಜಯದೇವ ಹೃದ್ರೋಗ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್. ಸದಾನಂದ ಅವರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಮೈಸೂರು ಜಯದೇವದಲ್ಲಿ ಈಗಾಗಲೇ ಪ್ರತಿದಿನ 700ರಿಂದ 800 ಹೊರ ರೋಗಿ ಗಳು ಬರುತ್ತಿದ್ದಾರೆ. ಪ್ರತಿದಿನ 35ರಿಂದ 40 ಕ್ಯಾಥ್‌ಲ್ಯಾಬ್ ಪ್ರೊಸಿಜರ್ಸ್ ನಡೆಯುತ್ತಿವೆ. ಇದರಿಂದ ಜನಸಾಮಾನ್ಯರು ಕಾಯುವುದನ್ನು ಕಡಿಮೆ ಮಾಡಲು ತಜ್ಞವೈದ್ಯರ ಮೇಲೆ ಒತ್ತಡ ಕಡಿಮೆ ಮಾಡಲು ಹೊಸ ಕ್ಯಾಥ್‌ಲ್ಯಾಬ್ ಪ್ರಾರಂಭಿಸಲಿದ್ದೇವೆ. ಆಗಸ್ಟ್ 4ನೇ ವಾರದಲ್ಲಿ ಬೆಂಗಳೂರಿನ ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ 50 ಹಾಸಿಗೆ ಸಾಮರ್ಥ್ಯದ ಜಯದೇವ ಸ್ಯಾಟಲೈಟ್ ಸೆಂಟರ್ ತೆರೆಯಲಾಗುತ್ತದೆ. ಇದರಲ್ಲಿ ಕ್ಯಾಥ್‌ಲ್ಯಾಬ್ ಒ.ಪಿ.ಡಿ. ಐ.ಸಿ.ಯು ಇರುತ್ತದೆ. ಇದರಿಂದ ಆ ಭಾಗದ ಜನರಿಗೆ ಅನುಕೂಲವಾಗುತ್ತದೆ. ಕಲ್ಬುರ್ಗಿಯಲ್ಲಿ ಈಗಾಗಲೇ 150 ಹಾಸಿಗೆ ಸಾಮರ್ಥ್ಯ ಜಯದೇವ ಆಸ್ಪತ್ರೆ ಕಾಮಗಾರಿ ಪ್ರಗತಿಯಲ್ಲಿದ್ದು, ಒಂದು ವರ್ಷದಲ್ಲಿ ಕಾರ್ಯ ನಿರ್ವಹಣೆ ಮಾಡುತ್ತದೆ. ಹಾಗೆಯೇ ಬೆಳಗಾವಿ ರೆವಿನ್ಯೂ ವಿಭಾಗದ ಹುಬ್ಬಳ್ಳಿಯಲ್ಲಿ 400 ಹಾಸಿಗೆ ಸಾಮರ್ಥ್ಯದ ಜಯದೇವ ಆಸ್ಪತ್ರೆಯನ್ನು ಪ್ರಾರಂಭ ಮಾಡಬೇಕಾಗಿದೆ. ಇದಕ್ಕೆ ಬೇಕಾದ ಎಲ್ಲಾ ರೀತಿಯ ಆಡಳಿತಾತ್ಮಕ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದೇವೆ. ಆಗಸ್ಟ್ ಕೊನೆ ವಾರದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಶಂಕುಸ್ಥಾಪನೆ ನೆರವೇರಿಸುವರು. ಬೆಂಗಳೂರು ಹೊರತುಪಡಿಸಿ ರಾಜ್ಯಾದ್ಯಂತ ರಿಯಾಯಿತಿ ದರದಲ್ಲಿ ಗುಣಮಟ್ಟದ ಚಿಕಿತ್ಸೆಯನ್ನು ಹೃದಯರೋಗಿಗಳಿಗೆ ಕೈಗೆಟುಕುವ ದರದಲ್ಲಿ ನೀಡಲಾಗುತ್ತಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ನಮ್ಮ ಕಾರ್ಯವೈಖರಿ, ಸಾಧನೆಯನ್ನು ಗುರುತಿಸಿ, ಸೇವಾವಧಿಯನ್ನು ಒಂದು ವರ್ಷದ ಅವಧಿಗೆ ವಿಸ್ತರಿಸಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಹಾಗೂ ಆರೋಗ್ಯ ಸಚಿವರಿಗೆ ಧನ್ಯವಾದ ಸಲ್ಲಿಸುವುದಾಗಿ ಡಾ.ಮಂಜುನಾಥ್ ತಿಳಿಸಿದರು.


ಈ ಸಂದರ್ಭದಲ್ಲಿ ಡಾ.ಅನುಸೂಯ ಮಂಜುನಾಥ್, ಮೈಸೂರು ಜಯದೇವ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ್, ನರ್ಸಿಂಗ್ ಅಧೀಕ್ಷಕ ಹರೀಶ್‌ಕುಮಾರ್ ಹಾಜರಿದ್ದರು.



ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕರಾಗಿ ಸರ್ಕಾರ 1 ವರ್ಷ ಮುಂದುವರೆಸಿದ ಹಿನ್ನೆಲೆಯಲ್ಲಿ ಡಾ.ಸಿ.ಎನ್.ಮಂಜುನಾಥ್ ಅವರನ್ನು ಮೈಸೂರು ಜಯದೇವ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ ಬೆಂಗಳೂರಲ್ಲಿ ಅಭಿನಂದಿಸಿದರು.

ಸ್ಮಶಾನ ಜಾಗ ಉಳಿಸಲು ಬೀಡನಹಳ್ಳಿ ಗ್ರಾಮಸ್ಥರಿಂದ ಡಿಸಿಗೆ ಮನವಿ

ಮೈಸೂರು, ಜು.20(ಎಸ್‌ಪಿಎನ್)– ಇಲ್ಲಿನ ತಿ.ನರಸೀಪುರ ತಾಲೂಕಿನ ಬನ್ನೂರು ಹೋಬಳಿ ಬೀಡನಹಳ್ಳಿ ಗ್ರಾಮದ ಸ್ಮಶಾನ ಜಾಗ ಒತ್ತುವರಿ ತೆರವು ಹಾಗೂ ಮೂಲ ಸೌಕರ್ಯ ಕಲ್ಪಿಸುವಂತೆ ಒತ್ತಾಯಿಸಿ ಗ್ರಾಮಸ್ಥರು ಮೈಸೂರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.



ಈ ಸಂಬಂಧ ಬೀಡನಹಳ್ಳಿ ಗ್ರಾಮದ ವೆಂಕಟೇಶ್ ಎಂಬುವರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿ, ಕಳೆದ 4 ವರ್ಷಗಳಿಂದ ಹಿಂದೆ ಸರ್ವೆ ನಂ. 28ರಲ್ಲಿರುವ (2 ಎಕರೆ) ಸ್ಮಶಾನ ಜಾಗದ ಒತ್ತುವರಿ ತೆರವುಗೊಳಿಸಿ, ಅಭಿವೃದ್ಧಿಪಡಿಸುವಂತೆ ಹಲವು ಬಾರಿ ಶಾಸಕ ಅಶ್ವಿನ್‌ಕುಮಾರ್ ಹಾಗೂ ತಿ.ನರಸೀಪುರ ತಹಸೀಲ್ದಾರ್ ಅವರಿಗೆ ಮನವಿ ಮಾಡಲಾಗಿತ್ತು. ಆದರೆ, ಯಾವುದೇ ಪ್ರಯೋಜನವಾಗಿಲ್ಲ ಇದೀಗ ಮತ್ತೊಮ್ಮೆ ಮೈಸೂರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದ್ದಾರೆ.

ಸರ್ವೆ ನಂ.28ರಲ್ಲಿ ಸ್ಮಶಾನ ಜಾಗ ಆರ್‌ಟಿಸಿಯಲ್ಲೂ ಗೋಮಾಳ ಎಂದು ನಮೂದಾಗಿದೆ. ಅಲ್ಲದೆ ಸ್ಮಶಾನ ಜಾಗದ ಸ್ವಲ್ಪ ಒತ್ತುವರಿಯಾಗಿದ್ದು, ಇದನ್ನು ತೆರವುಗೊಳಿಸಬೇಕಾಗಿದೆ. ಇನ್ನುಳಿದ ಸ್ಮಶಾನದ ಜಾಗ ತಗ್ಗು ಪ್ರದೇಶದಲ್ಲಿ ಇರುವುದರಿಂದ ಮಳೆಗಾಲದಲ್ಲಿ ನೀರು ನಿಂತುಕೊಳ್ಳುವುದರಿಂದ ಅಂತ್ಯಕ್ರಿಯೆ ನಡೆಸಲು ತೀವ್ರ ತೊಂದರೆಯಾಗುತ್ತಿದೆ. ಅಲ್ಲದೆ, ಗ್ರಾಮಸ್ಥರು ಓಡಾಡುವ ದಾರಿಯಲ್ಲೇ ಮೃತದೇಹಗಳ ಅಂತ್ಯ ಸಂಸ್ಕಾರ ಮಾಡುತ್ತಿದ್ದಾರೆ. ಇದರಿಂದ ಜಮೀನುಗಳಿಗೆ ಹೋಗುವ ರೈತರ ಓಡಾಟಕ್ಕೆ ಅನಾನುಕೂಲವಾಗುತ್ತಿದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ. ರಾಜ್ಯ ಸರ್ಕಾರ 6 ತಿಂಗಳ ಹಿಂದೆ ರಾಜ್ಯದ ಯಾವ ಗ್ರಾಮದಲ್ಲಿ ಸ್ಮಶಾನ ಭೂಮಿ ಇಲ್ಲ. ಅಂತಹ ಗ್ರಾಮಗಳಿಗೆ ಸರ್ಕಾರದ ವತಿಯಿಂದಲೇ ಭೂಮಿ ಖರೀದಿಸಿ ಸ್ಮಶಾನ ಅಭಿವೃದ್ಧಿಪಡಿಸಲಾಗುವುದು ಎಂದು ಜಾಹಿರಾತು ನೀಡಲಾಗಿತ್ತು. ಆದರೆ, ನಮ್ಮ ಗ್ರಾಮದಲ್ಲಿ ಸ್ಮಶಾನಕ್ಕೆ ಜಾಗ ಇದ್ದರೂ ಸಾರ್ವಜನಿಕರ ಉಪಯೋಗಕ್ಕೆ ಬರುತ್ತಿಲ್ಲ. ಇನ್ನಾದರೂ ನಮ್ಮೂರಿನ ಸ್ಮಶಾನ ಜಾಗ ಅಭಿವೃದ್ಧಿಪಡಿಸಲಿ ಎಂದು ವೆಂಕಟೇಶ್ ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.



ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಬುಧವಾರ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ, ತಾಯಿಯ ದರ್ಶನ ಪಡೆದರು. ಈ ಸಂದರ್ಭದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ, ಬಿಜೆಪಿ ಮುಖಂಡರಾದ ಯಶಸ್ವಿನಿ ಸೋಮಶೇಖರ್, ಮಾಧ್ಯಮ ಪ್ರಮುಖ ಕೇಬಲ್ ಮಹೇಶ್, ನಗರಪಾಲಿಕೆ ಸದಸ್ಯ ಜಗದೀಶ್, ವಕೀಲ ಹಾಗೂ ಬಿಜೆಪಿ ಒಬಿಸಿ ಮೋರ್ಚಾ ಉಪಾಧ್ಯಕ್ಷ ಶಿವರಾಜ್ ಇದ್ದರು.



ಮೈಸೂರು ನಗರ ಕನ್ನಡಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆ ವತಿಯಿಂದ ಚಾಮುಂಡೇಶ್ವರಿ ವರ್ಧಂತಿ ಪ್ರಯುಕ್ತ ಶಿವಾಜಿ ರಸ್ತೆಯಲ್ಲಿ ಸಾರ್ವಜನಿಕರಿಗೆ ಪ್ರಸಾದ ವಿನಿಯೋಗಿಸಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ಮಂಜುನಾಥ್ (ಮಿಲ್ಕ್ ಮಂಜು), ಪ್ರಧಾನ ಕಾರ್ಯದರ್ಶಿ ಬಾಲಕೃಷ್ಣಗೌಡ, ಕಾವಲು ಪಡೆಯ ಅಧ್ಯಕ್ಷ ಮೋಹನ್‌ಕುಮಾರ್‌ಗೌಡ, ಯೋಗೇಶ್, ಮೆಸ್‌ಬಾಬು, ಕಿರಣ್‌ಸಿಂಗ್, ಮಹೇಶ್, ನಾಗರಾಜು, ಸ್ವಾಮಿಗೌಡ, ಸು.ಮುರಳಿ, ಕೀರ್ತಿಗೌಡ, ಮಂಜುನಾಥ್, ಸ್ವಾಮಿ ಇದ್ದರು.

ಅವರಪ್ಪನಾಣೆ ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬರಲ್ಲ

- 'ಮುಖ್ಯಮಂತ್ರಿ' ಗಾದಿಗೆ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಪೈಪೋಟಿ ಸಂಬಂಧ ಸಚಿವ ಡಾ.ಸುಧಾಕರ್ ವ್ಯಂಗ್ಯೋಕ್ತಿ
- ಅಧಿಕಾರಕ್ಕೆ ಬರುತ್ತೀರಿ ಎಂದು ಇವರಿಗೆ ಯಾವ ಜ್ಯೋತಿಷಿ ಹೇಳಿದ್ದಾನೋ ಗೊತ್ತಿಲ್ಲ

ಬೆಂಗಳೂರು, ಜು.20 (ಕೆಎಂಶಿ)–ಅವರಪ್ಪಾಣೆ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದೇ ಇಲ್ಲ. ಇನ್ನು ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಯಾಗುವುದು ಎಲ್ಲಿಂದ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಪ್ರಶ್ನಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಾಸ್ತವ ಸ್ಥಿತಿಯಲ್ಲಿ ಕಾಂಗ್ರೆಸ್‌ಗೆ ಮತದಾರರ ಬೆಂಬಲವಿಲ್ಲ. ಅವರಿಗೆ ಯಾವ ಜೋತಿಷಿ ಹೇಳಿದ್ದಾರೋ ತಿಳಿಯದು. ಇದರ ಆಧಾರದ ಮೇಲೆ ಮುಖ್ಯಮಂತ್ರಿಗಾದಿಗೆ ಟವಲ್ ಹಾಕಲು ಪೈಪೋಟಿ ನಡೆಸುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು. ಇನ್ನು ಮಗುವೇ ಹುಟ್ಟಿಲ್ಲ, ಕುಲಾವೆ ಹೊಲಿಯಲಾಗುತ್ತಿದೆ. ಅಲ್ಲಿ ಅಧಿಕಾರಕ್ಕಾಗಿ ಪೈಪೋಟಿ ಶುರುವಾಗಿದೆ. ಜನರು ಎಲ್ಲವನ್ನೂ ನೋಡುತ್ತಾ ಇದ್ದಾರೆ. ಇನ್ನು ಮುಂದೆ ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಬ್ಬಂದಿ ಬಯೋಮೆಟ್ರಿಕ್ ಹಾಜರಾತಿ ದಾಖಲಿಸದಿದ್ದರೆ, ಅಂತಹವರ ಸಂಬಳ ಕಡಿತ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ.



ಮಂಗಳವಾರ ಹುಟ್ಟುಹಬ್ಬ ಆಚರಿಸಿಕೊಂಡ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರ ಪುತ್ರ, ಉದ್ಯಮಿ ಭರತ್ ಮಂಜೇಗೌಡರನ್ನು ಶ್ರೀರಾಂಪುರ ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ದಿನೇಶ್‌ಗೌಡ ಅಭಿನಂದಿಸಿದರು. ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಅಪೆಕ್ಸ್ ಶ್ರೀನಿವಾಸ್, ಕಾಟೂರು ದೇವರಾಜು, ಮಹದೇವು, ರಾಘವೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ಜು.31ಕ್ಕೆ ಸುತ್ತೂರು ಶ್ರೀ ಕ್ಷೇತ್ರದಲ್ಲಿ ಉಚಿತ ಸಾಮೂಹಿಕ ವಿವಾಹ

ಸುತ್ತೂರು,ಜು.20–ಶ್ರೀ ಕ್ಷೇತ್ರ ಸುತ್ತೂರಿನಲ್ಲಿ ಆದಿಜಗದ್ಗುರುಗಳ ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ಸಾಮೂಹಿಕ ವಿವಾಹಗಳನ್ನು ಏರ್ಪಡಿಸಲಾಗುತ್ತಿದೆ. ಜು.31ರಂದು ಮಾಸಿಕ ಸಾಮೂಹಿಕ ವಿವಾಹ ಕಾರ್ಯಕ್ರಮವಿದ್ದು, 8 ದಿನಗಳ ಮುಂಚಿತವಾಗಿ ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರು ಇವರನ್ನು ಸಂಪರ್ಕಿಸಿ ಅಥವಾ ದೂರವಾಣಿ: 08221–232217, 232033, 9741342222, 9449030588 ಸಂಪರ್ಕಿಸಿ.

ರೈಲಿಗೆ ಸಿಲುಕಿ ಅಪರಿಚಿತ ಸಾವು

ಮೈಸೂರು,ಜು.20–ಮಂಡ್ಯ–ಎಲಿಯೂರು ರೈಲು ನಿಲ್ದಾಣಗಳ ನಡುವೆ ರೈಲಿಗೆ ಸಿಲುಕಿ ಸುಮಾರು 40ರಿಂದ 45 ವರ್ಷದ ಅಪರಿಚಿತ ವ್ಯಕ್ತಿ ಮೃತಪಟ್ಟಿದ್ದು, ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 40ರಿಂದ 45 ವರ್ಷದ ಮೃತ ವ್ಯಕ್ತಿಯು 5.6 ಅಡಿ ಎತ್ತರವಿದ್ದು, ದುಂಡುಮುಖ, ಗೋದಿ ಮೈಬಣ್ಣ, ದೃಢಕಾಯ ಶರೀರ, ಸುಮಾರು 1 ಇಂಚು ಉದ್ದದ ಕಪ್ಪುಕೂದಲು ಇರುತ್ತದೆ. ಶೇವ್ ಮಾಡಿರುತ್ತಾನೆ, ಮುಖದ ಭಾವವನ್ನು ನೋಡಿದಲ್ಲಿ ಮಂಗಳಮುಖಿಯಂತೆ ಕಂಡುಬರುತ್ತದೆ. ಗ್ರೇ ಕಲರ್ ಪ್ಯಾಂಟ್ ಕಾಫಿ ಬಣ್ಣದ ಒಳಉಡುಪು, ಬ್ರೌನ್ ಕಲರ್ ಚಪ್ಪಲಿ ಧರಿಸಿರುತ್ತಾರೆ. ವಾರಸುದಾರರು ರೈಲ್ವೆ ಪೊಲೀಸ್ ಠಾಣೆಗೆ ಭೇಟಿ ನೀಡಬಹುದು ಅಥವಾ ದೂ: 0821–2516579 ಸಂಪರ್ಕಿಸಿ.

ಕೆ.ಜಿ.ಕೊಪ್ಪಲಲ್ಲಿ ವೈಭವದ ಶ್ರೀ ಚಾಮುಂಡೇಶ್ವರಿ ಉತ್ಸವ

ಮೈಸೂರು, ಜು.20(ಎಸ್‌ಪಿಎನ್)– ಶ್ರೀ ಚಾಮುಂಡೇಶ್ವರಿ ದೇವಿ ರಥೋತ್ಸವವು ನಗರದ ಕೆ.ಜಿ.ಕೊಪ್ಪಲಿನಲ್ಲಿ ವೈಭವದಿಂದ ನಡೆಯಿತು. ಮಂಗಳವಾರ ಬೆಳಗ್ಗೆ ಕೆ.ಜಿ.ಕೊಪ್ಪಲಿನ ರೈಲ್ವೆ ಅಂಡರ್ ಪಾಸ್ ಬಳಿ ಇರುವ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ದೇವಿಗೆ ಬಗೆಬಗೆಯ ಹೂಗಳಿಂದ ಅಲಂಕರಿಸಿ, ವಿಶೇಷ ಪೂಜೆ ನೆರವೇರಿಸಿದ ನಂತರ ಬೆಳಗ್ಗೆ 11.30ಕ್ಕೆ ದೇವಸ್ಥಾನದಿಂದ ಹೊರಟ ಚಾಮುಂಡೇಶ್ವರಿ ರಥೋತ್ಸವ ಕೆ.ಜಿ.ಕೊಪ್ಪಲಿನ ವಿವಿಧ ರಸ್ತೆ, ಸರಸ್ವತಿಪುರಂ, ಚಿನ್ನಗಿರಿಕೊಪ್ಪಲು (ಬಸವಯ್ಯನಗರ), ಜಯನಗರ ಕಡೆ ಸಾಗಿ ಮರಳಿ ದೇವಸ್ಥಾನ ತಲುಪಿತು. ಈ ವೇಳೆ ಗ್ರಾಮದ ಮಹಿಳೆಯರು, ಮಕ್ಕಳು ಹಾಗೂ ಗ್ರಾಮದ ಮುಖಂಡರು ಭಕ್ತಿ–ಭಾವದಿಂದ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಸಂಜೆ 6.30ರವರೆಗೆ ರಥೋತ್ಸವ ನಡೆಯಿತು. ವಿವಿಧ ಜಾನಪದ ತಂಡಗಳು ಭಾಗವಹಿಸಿ ರಥೋತ್ಸವಕ್ಕೆ ಮೆರಗು ತಂದವು. ಅನ್ನಸಂತರ್ಪಣೆ ಕೂಡ ಏರ್ಪಡಿಸಲಾಗಿತ್ತು.



ಶಾಸಕ ಎಲ್.ನಾಗೇಂದ್ರ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷರಾದ ಹೆಚ್.ವಿ.ರಾಜೀವ್, ಬಸವೇಗೌಡ, ಪಾಲಿಕೆ ಸದಸ್ಯರಾದ ಶಿವಕುಮಾರ್, ಶೋಭಾ, ಮಾಜಿ ಮೇಯರ್ ಆರ್.ಲಿಂಗಪ್ಪ, ಕಾಂಗ್ರೆಸ್ ಮುಖಂಡ ಹರೀಶ್‌ಗೌಡ, ನಗರ ಪಾಲಿಕೆ ಮಾಜಿ ಸದಸ್ಯರಾದ ಎಂ.ಕೆ.ಶಂಕರ್, ಬಾಲು, ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಅಧ್ಯಕ್ಷ ಕೆ.ದೇಶೀಗೌಡ, ಧರ್ಮದರ್ಶಿ ಎಂ.ಲಿಂಗಪ್ಪ, ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಖಜಾಂಚಿ ಎಸ್.ಕೃಷ್ಣಪ್ಪ, ಸಹ ಕಾರ್ಯದರ್ಶಿ ಎಂ.ಲಕ್ಷ್ಮಣ್, ಕೆ.ಜಿ.ಕೊಪ್ಪಲಿನ ಯಜಮಾನರಾದ ದೊಡ್ಡಣ್ಣ, ಲಿಂಗಪ್ಪ ಇನ್ನಿತರೆ ಮುಖಂಡರು ರಥೋತ್ಸವದಲ್ಲಿ ಭಾಗವಹಿಸಿದ್ದರು. ಅಲ್ಲದೆ, ಒಂಟಿಕೊಪ್ಪಲಿನ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಮಂಗಳವಾರ ರಥೋತ್ಸವ ಕಾರ್ಯಕ್ರಮ ಅದ್ದೂರಿಯಾಗಿ ನೆರವೇರಿತು.

ಸಿದ್ದರಾಮಯ್ಯ–75 ಅಮೃತ ಮಹೋತ್ಸವಕ್ಕೆ ಮೈಸೂರಿಂದ ಹೆಚ್ಚಿನ ಕಾರ್ಯಕರ್ತರು

ಪೂರ್ವಭಾವಿ ಸಭೆಯಲ್ಲಿ ಕಾಂಗ್ರೆಸ್ ಮುಖಂಡರ ಸಲಹೆ-ಸೂಚನೆ



ಮೈಸೂರಿನ ಇಂದಿರಾ ಗಾಂಧಿ ಕಾಂಗ್ರೆಸ್ ಭವನದಲ್ಲಿ ಬುಧವಾರ ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಏರ್ಪಡಿಸಿದ್ದ ಪೂರ್ವಭಾವಿ ಸಭೆಯನ್ನುದ್ದೇಶಿಸಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಮಾತನಾಡಿದರು.

ಮೈಸೂರು, ಜು.20(ಆರ್‌ಕೆ)– ಆಗಸ್ಟ್ 3 ರಂದು ದಾವಣಗೆರೆಯಲ್ಲಿ ನಡೆಯುವ ಸಿದ್ದರಾಮಯ್ಯ–75 ಅಮೃತ ಮಹೋತ್ಸವ ಸಮಾರಂಭಕ್ಕೆ ಮೈಸೂರು ನಗರ ಸೇರಿದಂತೆ ಜಿಲ್ಲಾದ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸುವಂತೆ ನಾಯಕರು ಕರೆ ನೀಡಿದ್ದಾರೆ.

ಸಮಾರಂಭ ಸಂಬಂಧ ಮೈಸೂರಿನ ಇಂದಿರಾ ಗಾಂಧಿ ಕಾಂಗ್ರೆಸ್ ಭವನದಲ್ಲಿ ಬುಧವಾರ ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಏರ್ಪಡಿಸಿದ್ದ ಪೂರ್ವಭಾವಿ ಸಭೆಯನ್ನುದ್ದೇಶಿಸಿ ಮಾತನಾಡಿದ ವಿಧಾನಪರಿಷತ್ ಸದಸ್ಯ ಪ್ರಕಾಶ್ ರಾಥೋಡ್ ಹಾಗೂ ಕೆಪಿಸಿಸಿ ಉಪಾಧ್ಯಕ್ಷರಾದ ಮಾಜಿ ಎಂಎಲ್‌ಸಿ ಅಶೋಕ್ ಪಟ್ಟಣ್ಣನವರ್, ದಾವಣಗೆರೆಯಲ್ಲಿ ನಡೆಯಲಿರುವ ಸಿದ್ದರಾಮಯ್ಯ–75 ಅಮೃತ ಮಹೋತ್ಸವ ಸಮಾರಂಭಕ್ಕೆ ತಾಲೂಕುವಾರು, ವಿಧಾನ ಸಭಾ ಕ್ಷೇತ್ರವಾರು ಕಾರ್ಯಕರ್ತರನ್ನು ಒಗ್ಗೂಡಿಸಿ ಜಿಲ್ಲಾ, ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ಮಾರ್ಗದರ್ಶನದೊಂದಿಗೆ ಕರೆದೊಯ್ಯಲು ವ್ಯವಸ್ಥೆ ಮಾಡಬೇಕು ಎಂದರು.

ಎಐಸಿಸಿ ಮುಖ್ಯಸ್ಥರಾದ ಸೋನಿಯಾ ಗಾಂಧಿ ವಿರುದ್ಧ ಇಡಿ ವಿಚಾರಣೆ ಖಂಡಿಸಿ ಬೆಂಗಳೂರಿನಲ್ಲಿ ನಾಳೆ (ಜು.21) ನಡೆಯಲಿರುವ ಕಾಂಗ್ರೆಸ್ ಪ್ರತಿಭಟನೆಗೂ ಮೈಸೂರಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಪಾಲ್ಗೊಳ್ಳಬೇಕು. ಜುಲೈ 22ರಂದು ಮಾಜಿ ಉಪಮುಖ್ಯಮಂತ್ರಿ ಡಾ. ಜಿ.ಪರಮೇಶ್ವರ್ ನೇತೃತ್ವದಲ್ಲಿ ಮೈಸೂರಿನ ಗಾಂಧಿ ಚೌಕದಿಂದ ಪಾದಯಾತ್ರೆ ನಡೆಸಿ ಬೃಹತ್ ಪ್ರತಿಭಟನೆ ಮಾಡುವಂತೆಯೂ ಪ್ರಕಾಶ್ ರಾಥೋಡ್ ಸಲಹೆ ನೀಡಿದರು.

ಮೈಸೂರಿನ ಕಲಾಮಂದಿರದಲ್ಲಿ ಜು.23ರಂದು ಆಯೋಜಿಸಿರುವ 'ಸಿದ್ದರಾಮಯ್ಯ ಆಡಳಿತ: ನೀತಿ ನಿರ್ಧಾರ' ಪುಸ್ತಕ ಬಿಡುಗಡೆ ಹಾಗೂ ಸಂವಾದ ಕಾರ್ಯಕ್ರಮ ಯಶಸ್ವಿಗೊಳಿಸಬೇಕು. ಹಾಗೆಯೇ ಆಗಸ್ಟ್ 1ರಿಂದ 10ರವರೆಗೆ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಏರ್ಪಡಿಸಿರುವ 75 ಕಿ.ಮೀ. ಪಾದಯಾತ್ರೆ ಕಾರ್ಯಕ್ರಮವನ್ನು ಮೈಸೂರು ನಗರದ ಮೂರು ವಿಧಾನ ಸಭಾ ಕ್ಷೇತ್ರಗಳಲ್ಲಿ ಆಯೋಜಿಸುವಂತೆಯೂ ಸೂಚನೆ ನೀಡಿದರು.

ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮಾಜಿ ಶಾಸಕರಾದ ಕೆ.ವೆಂಕಟೇಶ್, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕರಾದ ವಾಸು, ಕಳಲೆ ಕೇಶವಮೂರ್ತಿ, ಆರ್.ಧರ್ಮಸೇನಾ, ಮುಖಂಡರಾದ ಡಿ.ರವಿಶಂಕರ್, ಚಂದ್ರಮೌಳಿ, ಕೆ.ಮರೀಗೌಡ, ಹೆಚ್.ಸಿ.ಬಸವರಾಜು, ಪ್ರೊ.ರಾಮಪ್ಪ, ಸುಧೀಂದ್ರ, ಸೂರಜ್ ಹೆಗಡೆ, ಮಂಜುಳಾ ಮಾನಸ, ಹೆಚ್.ಎ.ವೆಂಕಟೇಶ್, ಕೆ.ಹರೀಶ್ ಗೌಡ, ಬಿ.ಎಂ.ರಾಮು, ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ ಮೋದಾಮಣಿ, ದಕ್ಷಿಣಾಮೂರ್ತಿ, ಪುಷ್ಪಲತಾ ಚಿಕ್ಕಣ್ಣ, ನಾರಾಯಣ, ಅನಂತ, ಅಯೂಬ್‌ಖಾನ್ ಸೇರಿದಂತೆ ಹಲವರು ಸಭೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು, ಬೆಂಗಳೂರು ವಿಭಾಗದ ಅರ್ಹ ಸಹ ಶಿಕ್ಷಕರಿಗೆ ಮುಖ್ಯ ಶಿಕ್ಷಕರ ಹುದ್ದೆಗೆ ಪದೋನ್ನತಿಗೆ ಆಗ್ರಹ

ಮೈಸೂರು,ಜು.20–ಮೈಸೂರು ಮತ್ತು ಬೆಂಗಳೂರು ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರೌಢಶಾಲಾ ಸಹ ಶಿಕ್ಷಕರಿಗೆ ಮುಖ್ಯ ಶಿಕ್ಷರ ಹುದ್ದೆಗೆ ಪದೋನ್ನತಿ ನೀಡುವಲ್ಲಿ ವಿಳಂಬ ಉಂಟಾಗುತ್ತಿರುವುದಕ್ಕೆ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಆಕ್ಷೇಪ ವ್ಯಕ್ತಪಡಿಸಿದ್ದಾರೆ.



ರಾಜ್ಯದ ಇತರೆ ವಿಭಾಗಗಳಲ್ಲಿ ಸಕಾಲದಲ್ಲಿ ಪದೋನ್ನತಿ ನೀಡಲಾಗುತ್ತಿದೆ. ಆದರೆ ಮೈಸೂರು ಮತ್ತು ಬೆಂಗಳೂರು ವಿಭಾಗಗಳಲ್ಲಿ ಮಾತ್ರ ನಾನಾ ಕಾರಣಗಳಿಂದಾಗಿ ವಿಳಂಬ ಉಂಟಾಗುತ್ತಿರುವುದರಿಂದ ಗುಣಾತ್ಮಕ ಶಿಕ್ಷಣಕ್ಕೆ ಅಡ್ಡಿ ಉಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ವಿದ್ಯಾರ್ಹತೆ ಹೊಂದಿರುವ ಅರ್ಹ ಸಹ ಶಿಕ್ಷಕರುಗಳಿಗೆ ಕೂಡಲೇ ಪದೋನ್ನತಿ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಮರಿತಿಬ್ಬೇಗೌಡ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರನ್ನು ಒತ್ತಾಯಿಸಿದ್ದಾರೆ.

ಇಂದು ತಪಾಸಣಾ ಶಿಬಿರ

ಮೈಸೂರು,ಜು.20–ಮೈಸೂರಿನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಜು.21ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ವಿವರಗಳಿಗೆ ದೂ.0821–4259259.

ನಾಗರಹೊಳೆ ಕಾಡಂಚಿನ ಗ್ರಾಮಗಳಲ್ಲಿ ಭಾರೀ ಮಳೆ

ಹೆಬ್ಬಾಳ ಸೇತುವೆ ಮೇಲೆ ಹರಿದ ನೀರು, ವಾಹನ ಸಂಚಾರ ಬಂದ್



ಹನಗೋಡು, ಜು.20– ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಗ್ರಾಮಗಳಲ್ಲಿ ಬುಧವಾರ ಸಂಜೆ ಧಾರಾಕಾರ ಮಳೆ ಸುರಿದಿದ್ದು, ಹನಗೋಡು– ಪಂಚವಳಿ (ಹುಣಸೂರು– ಹನಗೋಡು–ಪಿರಿಯಾಪಟ್ಟಣ ಮಾರ್ಗ) ಸಂಪರ್ಕದ ಹೆಬ್ಬಾಳ ಸೇತುವೆ ಮೇಲೆ ಮೂರು ಅಡಿಗೂ ಹೆಚ್ಚು ನೀರು ಹರಿಯುತ್ತಿದ್ದು, ವಾಹನಗಳ ಸಂಚಾರ ಬಂದ್ ಮಾಡಲಾಗಿದೆ.

ಇದರಿಂದ ವಾಹನಗಳ ಸಂಚಾರಕ್ಕೆ ಅಡ್ಡಿಯಾಗಿ ಜನಜೀವನ ಅಸ್ತವ್ಯಸ್ತವಾಗಿದೆ. ವಾಹನಗಳು ಪರ್ಯಾಯ ಮಾರ್ಗದಲ್ಲಿ ಸಂಚರಿಸಲು ಹರಸಾಹಸ ಪಡಬೇಕಾಗಿದೆ. ವಾಹನ ಸವಾರರ ಪರದಾಟ ಹೇಳತೀರದಾಗಿದೆ. ಹನಗೋಡು ಹೋಬಳಿ ವ್ಯಾಪ್ತಿಯ ಕಾಡಂಚಿನ ಗ್ರಾಮಗಳಾದ ಕಿಕ್ಕೇರಿಕಟ್ಟೆ, ಹೆಬ್ಬಾಳ, ನೇರಳೆಕುಪ್ಪೆ, ಉಡುವೇಪುರ, ಕಚುವಿನಹಳ್ಳಿ, ಶೆಟ್ಟಹಳ್ಳಿ, ಕೆಜಿ ಹೆಬ್ಬನಕುಪ್ಪೆ, ಕಾಳಬೋಚನಹಳ್ಳಿ, ಬೆಕ್ಯಶೆಡ್, ಬಿಲ್ಲೇನಹೊಸಳ್ಳಿ, ಚಂದನಗಿರಿ ಗ್ರಾಮಗಳಲ್ಲಿ ಸುರಿದ ಧಾರಾಕಾರ ಮಳೆಯಿಂದ ಸೇತುವೆ ಮೇಲೆ ನೀರು ಉಕ್ಕಿ ಹರಿಯುತ್ತಿರುವುದರಿಂದ ಈ ಪರಿಸ್ಥಿತಿ ನಿರ್ಮಾಣವಾಗಿದೆ.

ಮಳೆಯಿಂದ ಎರಡು ಮನೆಗಳ ಗೋಡೆ ಕುಸಿತ

ಮನೆ ಕುಸಿತ: ಬುಧವಾರ ಸಂಜೆ ಸುರಿದ ಮಳೆಗೆ ಕಚುವಿನಹಳ್ಳಿಯ ಪಾರ್ವತಿ ಹೆಬ್ಬೂರಿಗೌಡ, ಉಡುವೇಪುರದ ಚಂದ್ರಶೇಖರ್ ಅವರ ಮನೆ ಗೋಡೆ ಕುಸಿದು ಬಿದ್ದಿದೆ. ಆದರೆ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ,



ಇದಲ್ಲದೆ ನೇರಳಕುಪ್ಪೆಯ ಹುಚ್ಚಮ್ಮ ಕೆಂಪೇಗೌಡರ ಮನೆ ಗೋಡೆಯು ಅತೀ ಮಳೆಯಿಂದಾಗಿ ಶಿಥಿಲಗೊಂಡು ಬೀಳುವ ಹಂತ ತಲುಪಿದೆ.



ಮಳೆಯಿಂದ ಮನೆ ಗೋಡೆ ಕುಸಿತ



ಎಚ್.ಡಿ.ಕೋಟೆ, ಜು.20– ತಾಲೂಕಿನ ಸೋಗಹಳ್ಳಿ ಗ್ರಾಮದ ಸೊಗಹಳ್ಳಿ ತುಂಗಾ ಎಂಬುವರ ಮನೆಯ ಗೋಡೆ ತೀವ್ರ ಮಳೆಯಿಂದ ಬಿದ್ದುಹೋಗಿದೆ.

ಕಳೆದ 15 ದಿನದಿಂದ ಬೀಳುತ್ತಿರುವ ಮಳೆಯ ಹಿನ್ನೆಲೆಯಲ್ಲಿ ಮನೆಯ ಗೋಡೆ ಕುಸಿದು ಬಿದ್ದಿದೆ. ಇದರಿಂದ ಬಡ ಕುಟುಂಬ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಆಸರೆ ಇಲ್ಲದೆ ಪರದಾಡುವಂತಾಗಿದೆ. ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಮನೆ ಬಿದ್ದ ಹಿನ್ನೆಲೆಯಲ್ಲಿ ಕುಟುಂಬವು ಅಕ್ಕಪಕ್ಕದ ಜನರ ನೆರವಿನಲ್ಲಿ ಜೀವನ ನಡೆಸುವ ಸ್ಥಿತಿ ನಿರ್ಮಾಣವಾಗಿದೆ, ಈ ಕುಟುಂಬಕ್ಕೆ ಸರ್ಕಾರ ಕೂಡಲೇ ಮನೆ ನಿರ್ಮಾಣ ಮಾಡಿಕೊಡಬೇಕು ಎಂದು ಸ್ಥಳೀಯ ಮುಖಂಡ ಶಿವರಾಜು ಆಗ್ರಹಿಸಿದ್ದಾರೆ.

ಹೋರಾಟದ ಮೂಲಕವೇ ಸಂಬಳ ಪಡೆಯಬೇಕಾದ ಪರಿಸ್ಥಿತಿ

7ನೇ ಸಮ್ಮೇಳನದಲ್ಲಿ ಅಂಗನವಾಡಿ ನೌಕರರ ರಾಜ್ಯ ಪ್ರಧಾನ ಕಾರ್ಯದರ್ಶಿ ಸುನಂದ ವಾಗ್ದಾಳಿ

ನಂಜನಗೂಡು, ಜು. 20– ಅಂಗನವಾಡಿ ಕಾರ್ಯಕರ್ತೆಯರು ಸರ್ಕಾರದ ಎಲ್ಲಾ ಯೋಜನೆಗಳನ್ನು ಮನೆ ಮನೆಗೆ ತಲುಪಿಸುವಲ್ಲಿ ಶ್ರಮಿಸುತ್ತಿದ್ದಾರೆ. ಆದರೆ ಸರ್ಕಾರದ ಧೋರಣೆಗಳಿಂದಾಗಿ ಸಂಬಳವನ್ನೂ ಸಹ ಹೋರಾಟ ಮಾಡಿಯೇ ಪಡೆದುಕೊಳ್ಳುವಂತಹ ಸನ್ನಿವೇಶ ನಿರ್ಮಾಣವಾಗಿದೆ ಎಂದು ಅಂಗನವಾಡಿ ನೌಕರರ ರಾಜ್ಯ ಪ್ರಧಾನ ಕಾರ್ಯದರ್ಶಿ ಸುನಂದ ವಾಗ್ದಾಳಿ ನಡೆಸಿದರು.



ಪಟ್ಟಣದ ಗಿರಿಜಾ ಕಲ್ಯಾಣ ಮಂದಿರದಲ್ಲಿ ನಡೆದ ಅಂಗನವಾಡಿ ಕಾರ್ಯಕರ್ತೆಯರ 7ನೇ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೊರೊನಾ ಸಂಕಷ್ಟದ ಸಮಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ತಮ್ಮ ಪ್ರಾಣದ ಹಂಗು ತೊರೆದು ಕೆಲಸ ಮಾಡಿದ್ದು, ಜೊತೆಗೆ ಬಹಳಷ್ಟು ಮಂದಿ ಕೊರೊನಾಗೆ ಬಲಿಯಾಗಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರ ಈ ಪರಿಶ್ರಮವನ್ನು ಸರ್ಕಾರಗಳು ಗಣನೆಗೆ ತೆಗೆದುಕೊಳ್ಳುತ್ತಿಲ್ಲ ಎಂದು ತಿಳಿಸಿದರು. ಗ್ರಾಚ್ಯುಯಿಟಿ ಹಣ ನೀಡುತ್ತಿಲ್ಲ. ಇದರಿಂದ ನಮ್ಮ ಹೋರಾಟ ಅನಿವಾರ್ಯ. ಆದರೆ ಕೇಂದ್ರ ಸರ್ಕಾರ ಅಂಗನವಾಡಿ ಕಾರ್ಯಕರ್ತೆಯರ ಮುಷ್ಕರದಿಂದಾಗಿ ದೇಶದಲ್ಲಿ ಅಪೌಷ್ಠಿಕತೆ ಹೆಚ್ಚಾಗಿದೆ. ಆದ್ದರಿಂದ ಹೋರಾಟ ಮಾಡಬಾರದೆಂದು ಸುತ್ತೋಲೆ ಹೊರಡಿಸಿದೆ. ದೇಶದಲ್ಲಿ ಅಪೌಷ್ಠಿಕತೆ ಹೆಚ್ಚಾಗಿರುವುದು ಸರ್ಕಾರ ಕಾಲ ಕಾಲಕ್ಕೆ ಗುಣಮಟ್ಟದ ಆಹಾರ ಪದಾರ್ಥಗಳ ಪೂರೈಕೆ ಮಾಡದಿರುವುದರಿಂದಾಗಿ, ಈ ತಪ್ಪುಗಳನ್ನು ಮರೆಮಾಚಲು ಮುಷ್ಕರದ ನೆಪ ಹೇಳಿ ಈ ಸುತ್ತೋಲೆ ಹೊರಡಿಸಿದೆ ಎಂದು ಹರಿಹಾಯ್ದರು.

ಸಮ ಸಮಾಜದ ಶಿಕ್ಷಣ ಹೇಳಿಕೊಡ ಬೇಕಾದ ಅಂಗನವಾಡಿ ಕೇಂದ್ರಗಳಲ್ಲೂ ಸಹ ಧರ್ಮ ಜಾತಿ ವಿಷ ಬೀಜ ಬಿತ್ತುವಂತಹ ಭಗವದ್ಗೀತೆ ಪಠಣ ಮಾಡಿಸಬೇಕೆಂದು ಸರ್ಕಾರ ಮುಂದಾಗಿದೆ. ಧರ್ಮ ವನ್ನು ಒಡೆಯುವಂತಹ ಜಾತಿ ವಿಷ ಬೀಜ ಬಿತ್ತು ವಂತಹ ಶಿಕ್ಷಣ ಬೇಕಿಲ್ಲ ಈ ಆದೇಶ ಜಾರಿಯಾದಲ್ಲಿ ಎಲ್ಲಾ ಕಾರ್ಯಕರ್ತೆಯರು ಒಗ್ಗಟ್ಟಿನಿಂದ ವಿರೋಧಿಸಬೇಕು. ಬಸವಣ್ಣ, ಅಂಬೇಡ್ಕರ್, ಬುದ್ಧನ ಸೌಹಾರ್ದಮಯ ಭರತ ಕಟ್ಟಲು ನಾವೆಲ್ಲಾ ಕಟಿಬದ್ಧರಾಗಿ ಹೋರಾಟ ನಡೆಸಬೇಕಿದೆ ಎಂದರು.

ಕೇಂದ್ರ ಸರ್ಕಾರ ಹೊರಡಿಸಿರುವ ಸುತ್ತೋಲೆಯನ್ನು ಹಿಂಪಡೆಯುವಂತೆ ಒತ್ತಾಯಿಸಿ ಮತ್ತು ಗ್ರಾಚ್ಯುಯಿಟಿ ಹಣವನ್ನು ನೀಡುವಂತೆ ಒತ್ತಾಯಿಸಿ ಅಂಗನವಾಡಿ ಕಾರ್ಯಕರ್ತೆಯರು ದೆಹಲಿ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತೆಯರು ಭಾಗಿಯಾಗಬೇಕೆಂದು ಕರೆ ನೀಡಿದರು.

ಸಮಾರಂಭದಲ್ಲಿ ಸಿಐಟಿಯುನ ಜಿಲ್ಲಾ ಅಧ್ಯಕ್ಷ ಬಾಲಾಜಿರಾವ್, ಅಂಗನವಾಡಿ ಕಾರ್ಯಕರ್ತೆಯರ ಸಂಘದ ತಾಲೂಕು ಅಧ್ಯಕ್ಷೆ ಎಂ.ಮಂಜುಳಾ, ಕಾರ್ಯದರ್ಶಿ ಪುಷ್ಪಲತಾ, ಖಜಾಂಚಿ ಮಹದೇವಮ್ಮ, ಭಾಗ್ಯ ಕೆ ಬಿಳಿಗೆರೆ ಯೋಜನೆಯ ಲೀಲಾವತಿ, ಮಂಜುಳಾ, ರತ್ನಮ್ಮ, ಕಾವೇರಮ್ಮ, ರಾಣಿ, ಕಮಲಾಕ್ಷಿ, ಹುಚ್ಚಮ್ಮ ಸೇರಿದಂತೆ ನೂರಾರು ಅಂಗನವಾಡಿ ಕಾರ್ಯಕರ್ತೆಯರು ಇದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಪೆಟ್ರೋಮ್ಯಾಕ್ಸ್ (ಕ):** ಬೆ.10.30ಕ್ಕೆ, ಮ.1.20ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	**ರಾಕೆಟ್ರಿ (ಹಿಂ):** ಬೆ.8.30ಕ್ಕೆ, **ಗಾರ್ಗಿ (ತ):** ಮ.1.30ಕ್ಕೆ, **777 ಚಾರ್ಲಿ (ಕ):** ಸಂ.4.15ಕ್ಕೆ, **ಮಹಾವೀರ್ಯರ್ (ಮ):** ರಾ.7.25ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 3	**ರಾಕೆಟ್ರಿ (ಹಿಂ):** ಬೆ.8.05ಕ್ಕೆ, **ಹರಿಕಥೆ ಅಲ್ಲ ಗಿರಿಕಥೆ (ಕ):** ಬೆ.10.55ಕ್ಕೆ, ಸಂ.4.30ಕ್ಕೆ, **777 ಚಾರ್ಲಿ (ಕ):** ಮ.1.25ಕ್ಕೆ, ಸಂ.6.55ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 4	**ಗಾರ್ಗಿ (ಕ):** ಬೆ.11.20ಕ್ಕೆ, **ಥಾರ್: ಲವ್ ಅಂಡ್ ಥಂಡರ್ (3ಡಿ)(ಇಂ):** ಮ.2.05ಕ್ಕೆ, ಸಂ.4.30ಕ್ಕೆ, **ರಾಕೆಟ್ರಿ (ಹಿಂ):** ಸಂ.6.55ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	**ಶಬ್ಬಾಶ್ ಮಿಥು (ಹಿಂ):** ಬೆ.10.10, ಸಂ.4.05ಕ್ಕೆ, ರಾ.10ಕ್ಕೆ, **ಥಾರ್: ಲವ್ ಅಂಡ್ ಥಂಡರ್ (3ಡಿ)(ಇಂ):** ಮ.1.25ಕ್ಕೆ, ರಾ.7.20ಕ್ಕೆ.
ಸ್ಕ್ರೀನ್ 2	**777 ಚಾರ್ಲಿ (ಕ):** ಬೆ.10ಕ್ಕೆ, ಸಂ.4.10ಕ್ಕೆ, **ಪೆಟ್ರೋಮ್ಯಾಕ್ಸ್ (ಕ):** ಮ.1.20ಕ್ಕೆ, ರಾ.7.30ಕ್ಕೆ, **ದಿ ವಾರಿಯರ್ (ತೆ):** ರಾ.10.20ಕ್ಕೆ.
ಸ್ಕ್ರೀನ್ 3	**ಹಿಟ್: ದಿ ಫಸ್ಟ್ ಕೇಸ್ (ಹಿಂ):** ಬೆ.10.25ಕ್ಕೆ, ಸಂ.4.10ಕ್ಕೆ, ರಾ.10.10ಕ್ಕೆ, **ಗಾರ್ಗಿ (ಕ):** ಮ.1.15ಕ್ಕೆ, **ಚೇಜ್ (ಕ):** ರಾ.7.05ಕ್ಕೆ.
ಸ್ಕ್ರೀನ್ 4	**ಪದ್ಮಾವತಿ (ಕ):** ಬೆ.10.50ಕ್ಕೆ, **ಕರ್ಮಣ್ಯೇ ವಾಧಿಕಾರಸ್ತೆ (ಕ):** ಮ.1.40ಕ್ಕೆ, **ದಿ ವಾರಿಯರ್ (ತೆ):** ಸಂ.4.15ಕ್ಕೆ, **ಬೆಂಕಿ (ಕ):** ರಾ.7.25ಕ್ಕೆ, **ಓ ಮೈ ಲವ್ (ಕ):** ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	**ಚೇಜ್ (ಕ):** ಬೆ.10.45ಕ್ಕೆ, ಸಂ.4ಕ್ಕೆ, **ಕರ್ಮಣ್ಯೇ ವಾಧಿಕಾರಸ್ತೆ (ಕ):** ಮ.1.30ಕ್ಕೆ, **ಪೆಟ್ರೋಮ್ಯಾಕ್ಸ್ (ಕ):** ಸಂ.6.45ಕ್ಕೆ, **ಮೈ ಡಿಯರ್ ಭೂತ್ (ತ):** ರಾ.9.20ಕ್ಕೆ.
ಸ್ಕ್ರೀನ್ 2	**ಪೆಟ್ರೋಮ್ಯಾಕ್ಸ್ (ಕ):** ಬೆ.10.45ಕ್ಕೆ, ಮ.1.30ಕ್ಕೆ, **ಗಾರ್ಗಿ (ಕ):** ಸಂ.4.05ಕ್ಕೆ, **ಬೆಂಕಿ (ಕ):** ಸಂ.6.50ಕ್ಕೆ, **ಲಡ್ಕಿ (ಹಿಂ):** ರಾ.9.15ಕ್ಕೆ.
ಸ್ಕ್ರೀನ್ 3	**ಗಾರ್ಗಿ (ಕ):** ಮ.1.30ಕ್ಕೆ, **777 ಚಾರ್ಲಿ (ಕ):** ರಾ.7.45ಕ್ಕೆ.
ಸ್ಕ್ರೀನ್ 4	**ದಿ ವಾರಿಯರ್ (ತೆ):** ಬೆ.10.30ಕ್ಕೆ, ಸಂ.6.20ಕ್ಕೆ, ರಾ.9.20ಕ್ಕೆ, **ಬೆಂಕಿ (ಕ):** ಮ.1.30ಕ್ಕೆ, **ಜುಡಾ ಹೊಕೆ ಬೈ (ಹಿಂ):** ಸಂ.4ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357088

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಬೈರಾಗಿ (ಕ): ಬೆ.10ಕ್ಕೆ, ಮ.12.15ಕ್ಕೆ, ಮ.1ಕ್ಕೆ, ರಾ.7.20ಕ್ಕೆ, ರಾ.10.15ಕ್ಕೆ, **777 ಚಾರ್ಲಿ (ಕ):** ಮ.3.55ಕ್ಕೆ, ಸಂ.6.50ಕ್ಕೆ, ರಾ.10.15ಕ್ಕೆ, **ಹರಿಕಥೆ ಅಲ್ಲ ಗಿರಿಕಥೆ (ಕ):** ಸಂ.4.05ಕ್ಕೆ, **ತ್ರಿವಿಕ್ರಮ (ಕ):** ಮ.12.50ಕ್ಕೆ, **ಮಿನಿಯನ್ಸ್ (3ಡಿ)(ಇಂ):** ಬೆ.10.05ಕ್ಕೆ, ಮ.3.30ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, ರಾ.10ಕ್ಕೆ, **ರಾಷ್ಟ್ರ ಕವಚ ಓಂ(ಹಿಂ):** ಬೆ.9.40ಕ್ಕೆ, ಮ.12.40ಕ್ಕೆ, ರಾ.7ಕ್ಕೆ, ರಾ.10.10ಕ್ಕೆ, **ಜಗ್‌ಜಗ್ ಜೀಯೊ (ಹಿಂ):** ಮ.12.15ಕ್ಕೆ, **ಪಕ್ಕ ಕಮರ್ಷಿಯಲ್ (ತೆ):** ಬೆ.9ಕ್ಕೆ, ಸಂ.4.40ಕ್ಕೆ, ಸಂ.6.55ಕ್ಕೆ, ರಾ.10ಕ್ಕೆ, **ರಾಕೆಟ್ರಿ (ತ):** ಮ.3.10ಕ್ಕೆ, **ವಿಕ್ರಂ (ತ):** ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಾರಿಯರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಚಾರ್ಲಿ–777 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಖುದಾಫಿಸ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಪೆಟ್ರೋಮ್ಯಾಕ್ಸ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆಟ್ರೋಮ್ಯಾಕ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಗಾರ್ಗಿ (ಕ)	4 ಪ್ರದರ್ಶನಗಳು
ಸಂಗಂ	
ಬೈರಾಗಿ (ಕ)	4 ಪ್ರದರ್ಶನಗಳು
ಲಿಡೋ	
ಬೆಂಕಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ದಿ ವಾರಿಯರ್ (ತ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಶುಗರ್‌ಲೆಸ್, ತೂತುಮಡಿಕೆ (ಕ)	2 ಪ್ರದರ್ಶನಗಳು

ಶ್ರೀರಂಗರಾಜಪುರ ಶಾಲೆಗೆ ಶುದ್ಧ ಕುಡಿಯುವ ನೀರಿನ ಯಂತ್ರ ಕೊಡುಗೆ

ನೀರಿನ ಗುಣಮಟ್ಟ ಅರಿತು ಉಪಯೋಗಿಸುವ ಅಗತ್ಯತೆ ಇದೆ



ತಿ.ನರಸೀಪುರ, ಜು.20– ಕುಡಿಯುವ ನೀರು ಪ್ರತಿಯೊಬ್ಬರಿಗೂ ಅತಿ ಅಮೂಲ್ಯ ಮತ್ತು ಮುಖ್ಯ. ಆದರೆ ಅದು ನಮ್ಮ ದೇಹಕ್ಕೆ ಹಿತವಾಗಿರುವುದರ ಜತೆಗೆ ಕೆಲವೊಂದು ಕಾಯಿಲೆಗಳನ್ನು ತರುವ ಪ್ರಸಂಗವೂ ನಡೆಯುತ್ತಿದೆ. ಹೀಗಾಗಿ ನಾವು ನೀರು ಕುಡಿಯುವ ಸಂದರ್ಭದಲ್ಲಿ ಅದು ಶುದ್ಧವೋ, ಕಲುಷಿತವೋ ಎಂಬುದನ್ನು ಖಚಿತಪಡಿಸಿಕೊಂಡು ಬಳಿಕ ಸೇವನೆ ಮಾಡುವುದು ಸೂಕ್ತ ಎಂದು ಎಸ್ಸಿ, ಎಸ್ಟಿ ಗುತ್ತಿಗೆದಾರ ಸಂಘದ ಉಪಾಧ್ಯಕ್ಷ ಹಾಗೂ ಬಿಜೆಪಿ ಮುಖಂಡ ಶ್ರೀರಂಗರಾಜಪುರ ಎಂ.ಸಿದ್ದರಾಜು ತಿಳಿಸಿದ್ದಾರೆ.

ಬ್ಯಾಂಕ್ ಆಫ್ ಬರೋಡದ 115 ನೇ ವರ್ಷದ ಸಂಸ್ಥಾಪನಾ ದಿನದ ಅಂಗವಾಗಿ ಬ್ಯಾಂಕಿನ ಕಗ್ಗಲೀಪುರ ಶಾಖೆಯು ಗ್ರಾಮದ ತಾಲೂಕಿನ ಶ್ರೀರಂಗರಾಜ ಪುರ ಸರ್ಕಾರಿ ಪ್ರಾಥಮಿಕ ಶಾಲೆಗೆ ನೀಡಲಾದ ವಾಟರ್ ಪ್ಯೂರಿ ಫೈಯರ್ (ಶುದ್ಧ ಕುಡಿಯುವ ನೀರಿನ ಯಂತ್ರ) ಯಂತ್ರವನ್ನು ಶಾಲೆಯ ಮುಖ್ಯಸ್ಥರಿಗೆ ಹಸ್ತಾಂತರಿಸಿ ಅವರು ಮಾತನಾಡಿದರು.

ನೀರಿನಲ್ಲಿರುವ ಮಣ್ಣಿನ ಅಂಶ, ಬ್ಯಾಕ್ಟೀರಿಯಾಗಳನ್ನು ಕೊಲ್ಲಲು ಶುದ್ಧೀಕರಣ ಯಂತ್ರಗಳು ಸಹಾಯಕವಾಗಿವೆ. ವ್ಯಕ್ತಿಯ ದೇಹದಲ್ಲಿ ಶೇ. 72 ನೀರಿನ ಅಂಶ ಇರುವ ಕಾರಣ ಅದನ್ನು ಕಾಯ್ದುಕೊಳ್ಳಲು ನಾವು ಹೆಚ್ಚು ನೀರನ್ನು ಕುಡಿಯಬೇಕಾಗುತ್ತದೆ. ಅದರಲ್ಲೂ ಕುಡಿಯುವ ನೀರಿನ ಶುದ್ಧತೆಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕಾಗುತ್ತದೆ. ಒಂದು ಅಧ್ಯಯನದ ಪ್ರಕಾರ ವ್ಯಕ್ತಿಯ 10 ಕಾಯಿಲೆಗಳಲ್ಲಿ 8 ಕಾಯಿಲೆಗಳು ನೀರಿನ ಕಾರಣದಿಂದಲೇ ಬರುತ್ತವೆ ಎನ್ನಲಾಗು ತ್ತದೆ. ಹೀಗಾಗಿ ಶುದ್ಧೀಕರಿಸಿದ ನೀರು ಕುಡಿ ಯುವುದು ಅತಿ ಅಗತ್ಯವಾಗಿದೆ ಎಂದರು. ಬ್ಯಾಂಕ್ ಆಫ್ ಬರೋಡಾದ ವ್ಯವಸ್ಥಾಪಕ ಕೆ.ಸಿ.ಗೋಪಾಲ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಬ್ಯಾಂಕಿನ ಸಹ ವ್ಯವಸ್ಥಾಪಕ ಲಕ್ಷ್ಮಣ್,ಸಿಬ್ಬಂದಿಗಳಾದ ಆರಾಧ್ಯ, ಯೋಗೇಶ್, ಎಸ್ ಡಿಎಂಸಿ ಅಧ್ಯಕ್ಷ ರಾಮು, ಕಗ್ಗಲೀಪುರ ಸಿದ್ದರಾಮು, ವೆಂಕಟೇಶ್, ಶಾಲೆಯ ಮುಖ್ಯ ಶಿಕ್ಷಕ ಮಂಜುನಾಥ್, ಶಿಕ್ಷಕಿ ಶೆರ್ಲಿ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಮಾಚನಾಯಕನಹಳ್ಳಿ ಹಾಲು ಉತ್ಪಾದಕರ ಸಂಘಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಹೆಚ್.ಡಿ.ಕೋಟೆ, ಜು.20– ತಾಲೂಕಿನ ಮಾಚನಾಯಕನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಬಿ.ಪಿ.ದಯಾನಂದ ಮತ್ತು ಉಪಾಧ್ಯಕ್ಷರಾಗಿ ನಾರಾಯಣ ಶೆಟ್ಟಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಾಲು ಉತ್ಪಾದಕರ ಸಹಕಾರ ಸಂಘದ 12 ನಿರ್ದೇಶಕರನ್ನು ಒಳಗೊಂಡಿರುವ 5 ವರ್ಷಗಳ ಅವಧಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಸೋಮವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಬಿ.ಪಿ.ದಯಾನಂದ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ನಾರಾಯಣ ಶೆಟ್ಟಿ ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆ ಎಂದು ಚುನಾವಣಾಧಿಕಾರಿ ಸುರೇಖಾ ಘೋಷಣೆ ಮಾಡಿದರು. ನಿರ್ದೇಶಕರಾದ ಗೋಪಮ್ಮ, ಗೋಪಾಲ ಶೆಟ್ಟಿ, ಗೌರಮ್ಮ, ಜಯಮ್ಮ, ಮಹದೇವಪ್ಪ, ರವಿಪ್ರಕಾಶ್, ರಾಜಪ್ಪ, ಬಿ.ಎಸ್.ವೀರಪ್ಪ, ಸುರೇಂದ್ರ, ಯಜ್ಞೂರಯ್ಯ, ಮುಖಂಡರಾದ ಆಲತ್ತಾಳ ಹುಂಡಿ ಮುತ್ತಣ್ಣ, ಕಾರ್ಯದರ್ಶಿ ಮುತ್ತು, ಹಾಲು ಪರೀಕ್ಷಕಿ ಶಿವಮ್ಮ ಇದ್ದರು.

ಎಲ್ಲಾ ತಾಲೂಕುಗಳಲ್ಲಿ ವೈನ್‌ಸ್ಟೋರ್ ಜಾಸ್ತಿಯಾಗಿದೆ, ನಂ.ಗೂಡಲ್ಲಿ ಇದ್ದದರಲ್ಲೇ ಒಂದು ಕಡಿಮೆಯಾಗಿದೆ

ನಂ.ಗೂಡಲ್ಲಿ ಹೆಚ್ಚು ವೈನ್‌ಸ್ಟೋರ್ ಸ್ಥಾಪನೆಯೇ ಶಾಸಕರ ಸಾಧನೆ ಎಂಬ ಧ್ರುವ ಹೇಳಿಕೆಗೆ ಶಾಸಕ ಹರ್ಷವರ್ಧನ್ ಟಾಂಗ್

ನಂಜನಗೂಡು, ಜು.20– ನಂಜನಗೂಡು ಕ್ಷೇತ್ರದಲ್ಲಿ ಹೆಚ್ಚು ವೈನ್ ಸ್ಟೋರ್ ಸ್ಥಾಪನೆಯೇ ಶಾಸಕರ ಸಾಧನೆ ಎಂಬ ಮಾಜಿ ಸಂಸದ ಆರ್. ಧ್ರುವನಾರಾಯಣ್ ಅವರ ಹೇಳಿಕೆಗೆ ತಿರುಗೇಟು ನೀಡಿರುವ ಶಾಸಕ ಬಿ. ಹರ್ಷವರ್ಧನ್, ಪೊಲೀಸ್ ಮಾಹಿತಿದಾರರಾದ ಮಾಜಿ ಸಂಸದರಿಗೆ ಮಾಹಿತಿ ಕೊರತೆಯಿದೆ ಮೊದಲು ಗಾಳಿಯಲ್ಲಿ ಗುಂಡು ಹಾರಿಸುವುದನ್ನು ಬಿಟ್ಟು ಮಾಹಿತಿ ತಿಳಿದು ಮಾತನಾಡುವುದನ್ನು ಕಲಿಯಿರಿ ಎಂದಿದ್ದಾರೆ.



ಯಾತ್ರೀಭವನ್ ಕಲ್ಯಾಣ ಮಂಟಪದಲ್ಲಿ ಪತ್ರಿಕಾಗೋಷ್ಠಿ ಯಲ್ಲಿ ಮಾತನಾಡಿದ ಅವರು, ನಿಮ್ಮ ಮಾತುಗಳು ನನಗೆ ಬಹಳ ಚುಚ್ಚಿವೆ. ಕ್ಷೇತ್ರದಲ್ಲಿ ನಾನು ಸಾಧನೆ ಮಾಡಲು ಅಷ್ಟೆ ಬಂದಿಲ್ಲ, ದಾಖಲೆ ಮಾಡಲು ಬಂದಿದ್ದೇನೆ. ನಿಮ್ಮ ಹೇಳಿಕೆಗೆ ನಾನು ದಾಖಲೆ ಸಮೇತ ಉತ್ತರ ನೀಡುತ್ತಿದ್ದೇನೆ ಎಂದರು.

2017 ರಿಂದ ಇಲ್ಲಿಯವರೆಗೆ ಕೆ.ಆರ್.ನಗರದಲ್ಲಿ 28 ಇದ್ದ ಬಾರ್‌ಗಳು 38 ಆಗಿದೆ. ಪಿರಿಯಾಪಟ್ಟಣದಲ್ಲಿ 31 ರಿಂದ 55ಕ್ಕೆ, ಹುಣಸೂರಿನಲ್ಲಿ 45 ರಿಂದ 57ಕ್ಕೆ, ಟಿ.ನರಸೀಪುರದಲ್ಲಿ 30 ರಿಂದ 35ಕ್ಕೆ, ಎಚ್.ಡಿ.ಕೋಟೆಯಲ್ಲಿ 35 ರಿಂದ 41ಕ್ಕೆ, ವರುಣಾದಲ್ಲಿ 5 ರಿಂದ 9ಕ್ಕೆ ಏರಿಕೆಯಾಗಿದೆ ಆದರೆ ನಂಜನಗೂಡು ಕ್ಷೇತ್ರದಲ್ಲಿ 2017ರಲ್ಲಿ 28 ಬಾರ್‌ಗಳಿದ್ದವು. ಈಗ 27 ಬಾರ್‌ಗಳಿವೆ ಇದ್ದ ಬಾರುಗಳ ಸಂಖ್ಯೆಯಲ್ಲಿ ಒಂದು ಕಡಿಮೆಯಾಗಿದೆ. ಜೊತೆಗೆ ನನಗೆ ಪ್ರತಿ ವರ್ಷವೂ ಕೂಡ 6 ಎಂಎಸ್‌ಐಎಲ್ ಮಾರಾಟ ಕೇಂದ್ರವನ್ನು ತೆರೆಯುವಂತೆ ಒತ್ತಡವಿದೆ. ಆದರೆ ನಾನೇ ಅದನ್ನು ತಡೆಹಿಡಿದಿದ್ದೇನೆ. ಇದು ಸರ್ಕಾರಿ ದಾಖಲೆ. ಬೇಕಿದ್ದರೆ ಆರ್‌ಟಿಐನಿಂದ ದಾಖಲೆ ಪಡೆದು ಕೊಳ್ಳಿ ಎಂದು ವಾಗ್ದಾಳಿ ನಡೆಸಿದರು.

ಕ್ಷೇತ್ರದಲ್ಲಿ ನುಗು ಏತ ನೀರಾವರಿ ಯೋಜನೆ, ಬೆಳ್ಳಿರಥ, ಅತಿಥಿಗೃಹ ಕಾಮಗಾರಿಗಳಿಗೆ ಮುಖ್ಯಮಂತ್ರಿಗಳಿಂದ ಕಾರ್ತಿಕ ಮಾಸದಲ್ಲಿ ಪೂಜೆ ನಡೆಸಲಾಗುವುದು. ಯಡಿಯಾಲ ಭಾಗದ ಕೆರೆ ತುಂಬಿಸುವ ಯೋಜನೆಗೆ 40 ಕೋಟಿ ಬಿಡುಗಡೆಯಾಗಿದ್ದು, ಅದು ಕ್ಯಾಬಿನೆಟ್‌ನಲ್ಲಿ ಅನುಮೋದನೆಯಾಗಬೇಕಿದೆ. ಹೊಸ ದಾಗಿ 27 ಕೋಟಿ ವೆಚ್ಚದಲ್ಲಿ ಯುಜಿಡಿ ಕಾಮಗಾರಿ ಪ್ರಗತಿಯಲ್ಲಿದೆ. ಉಪ್ಪಾರ ಭವನಕ್ಕೆ 2 ಕೋಟಿ, ಬಸವ ಭವನಕ್ಕೆ 2.5 ಕೋಟಿ, ಬಾಬು ಜಗಜೀವನ ರಾಂ ಭವನಕ್ಕೆ ಅನುದಾನ ನೀಡಿದ್ದೇನೆ. ಇವು ಶಾಶ್ವತವಾದ ಕೆಲಸಗಳಾಗಿದ್ದು, ದಾಖಲೆಯಾಗಲಿವೆ ಎಂದು ಅವರು ತಮ್ಮ ಅವಧಿಯ ಕೊಡುಗೆಗಳನ್ನು ವಿವರಿಸಿದರು.

ಇನ್ನು ಸಾಮಾನ್ಯ ಬೀದಿ ಸಿಸಿ ರಸ್ತೆಗೆ ಅನುದಾನ ತಂದಿದ್ದೇನೆ. ಮೂಲ ರಾಘವೇಂದ್ರ ಮಠಕ್ಕೆ 2 ಕೋಟಿ ಅನುದಾನ ನೀಡಿದ್ದೇನೆ. ಶಾಲಾ ಕಾಲೇಜುಗಳಿಗೆ 15 ಕೋಟಿ ಅನುದಾನ ನೀಡಿ ಮೂಲ ಸೌಕರ್ಯ ಒದಗಿಸಿದ್ದೇನೆ. ನೀವು 2 ಅವಧಿ ಸಂಸದರಾಗಿ ಎಷ್ಟು ಅನುದಾನ ಕೊಟ್ಟಿದ್ದೀರಿ? ಅದನ್ನು ಮೊದಲು ಹೇಳಿ. ತಾಲೂಕಿನ ಹೆಮ್ಮರಗಾಲ ಗ್ರಾಮಕ್ಕೆ ತೆರಳಿ ನಿಮ್ಮ ಕಾಲಾವಧಿಯಲ್ಲಿ ಹೇಗಿತ್ತು. ಈಗ ಎಷ್ಟು ಕೆಲಸವಾಗಿದೆ, ಅಲ್ಲಿನ ಅಭಿವೃದ್ಧಿಯನ್ನು ನೋಡಿ ಅಲ್ಲಿ ನಿಮಗೆ ಪಕ್ಷದ ಬಲವಿಲ್ಲ. ಆದ್ದರಿಂದ ನೀವು ಅಲ್ಲಿಗೆ ಭೇಟಿ ನೀಡಿಲ್ಲ ಎಂದು ಟೀಕಾಪ್ರಹಾರ ನಡೆಸಿದರು.

ಶಾಸಕರ ವರ್ತನೆಯಿಂದ ಬಿಜೆಪಿ ತೊರೆದು ಹಲವಾರು ಮುಖಂಡರು ಕಾಂಗ್ರೆಸ್ ಪಕ್ಷಕ್ಕೆ ಬರುತ್ತಾರೆಂದು ಹೇಳಿಕೆ ನೀಡಿದ್ದೀರಿ. ಮೊದಲು ನಿಮ್ಮ ಪಕ್ಷ ನಿಮ್ಮ ಮನೆಯನ್ನೇ ಸರಿಪಡಿಸಿಕೊಳ್ಳಿ. ನಿಮ್ಮ ಪಕ್ಷ 3 ಬಾಗಿಲು, 3 ಬಣಗಳಾಗಿದೆ 3 ಬಣಗಳೂ ಸೇರಿ ಅಭ್ಯರ್ಥಿ ಘೋಷಣೆ ಮಾಡಿ. ನಾನು ಸಿದ್ಧನಿದ್ದೇನೆ. ಕ್ಷೇತ್ರದಲ್ಲಿ ನಾನು ಮಾಡಿರುವ ಕೆಲಸಗಳೇ ನನಗೆ ಶ್ರೀರಕ್ಷೆಯಾಗಲಿದ್ದು, ನನ್ನ ಸಾಧನೆ ಯನ್ನು ಮುಂದಿಟ್ಟು ಕೊಂಡು ಚುನಾವಣೆ ಎದುರಿಸುತ್ತೇನೆ ಎಂದು ಸವಾಲು ಹಾಕಿದರು.

ವಿಧಾನಸೌಧದಲ್ಲಿ ವಿ.ಶ್ರೀನಿವಾಸಪ್ರಸಾದ್, ಸಿದ್ದರಾಮಯ್ಯ ಬೇಟಿಯಾಗಿದ್ದನ್ನು ನೀವು ಸಹಿಸಲು ಆಗದೆ ಏನೇನೋ ಹೇಳಿಕೆ ನೀಡಿದ್ದೀರಿ. ಮೊದಲು ಯೋಚನೆ ಮಾಡಿ ದಾಖಲೆ ಸಮೇತ ಮಾತನಾಡುವುದನ್ನು ಕಲಿಯಿರಿ, ನಿಮ್ಮ ಹೇಳಿಕೆಗೆ ಮುಖಂಡರಿಂದ ಉತ್ತರ ಕೊಡಿಸಬಹುದಿತ್ತು. ಆದರೆ ನಿಮ್ಮ ಮೇಲೆ ಗೌರವವಿದ್ದು, ನಿಮ್ಮ ಸ್ಥಾನಕ್ಕೆ ಅಗೌರವ ತೋರಿದಂತಾಗುತ್ತದೆ. ನಿಮ್ಮಿಂದಲೂ ಸಹ ಅನೇಕ ವಿಷಯಗಳನ್ನು ಕಲಿತಿದ್ದೇನೆ ಎಂಬ ಕಾರಣಕ್ಕೆ ನಾನೇ ಉತ್ತರ ಕೊಡಬೇಕಾಯಿತು ಎಂದರು. ಇದೇ ಸಂಧರ್ಭದಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್ ಹೊರಳವಾಡಿ, ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ, ರಾಜ್ಯ ಕಾರ್ಯಕಾರಿಣಿ ಸದಸ್ಯ ಕುಂಬ್ರಳ್ಳಿ ಸುಬ್ಬಣ್ಣ, ತಾಪಂ ಮಾಜಿ ಸದಸ್ಯರಾದ ಬಿ.ಎಸ್.ರಾಮು, ಶಿವಣ್ಣ, ನಗರಸಭಾಧ್ಯಕ್ಷ ಎಚ್.ಎಸ್.ಮಹದೇವಸ್ವಾಮಿ ಸೇರಿದಂತೆ ಬಿಜೆಪಿ ಕಾರ್ಯಕರ್ತರು ಇದ್ದರು.

ಓಕಳಿ ಮಹೋತ್ಸವ

ಮಲ್ಕುಂಡಿ, ಜು.20– ಗ್ರಾಮದಲ್ಲಿ ಶ್ರೀ ಕೆಂಡದ ಬಸವೇಶ್ವರ ಓಕಳಿ ಮಹೋತ್ಸವವನ್ನು ಜು.22 ರಂದು ಏರ್ಪಡಿಸಲಾಗಿದೆ.

ಅಂದು ಬೆಳಗ್ಗೆ 5.30 ರಿಂದ 7.30 ರವರೆಗೆ ಹೋಮ ಪುಣ್ಯಾಹ, ಬೆಳಗ್ಗೆ 9.15ಕ್ಕೆ ಬಸವೇಶ್ವರಸ್ವಾಮಿಗೆ ಅಭಿಷೇಕ, ಬೆಳಗ್ಗೆ 10 ರಿಂದ 10.50ರವರೆಗೆ 5 ನಂದಿ ಧ್ವಜ ಹಾಗೂ ಕೊಂಡ ಮಹೋತ್ಸವವನ್ನು ಏರ್ಪಡಿಸಲಾಗಿದೆ. ಮಧ್ಯಾಹ್ನ 1 ರಿಂದ 6 ರವರೆಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಶ್ರೀ ಕೆಂಡದ ಬಸವೇಶ್ವರಸ್ವಾಮಿಯ ಉತ್ಸವವನ್ನು ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಹಾಲು ಉತ್ಪಾದಕರ ಮಕ್ಕಳಿಗೆ ಹಾಸ್ಟೆಲ್ ಸೌಲಭ್ಯ

ಕಂಪಲಾಪುರ ಡೇರಿ ವಾರ್ಷಿಕ ಸಭೆಯಲ್ಲಿ ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ

ಕಂಪಲಾಪುರ, ಜು.20– ರಾಜ್ಯದಲ್ಲೇ ಪ್ರಪ್ರಥಮ ಬಾರಿಗೆ ಹಾಲು ಉತ್ಪಾದಕರ ಮಕ್ಕಳಿಗೆ ಅನುಕೂಲಕ್ಕಾಗಿ ಮೈಸೂರಿನಲ್ಲಿ ಹಾಸ್ಟೆಲ್ ಸೌಲಭ್ಯ ಕಲ್ಪಿಸಲಾಗಿದೆ ಎಂದು ಮೈಮುಲ್ ಅಧ್ಯಕ್ಷ ಪಿ.ಎಂ. ಪ್ರಸನ್ನ ತಿಳಿಸಿದರು.



ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸುಮಾರು 11 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಈ ಕಟ್ಟಡದಲ್ಲಿ ಒಟ್ಟು 250 ಮಕ್ಕಳಿಗೆ ಅನುಕೂಲವಾಗಲಿದೆ. ಗುಜರಾತ್‌ಗೆ ಹೋಲಿಸಿದರೆ ನಮ್ಮ ರಾಜ್ಯ ಹಾಲು ಉತ್ಪಾದನೆಯಲ್ಲಿ 2ನೇ ಸ್ಥಾನದಲ್ಲದೆ.ರಾಜ್ಯದಲ್ಲಿ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಹಾಲು ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದ್ದು ಈಗಾಗಲೇ 1.90 ಲಕ್ಷ ಲೀ ಹಾಲು ಪಿರಿಯಾಪಟ್ಟಣದಲ್ಲಿ ಉತ್ಪಾದನೆಯಾಗುತ್ತಿದೆ. 2 ಲಕ್ಷಕ್ಕೆ ಗುರಿ ಹೊಂದಲಾಗಿದೆ ಎಂದರು.

ಪಶು ಆಹಾರ ಘಟಕಕ್ಕೆ ಭೂಮಿ ಖರೀದಿ: ಜಿಲ್ಲೆಯಲ್ಲಿ ಅತಿ ಹೆಚ್ಚು ಜೋಳವನ್ನು ಪಿರಿಯಾಪಟ್ಟಣದಲ್ಲಿ ಬೆಳೆಯಲಾಗುತ್ತಿದ್ದು ಇಲ್ಲೇ ಒಂದು ಫೀಡ್ಸ್ ಫ್ಯಾಕ್ಟರಿ ತೆರೆಯುವ ಗುರಿ ಹೊಂದಿದ್ದು, ಈಗಾಗಲೇ ಪಂಚವಳ್ಳಿ ಹತ್ತಿರ ಭೂಮಿ ಖರೀದಿ ಮಾಡಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರ ಮುಖೇನ ಇದನ್ನು ಕಾರ್ಯರೂಪಕ್ಕೆ ತರಲಾಗುವುದು. ಇದರಿಂದ ರೈತರಿಗೆ ಉತ್ತಮ ಬೆಲೆ ಸಿಗುವ ಜೊತೆಗೆ ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯಲಿದೆ.

ನಿರ್ದೇಶಕ ಕಟ್ಟೆ ಜಯಣ್ಣ ಮಾತನಾಡಿ, ಈಗಿರುವ ಬಿಎಂಸಿ 3000 ಲೀ ಸಾಮರ್ಥ್ಯ ಹೊಂದಿದ್ದು, ಅದು ಸಾಕಾಗುತ್ತಿಲ್ಲ. 5000 ಲೀ ಟ್ಯಾಂಕ್ ಅವಶ್ಯಕತೆ ಇದೆ, ಜೊತೆಗೆ ಒಂದು ಸಭಾಂಗಣವನ್ನು ನಿಮ್ಮ ಅವಧಿಯಲ್ಲಿ ಮಾಡಿಕೊಡಿ ಎಂದಾಗ ಟ್ಯಾಂಕ್ ಜೊತೆಗೆ ಸಭಾಂಗಣಕ್ಕೆ 5 ಲಕ್ಷ ಕೊಡುವುದಾಗಿ ತಿಳಿಸಿದರು. ಮೈಮುಲ್ ನಿರ್ದೇಶಕ ರಾಜೇಂದ್ರಪ್ಪ ಮಾತನಾಡಿ, ಸಂಘದಲ್ಲಿ ಏನೇ ಏರುಪೇರುಗಳಿದ್ದರೂ ಇಂತಹ ಸಭೆಗಳಲ್ಲಿ ಚರ್ಚಿಸಿ ಪರಿಹಾರ ಕಂಡುಕೊಳ್ಳಿ, ಉತ್ಪಾದಕರ ಭವಿಷ್ಯ ರೂಪಿಸುವ ಗುರಿ ಒಕ್ಕೂಟದ್ದಾಗಿದೆ ಎಂದರು.

ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ನಿಶ್ಚಿತಾ, ಶಿವಕುಮಾರ್ (SSLC), ಧನಲಕ್ಷ್ಮಿ, ಯಶಸ್ವಿನಿ (PUC)ರವರಿಗೆ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು.

ಸಂಘಕ್ಕೆ ಅತಿ ಹೆಚ್ಚು ಹಾಲು ಪೂರೈಸಿದ ಕೆ.ಎಸ್.ಪ್ರಕಾಶ್, ಸುನಂದಮ್ಮ, ಅತಿ ಹೆಚ್ಚು ಹಾಲು ಖರೀದಿ ಮಾಡಿದ ಎ.ಸಿ.ರಾಜಶೇಖರ್, ಟೀ ಕ್ಯಾಂಟಿನ್ ಮಂಜು ಅವರುಗಳಿಗೆ ಬಹುಮಾನ ನೀಡಿ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಅಧ್ಯಕ್ಷ ಕೆ.ಎಸ್. ಕೃಷ್ಣೇಗೌಡ, ಉಪಾಧ್ಯಕ್ಷ ಶಿವಣ್ಣ, ಮುಖ್ಯ ಕಾರ್ಯನಿರ್ವಾಹಕ ಕಿಶೋರ್, ನಿರ್ದೇಶಕರಾದ ಕೆ.ಎನ್.ಜಯಣ್ಣ, ಕೃಷ್ಣ, ಯ.ಸ್ವಾಮಿ, ನಜೀಬ್, ಚಲುವೇಗೌಡ, ಶಿವರಾಮೇಗೌಡ, ಸ್ವಾಮಿ, ಸಾಕಮ್ಮ, ಜಯಮ್ಮ, ವಿಸ್ತರಣಾಧಿಕಾರಿ ನಿಶ್ಚಿತ್, ನಂದಿನಿ, ಪಿಎಸಿಎಸ್ ಮಾಜಿ ಅಧ್ಯಕ್ಷ ಕೆ.ಕುಮಾರ್, ನಾಗೇಗೌಡ, ರವಿ, ಸಂತೋಷ್, ಕೊಪ್ಪಲು ಡೇರಿ ಅಧ್ಯಕ್ಷ ಕೆ.ಎಂ.ಲಕ್ಷ್ಮಣ್, ಸಿಇಓ ಲೋಕೇಶ್, ಮಾಜಿ ನಿರ್ದೇಶಕ ಪ್ರಕಾಶ್‌ಗೌಡ, ಕೆ.ಪಿ.ನಾರಾಯಣ್, ಸಿಬ್ಬಂದಿ ರೇವಣ್ಣ, ಮಂಜು, ಸಹಾಯಕ ಎನ್.ರೇವಣ್ಣ ಮತ್ತಿತರರು ಹಾಜರಿದ್ದರು.

ಶಕುಂತಲಾ ನಿಧನ



ಸರಗೂರು, ಜು.20– ಪಟ್ಟಣದ 7ನೇ ವಾರ್ಡಿನ ನಿವಾಸಿ, ವಿಶ್ವಕರ್ಮ ಸಮಾಜದ ಹಿರಿಯ ಚಿನ್ನಬೆಳ್ಳಿ ಉದ್ಯಮಿ ಲೇಟ್ ಪಾಪಾಚಾರ್ ಅವರ ಧರ್ಮಪತ್ನಿ ಶಕುಂತಲಾ (72) ನಿಧನರಾಗಿದ್ದಾರೆ.

ಅನಾರೋಗ್ಯದಿಂದ ಬಳಲುತ್ತಿದ್ದ ಇವರು ಮೈಸೂರಿನ ದಟ್ಟಗಳ್ಳಿಯಲ್ಲಿರುವ ತಮ್ಮ ಪುತ್ರ ಪಿ.ಗೋಪಾಲಕೃಷ್ಣ ಅವರ ಮನೆಯಲ್ಲಿದ್ದುಕೊಂಡು ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಬುಧವಾರ ಬೆಳಿಗ್ಗೆ ನಿಧನರಾಗಿದ್ದು, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ದಿವಂಗತರ ದ್ವಿತೀಯ ಪುತ್ರ ಪಿ. ರವಿ ಜೂ.ವಿಷ್ಣುವರ್ಧನ್‌ರಾಗಿ ಮೈಸೂರು ಸೇರಿದಂತೆ ರಾಜ್ಯದ ನಾನಾ ಭಾಗಗಳಲ್ಲಿ ವಿವಿಧ ಕಾರ್ಯಕ್ರಮದಲ್ಲಿ ಹಾಡು, ನಟನೆ ಮೂಲಕ ಗುರುತಿಸಿಕೊಂಡಿದ್ದಾರೆ. ಇವರ ಅಂತ್ಯಕ್ರಿಯೆ ಬುಧವಾರ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಲ್ಲಿ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.




ತಿ.ನರಸೀಪುರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಬಿಜೆಪಿ ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಅಭಿಮಾನಿ ಬಳಗದಿಂದ ಸಾರ್ವಜನಿಕರಿಗೆ ಹಣ್ಣು ಹಂಪಲು ವಿತರಿಸಲಾಯಿತು. ಬಿಜೆಪಿ ಹಿರಿಯ ಮುಖಂಡರಾದ ಕರೋಹಟ್ಟಿ ಮಹದೇವಯ್ಯ, ಜಿಲ್ಲಾಧ್ಯಕ್ಷ ಸಿ. ಎಂ.ಮಹದೇವಯ್ಯ ಮೈಸೂರು ಗ್ರಾಮಾಂತರ ಕಾರ್ಯದರ್ಶಿ ತೊಟ್ಟವಾಡಿ ಎಂ. ಅನಿಲ್ ಕುಮಾರ್, ತಾಲೂಕು ಎಸ್ ಸಿ ಮೋರ್ಚಾ ಅಧ್ಯಕ್ಷ ಶಿವಕುಮಾರ್ ಬಡ್ಡು, ರಾಜ್ಯ ಕಾರ್ಯಕಾರಿ ಸದಸ್ಯ ಪರಮಾನಂದ, ಪುರಸಭಾ ಸದಸ್ಯ ಕಿರಣ್, ಸಿ. ಬಿ. ಹುಂಡಿ ಸಿದ್ದು, ಇತರರು ಇದ್ದರು

ನಾಡಹಬ್ಬ ದಸರಾಗೆ ಅಂತಾರಾಷ್ಟ್ರೀಯ ಮೆರಗು

ದೇಶದ ರಾಯಭಾರಿಗಳ ಮೂಲಕ ಪ್ರಚಾರ ವ್ಯವಸ್ಥೆ ಮಾಡಲು ಮುಖ್ಯಮಂತ್ರಿಗಳಲ್ಲಿ ಮನವಿ: ರಾಮದಾಸ್

ಮೈಸೂರು,ಜು.20(ಎಂಟಿವೈ)–ಈ ಸಾಲಿನ ನಾಡಹಬ್ಬ ದಸರಾ ಮಹೋತ್ಸವಕ್ಕೆ ಅಂತಾರಾಷ್ಟ್ರೀಯ ಮೆರಗು ನೀಡುವ ನಿಟ್ಟಿನಲ್ಲಿ ವಿಶ್ವದ ಎಲ್ಲಾ ರಾಷ್ಟ್ರಗಳಲ್ಲೂ ರಾಯಭಾರಿಗಳ ಮೂಲಕ ಪ್ರಚಾರ ನಡೆಸಲು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿರುವುದಾಗಿ ಶಾಸಕ ಎಸ್.ಎ.ರಾಮದಾಸ್ ತಿಳಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪ್ರಸಕ್ತ ಸಾಲಿನ ದಸರಾ ಮಹೋತ್ಸವ ಎರಡು ವಿಚಾರದಲ್ಲಿ ವಿಶೇಷ ಸ್ಥಾನ ಪಡೆಯುತ್ತಿದೆ. ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷ ಕಳೆದಿದ್ದು, ದೇಶದಾದ್ಯಂತ ಆಜಾದಿ ಕಾ ಅಮೃತ ಮಹೋತ್ಸವ ಆಚರಿಸಲಾಗುತ್ತಿದೆ. ಅಲ್ಲದೆ, ಅಂತಾರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಅವರು ಮೈಸೂರಿಗೆ ಆಗಮಿಸಿದ್ದರಿಂದ ಅರಮನೆ ವಿಶ್ವದಲ್ಲಿ ಎಲ್ಲಾ ಕಡೆ ಪ್ರಾತಿನಿಧ್ಯತೆ ಪಡೆದಿದೆ. ಅದೊಂದು ಶೋಕೇಸ್ ಆಗಿದೆ. ಆ ನಿಟ್ಟಿನಲ್ಲಿ ದಸರಾವನ್ನು ಬ್ರಾಂಡ್ ಆಗಿ ಮಾಡಲು ವಿಶ್ವದಾದ್ಯಂತ ಪಸರಿಸಲು ಕ್ರಮ ಕೈಗೊಳ್ಳಬೇಕು. ಎಲ್ಲಾ ದೇಶಗಳಲ್ಲೂ ರಾಯಭಾರಿಗಳ ಮೂಲಕ ದಸರಾ ಮಹೋತ್ಸವದ ಮಾಹಿತಿ ರವಾನಿಸಲು ಕೂಡಲೇ ಸಿಎಂಗಳು ಕೇಂದ್ರ ಸರ್ಕಾರ,



ಪ್ರಧಾನಿ ಹಾಗೂ ವಿದೇಶಾಂಗ ಸಚಿವರೊಂದಿಗೆ ಮಾತನಾಡಲಿದ್ದಾರೆ ಎಂದರು.

ಇತ್ತೀಚಿನ ದಿನಗಳಲ್ಲಿ ಮೈಸೂರಿಗೆ ಬರುವ ವಿದೇಶಿಗರ ಸಂಖ್ಯೆ ಕ್ಷೀಣಿಸುತ್ತಿದೆ. ಈ ಹಿನ್ನೆಲೆಯಲ್ಲಿ ವಿದೇಶಿ ಪ್ರವಾಸಿಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ವಿದೇಶಗಳಿಂದ ಬರುವ ಪ್ರವಾಸಿಗರಿಗೆ ವಿಶೇಷ ಪ್ಯಾಕೇಜ್ ನೀಡಬೇಕಾಗಿದೆ. ಅಲ್ಲದೆ, ಮೈಸೂರಿಗೆ ದಸರಾ ನೋಡಲು ಬರುವ ವಿದೇಶಿಗರಿಗೆ ಆಯ್ದ ಮನೆಗಳಲ್ಲಿ 3–4ದಿನ ವಾಸ್ತವ್ಯ ಹೂಡುವುದಕ್ಕೆ ಅವಕಾಶ ಕಲ್ಪಿಸಿ, ನಮ್ಮ ಸಂಸ್ಕೃತಿ, ಆಚಾರ–ವಿಚಾರ ಹಾಗೂ ಇನ್ನಿತರ ಮಾಹಿತಿ ನೀಡುವುದಕ್ಕೆ ಉದ್ದೇಶಿಸಲಾಗಿದೆ. ಈ ಕುರಿತು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ದೇಶದ ಎಲ್ಲಾ ರಾಜ್ಯಗಳ ರಾಜಧಾನಿಯಲ್ಲೂ ದಸರಾ ರನ್ ಮ್ಯಾರಥಾನ್ ನಡೆಸುವ ಆಲೋಚನೆ ನಮ್ಮ ಮುಂದೆ ಇದೆ. ರಾಜ್ಯದ ಪ್ರವಾಸೋದ್ಯಮ ಇಲಾಖೆಯೂ ವಿವಿಧ ರಾಜ್ಯಗಳ ಪ್ರವಾಸೋದ್ಯಮ ಇಲಾಖೆಯೊಂದಿಗೆ ಕೈಜೋಡಿಸಿ ವಿವಿಧ ಕಾರ್ಯಕ್ರಮಗಳ ಮೂಲಕ ದಸರಾ ಮಹೋತ್ಸವದ ಬಗ್ಗೆ ಪ್ರಚಾರ ಕೈಗೊಂಡು, ಪ್ರವಾಸಿಗರನ್ನು ಆಹ್ವಾನಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

75ನೇ ಸ್ವಾತಂತ್ರ್ಯೋತ್ಸವ ಹಿನ್ನೆಲೆಯಲ್ಲಿ ಜಂಬೂ ಸವಾರಿ ಮೆರವಣಿಗೆಯಲ್ಲಿ ದೇಶದಲ್ಲಿ 75 ವರ್ಷದ ಸಾಧನೆಯನ್ನು ವಿವರಿಸುವ ಚಿಂತನೆ ಇದೆ. ಸೈನ್ಯ, ವಿಜ್ಞಾನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ದೇಶ ಸಾಧಿಸಿರುವ ಸಾಧನೆಯನ್ನು ಜಂಬೂ ಸವಾರಿಯಲ್ಲಿ ಪ್ರದರ್ಶಿಸಲು ಕ್ರಮ ಕೈಗೊಳ್ಳಬೇಕೆಂದು ಮನವಿ ಸಲ್ಲಿಸಿದ್ದೇನೆ. ನಾಡಹಬ್ಬದಲ್ಲಿ ಜನರ ಸಹಭಾಗಿತ್ವ ಅಗತ್ಯ. ಅಲ್ಲದೆ, ಸಿಎಸ್‌ಆರ್ ಫಂಡ್ ಬಳಸಿಕೊಳ್ಳುವ ಆಲೋಚನೆ ಇದೆ. ಸ್ಥಳೀಯ ಕಲಾವಿದರಿಂದ, ಅಂತಾರಾಷ್ಟ್ರೀಯ ಕಲಾವಿದರೂ ಒಳಗೊಂಡಂತೆ ಪ್ರತಿದಿನ ಕಾರ್ಯಕ್ರಮ ಸಾಂಸ್ಕೃತಿಕ ಕಾರ್ಯಕ್ರಮಗಳು ವಿಜೃಂಭಣೆಯಿಂದ ನೆರವೇರಿಸುವುದಕ್ಕೆ ಕ್ರಮ ಕೈಗೊಳ್ಳಲಾಗುತ್ತದೆ. ಈ ಬಾರಿಯ ದಸರಾ ಮಹೋತ್ಸವವನ್ನು ಉದ್ಘಾಟಿಸಲು ಯಾರನ್ನು ಆಹ್ವಾನಿಸಬೇಕು ಎಂದು ಮುಖ್ಯಮಂತ್ರಿಗಳೇ ನಿರ್ಧರಿಸುತ್ತಾರೆ ಎಂದು ತಿಳಿಸಿದರು.

ದಸರಾಗೆ ಬೆಂಗಳೂರು–ಮೈಸೂರು ದಶಪಥ ರಸ್ತೆಯಲ್ಲಿ ಸಂಚಾರ ಭಾಗ್ಯವಿಲ್ಲ!

ಬೆಂಗಳೂರು, ಜು.20–ಮೈಸೂರು–ಬೆಂಗಳೂರು ನಡುವಿನ ಪ್ರಯಾಣದ ಸಮಯವನ್ನು ಗಮನಾರ್ಹವಾಗಿ ಕಡಿಮೆ ಮಾಡುವ ಬಹುನಿರೀಕ್ಷಿತ ದಶಪಥ ರಸ್ತೆ ಕಾಮಗಾರಿ ಸದ್ಯಕ್ಕೆ ಮುಗಿಯುವ ಲಕ್ಷಣ ಕಾಣುತ್ತಿಲ್ಲ.

ಈ ಕಾಮಗಾರಿ ಅಕ್ಟೋಬರ್ ವೇಳೆಗೆ ಸಿದ್ಧವಾಗುವ ಸಾಧ್ಯತೆ ಇಲ್ಲ ಎಂದು ಪಿಡಬ್ಲ್ಯುಡಿ ಸಚಿವ ಸಿಸಿ ಪಾಟೀಲ್ ಹೇಳಿದ್ದಾರೆ. ಬೆಂಗಳೂರಿನ ನೈಸ್ ಪ್ರವೇಶದ್ವಾರದಿಂದ ಮೈಸೂರಿನ ರಿಂಗ್ ರೋಡ್ ಜಂಕ್ಷನ್‌ವರೆಗೆ 117–ಕಿಮೀ ಹೆದ್ದಾರಿಯು ಸರಾಸರಿ ಪ್ರಯಾಣದ ಸಮಯವನ್ನು ಕಡಿತಗೊಳಿಸಲಿದ್ದು, 3 ಗಂಟೆಗಳಿಂದ ಕೇವಲ 90 ನಿಮಿಷಗಳಲ್ಲಿ ಪ್ರಯಾಣಿಸಬಹುದಾಗಿದೆ. ಹತ್ತು ದಿನಗಳ ಮೈಸೂರು ದಸರಾ ಆಚರಣೆಗಳು ಸೆಪ್ಟೆಂಬರ್ 26 ರಿಂದ ಅಕ್ಟೋಬರ್ 5 ರವರೆಗೆ ನಡೆಯಲಿವೆ. ರಾಜ್ಯ ಸರ್ಕಾರವು ಮಹತ್ವಾಕಾಂಕ್ಷೆಯ ಯೋಜನೆಯನ್ನು ಉದ್ಘಾಟಿಸಲು ಪ್ರಧಾನಿ ನರೇಂದ್ರ ಮೋದಿಯವರನ್ನು ಆಹ್ವಾನಿಸಲು ಯೋಜಿಸಿತ್ತು. ದಸರಾ ವೇಳೆಗೆ ಪೂರ್ಣಗೊಳಿಸಲು ಬಯಸಿತ್ತು, ಆದರೆ ಸದ್ಯ ನಡೆಯುತ್ತಿರುವ ಆಮೆಗತಿಯ ಕಾಮಗಾರಿಯಿಂದಾಗಿ ದಸರಾ ಮುನ್ನಕ್ಕೂ ಪೂರ್ಣಗೊಳ್ಳುವ ಸಾಧ್ಯತೆಯಿಲ್ಲ. ರಸ್ತೆ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ, ಆದರೆ ಹೆಚ್ಚಿನ ಸ್ಥಳಗಳಲ್ಲಿ ಫ್ಲೈಓವರ್‌ಗಳು ಮತ್ತು ಅಂಡರ್‌ಪಾಸ್‌ಗಳಂತಹ ರಚನೆಗಳು ಅಪೂರ್ಣವಾಗಿವೆ. ಕಾರಿಡಾರ್‌ನಲ್ಲಿ ಒಂಬತ್ತು ಪ್ರಮುಖ ಸೇತುವೆಗಳು, 44 ಸಣ್ಣ ಸೇತುವೆಗಳು ಮತ್ತು ನಾಲ್ಕು ರೈಲು ಮೇಲ್ಸೇತುವೆಗಳನ್ನು ಹೊಂದಿವೆ. ನಾವು 70 ಪ್ರತಿಶತದಷ್ಟು ಕೆಲಸವನ್ನು ಪೂರ್ಣಗೊಳಿಸಿದ್ದೇವೆ ಮತ್ತು ಉಳಿದವುಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಪ್ರಯತ್ನಿಸುತ್ತಿದ್ದೇವೆ, ದಸರಾ ವೇಳೆಗೆ ಕಾಮಗಾರಿ ಮುಗಿಸಲು ಸಾಧ್ಯವಾಗದಿರಬಹುದು ಎಂದು ಹೆಸರು ಹೇಳಲಿಚ್ಛಿಸದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಾರ್ಚ್‌ನಲ್ಲಿ ಕೇಂದ್ರ ರಸ್ತೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು 10 ಪಥಗಳ ಬೆಂಗಳೂರು–ಮೈಸೂರು ಆರ್ಥಿಕ ಕಾರಿಡಾರ್ ಕುರಿತು ಟ್ವೀಟ್ ಮಾಡಿದ್ದರು. ದಾಖಲೆಯ ವೇಗದಲ್ಲಿ ನಿರ್ಮಾಣವಾಗುತ್ತಿದ್ದು, 8,172 ಕೋಟಿ ರೂಪಾಯಿ ವೆಚ್ಚದ ಕಾರಿಡಾರ್ ಅಕ್ಟೋಬರ್ ವೇಳೆಗೆ ಪೂರ್ಣಗೊಳ್ಳುವ ಸಾಧ್ಯತೆ ಇದೆ ಎಂದು ಹೇಳಿದ್ದರು.

ಚಿರಸ್ಮರಣೆ



ಶಿವಬಸಪ್ಪ

ನಿಮ್ಮ ಪವಿತ್ರವಾದ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ. ನಿಮ್ಮ ಮಾರ್ಗದರ್ಶನದಲ್ಲೇ ನಡೆಯುತ್ತಿರುವ:

ರಾಜಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಸಂಬಂಧಿಕರು. ಜಗದಾಂಬ ಸರ್ವಿಸ್ ಸ್ಟೇಷನ್, ಮೈಸೂರು

ಕಾಣೆಯಾಗಿದ್ದಾರೆ



ಈಶ್ವರ್

55 ವರ್ಷದ ಇವರು ದಿ. 01.06.2022 ರಂದು ನಂ.312, 6ನೇ ಕ್ರಾಸ್, 'ಸಿ' ಲೇಔಟ್, ಹನುಮಂತನಗರ, ಬನ್ನಿಮಂಟಪ, ಮೈಸೂರು ಇಲ್ಲಿಂದ ಕಾಣೆಯಾಗಿದ್ದು, ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ಹತ್ತಿರದ ಪೊಲೀಸ್ ಠಾಣೆ ಅಥವಾ ಮೊಬೈಲ್ ನಂ. 6361379525 ಸಂದೀಪ್ ಇವರನ್ನು ಸಂಪರ್ಕಿಸಲು ಕೋರುತ್ತೇವೆ.

13ನೇ ವರ್ಷದ ಚಿರಸ್ಮರಣೆ



ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರಿ ಸದಾ ನಿಮ್ಮನ್ನು ಸ್ಮರಿಸುತ್ತಿರುವ
ದುಃಖತಪ್ತರು:
ಮಕ್ಕಳು ಮತ್ತು ಕುಟುಂಬ ವರ್ಗದವರು, ಜೈನರಬೀದಿ, ಚಾಮರಾಜನಗರ

ಸಿ.ಎಸ್.ಸುಬ್ಬಣ್ಣ (ನಿವೃತ್ತ ಹಿರಿಯ ಸಹಾಯಕರು, ಕೆ.ಇ.ಬಿ)
ಜನನ: 25.11.1927, ಶಿವೈಕ್ಯ:21.07.2009

ಕರ್ನಾಟಕ ಸರ್ಕಾರ

ಸಾರ್ವಜನಿಕ ಗ್ರಂಥಾಲಯ ಇಲಾಖೆ

ಜಿಲ್ಲಾ ಕೇಂದ್ರ ಗ್ರಂಥಾಲಯ, ಮೈಸೂರು–570009,
ದೂರವಾಣಿ: (0821)2425875, 2425975, ಇ–ಮೇಲ್: ddcclmys@gmail.com

ಸಂಖ್ಯೆ: ಜಿ.ಕೇಗ್ರಂ/ಮೈ/ನಿ.ಕಾ.ವಿ/ದಿ.ಪ.ಸ/2022–23 ದಿನಾಂಕ: 19.07.2022

2022–23 ನೇ ಸಾಲಿಗೆ ರಿಯಾಯಿತಿ ದರದಲ್ಲಿ, ಮೈಸೂರು ಜಿಲ್ಲಾ ಕೇಂದ್ರ ಗ್ರಂಥಾಲಯ ಕಛೇರಿ ಹಾಗೂ ಅಧೀನ ಶಾಖಾ ಗ್ರಂಥಾಯಲಗಳಿಗೆ ದಿನಪತ್ರಿಕೆ ಹಾಗೂ ನಿಯತಕಾಲಿಕೆಗಳನ್ನು ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮರು ಟೆಂಡರ್ ಪ್ರಕಟಣೆಯನ್ನು ಹೊರಡಿಸುವ ಬಗ್ಗೆ.

2022–23 ನೇ ಸಾಲಿಗೆ ರಿಯಾಯಿತಿ ದರದಲ್ಲಿ, ಮೈಸೂರು ಜಿಲ್ಲಾ ಕೇಂದ್ರ ಗ್ರಂಥಾಲಯ ಕಛೇರಿ ಹಾಗೂ ಅಧೀನ ಶಾಖಾ ಗ್ರಂಥಾಯಲಗಳಿಗೆ ದಿನಪತ್ರಿಕೆ ಹಾಗೂ ನಿಯತಕಾಲಿಕೆಗಳನ್ನು ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮರು ಟೆಂಡರ್ ಪ್ರಕಟಣೆಯನ್ನು ಈ ಕೆಳಕಂಡ ವಿವರಗಳೊಂದಿಗೆ ಹೊರಡಿಸಲಾಗಿದೆ.

ಕ್ರ. ಸಂ	ಮರು ಟೆಂಡರ್ ಪ್ರಕಟಣೆ ಹೆಸರು	ಲೆಕ್ಕ ಶೀರ್ಷಿಕೆ	ಅಂದಾಜು ವೆಚ್ಚ	ಇ.ಎಂ.ಡಿ ಮೊತ್ತ	ಆನ್‌ಲೈನ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಆನ್‌ಲೈನ್ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	2022–23 ಸಾಲಿಗೆ ರಿಯಾಯಿತಿ ದರದಲ್ಲಿ, ಮೈಸೂರು ಜಿಲ್ಲಾ ಕೇಂದ್ರ ಗ್ರಂಥಾಲಯ ಕಛೇರಿ ಹಾಗೂ ಅಧೀನ ಹುಣಸೂರು, ಕೆ.ಆರ್.ನಗರ, ಪಿರಿಯಾಪಟ್ಟಣ, ಟಿ.ನರಸೀಪುರ, ನಂಜನಗೂಡು, ಹೆಚ್.ಡಿ.ಕೋಟೆ, ಬನ್ನೂರು, ಹಾಗೂ ಸರಗೂರು ಮತ್ತು ಅಲೆಮಾರಿ ಪ್ರದೇಶ/ಕೊಳಚೆ ಪ್ರದೇಶ ಗ್ರಂಥಾಲಯಗಳು ಹಾಗೂ 13 ಸೇವಾ ಕೇಂದ್ರಗಳಿಗೆ ದಿನಪತ್ರಿಕೆ ಹಾಗೂ ನಿಯತಕಾಲಿಕೆಗಳನ್ನು ಸರಬರಾಜು ಮಾಡುವ ಬಗ್ಗೆ.	ಜಿಲ್ಲಾ ಗ್ರಂಥಾಲಯ ಪ್ರಾಧಿಕಾರ ನಿಧಿ	ರೂ. 6,00,000.00	ರೂ.12,000 (ರೂ ಹನ್ನೆರಡು ಸಾವಿರ ಮಾತ್ರ)	20.08.2022 ಸಂಜೆ 5.00 ಗಂಟೆಯವರೆಗೆ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ 24.08.2022 ಬೆಳಗ್ಗೆ 11.00 ಗಂಟೆಗೆ ಆರ್ಥಿಕ ಬಿಡ್ ತೆರೆಯುವ ದಿನಾಂಕ 25.08.2022 ಸಂಜೆ 4.00 ಗಂಟೆಗೆ

ನೋಂದಾಯಿತ ಸಂಸ್ಥೆಗಳು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಖಾಂತರ ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಎಲ್ಲಾ ಅಗತ್ಯ ದಾಖಲೆಗಳೊಂದಿಗೆ ಕೊನೆಯ ದಿನಾಂಕ ಮತ್ತು ಸಮಯದೊಳಗೆ ವೆಬ್‌ಸೈಟ್ ವಿಳಾಸ http://eproc.karnataka.gov.in ರ ಮುಖಾಂತರ ಅಪ್‌ಲೋಡ್ ಮಾಡುವುದು.

ಸಹಿ/–ಉಪನಿರ್ದೇಶಕರು
ಜಿಲ್ಲಾ ಕೇಂದ್ರ ಗ್ರಂಥಾಲಯ
ಮೈಸೂರು

ವಾಸಾಸಂಇ/ಮೈಸೂರು/ಶಿರಡಿ ಸಾಯಿ/268/2022–23

ಸಾರ್ವಜನಿಕ ತಿಳುವಳಿಕೆ ಪತ್ರ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಈ ಕೆಳಗೆ ಕಾಣಿಸಿರುವ ಅನುಸೂಚಿ ಸ್ವತ್ತನ್ನು ಅನುಸೂಚಿ ಸ್ವತ್ತಿನ ಮಾಲೀಕರಾದ ಮೈಸೂರು ನಗರ ಶ್ರೀರಾಂಪುರ 2ನೇ ಹಂತ ಬಿಮೆಲ್ ಲೇಔಟ್ 9ನೇ ಬ್ಲಾಕ್ ನಂ: 01 ರಲ್ಲಿ, ಶ್ರೀ ಮಹಿಪಾಲ್ ಜೈನ್ ಮತ್ತು ಶ್ರೀ ಸಿ.ಎನ್.ಮಂಜೇಗೌಡ ರವರಿಂದ ಅನುಸೂಚಿ ಸ್ವತ್ತನ್ನು ಜಂಟಿ ಅಭಿವೃದ್ಧಿ ಮಾಡುವ ಈರಾದೆಯಿಂದ ಜಂಟಿ ಅಭಿವೃದ್ಧಿ ಕರಾರನ್ನು ಮಾಡಿಕೊಳ್ಳಲು ಮುಂದಾಗಿರುವುದು ಸರಿಯಷ್ಟೆ. ಅನುಸೂಚಿ ಸ್ವತ್ತಿನ ಸಂಬಂಧ ಯಾರಾದರು ಅಧಿಕಾರ ಪತ್ರ ಹೊಂದಿದ್ದಲ್ಲಿ ಅಥವಾ ಯಾರಿಗಾದರು, ಹಕ್ಕು, ಆಸಕ್ತಿ, ಕ್ಲೈಮ್ ಆಧಾರ, ಸಾಲ ಬಾಕಿ, ಇತರ ತಂಟೆ ತಕರಾರು ಇದ್ದಲ್ಲಿ, ಅವರು ಖುದ್ದಾಗಿ ಸದರಿ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 15 (ಹದಿನೈದು) ದಿನಗಳ ಒಳಗೆ ಕೆಳಕಂಡ ನನ್ನ ಕಛೇರಿಯಲ್ಲಿ ಸಂಪರ್ಕಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ಸ್ವತ್ತಿನ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ, ಕ್ಲೈಮ್, ಆಧಾರ, ಸಾಲ ಬಾಕಿ, ಇರುವುದಿಲ್ಲ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸಂಬಂಧ ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು.

ಅನುಸೂಚಿ ಸ್ವತ್ತಿನ ವಿವರ: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಧನಗಳ್ಳಿ ಗ್ರಾಮದ ಸರ್ವೆ ಸಂಖ್ಯೆ: 81 ರಲ್ಲಿ 00–30 ಮೂರು ಎಕರೆ ಮೂವತ್ತು ಗುಂಟೆ ಜಮೀನಿಗೆ ಚಕ್ಕುಬಂದಿ ಪೂರ್ವಕ್ಕೆ : ಸರ್ವೆ ನಂ. 80, ಪಶ್ಚಿಮಕ್ಕೆ : ಸರ್ವೆ ನಂ. 82, ಉತ್ತರಕ್ಕೆ : ಮೈಸೂರು – ಮಾನಂದವಾಡಿ ರಸ್ತೆ, ದಕ್ಷಿಣಕ್ಕೆ : ಖಾಸಗಿ ಸ್ವತ್ತು.

ಸಹಿ/– ಚಂದ್ರಶೇಖರ್.ಎಚ್.ಎನ್
ವಕೀಲರು, ಕೆಎಆರ್ : 427/01.
ನಂ 75/ಬಿ, 1ನೇ ಮಹಡಿ, 5ನೇ ಮುಖ್ಯರಸ್ತೆ, ಕುವೆಂಪುನಗರ, ಮೈಸೂರು. ಮೊ. 9740399992

